# ವೇದಾಂತಪ್ರವೇಶಿಕೆ

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1983

# ಅಧ್ಯಾತ್ಮಪ್ರಕಾಶಕಾರ್ಯಾಲಯ,

## ಹೊಳೆನರಸೀಪುರ.

(ಸ್ಥಾಪಿತವಾದದ್ದು ೧೯೨೦)

ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

**ಸ್ಥಾಪಿಸಿದ ಈ ಸಂಸ್ಥೆಯು**

೧. ಹನ್ನೊಂದು ಜನ ಸಭಿಕರಿಂದಾದ ಕಾರ್ಯಕಾರಿಸಮಿತಿಯ ವ್ಯವಸ್ಥೆಯಲ್ಲಿರುವದು.

೨. ಗ್ರಂಥಕಾಲಕ್ಷೇಪ, ಉಪನ್ಯಾಸಗಳು, ಪುರಾಣಶ್ರವಣ, ಭಜನೆ, ಅನುಷ್ಠಾನ, ಉತ್ಸವಗಳು- ಮುಂತಾದವುಗಳ ಮೂಲಕ ಅಧ್ಯಾತ್ಮವಿದ್ಯೆಯಲ್ಲಿ ಜನರಿಗೆ ಆದರವನ್ನುಂಟುಮಾಡುತ್ತಿರುವದು.

೩. ಕನ್ನಡ, ಸಂಸ್ಕೃತ, ಇಂಗ್ಲಿಷು- ಭಾಷೆಗಳಲ್ಲಿ ಒಂದುನೂರಎಂಭತ್ತಕ್ಕೂ ಮೇಲ್ಪಟ್ಟ ಗ್ರಂಥಗಳನ್ನು ಹೊರಕ್ಕೆ ತಂದಿರುವದು.

೪. ಒಂದು ಅಧ್ಯಾತ್ಮಪುಸ್ತಕಭಂಡಾರವನ್ನೂ ವಾಚನಾಲಯವನ್ನು ಇಟ್ಟುಕೊಂಡಿರುವದು.

೫. 'ಅಧ್ಯಾತ್ಮಪ್ರಕಾಶ'ಮಾಸಪತ್ರಿಕೆಯನ್ನು ಪ್ರಕಟಿಸುತ್ತಿರುವದು.

೬. 'ಅಧ್ಯಾತ್ಮಪ್ರಕಾಶಮುದ್ರಣಾಲಯ'ವೊಂದನ್ನು ಇಟ್ಟುಕೊಂಡಿರುವದು.

೭. ಶ್ರೀ ದಿಗ್ವಿಜಯರಾಮರ ದೇವಾಲಯ ಮತ್ತು ಗುರುಮಂದಿರಗಳನ್ನು ಸ್ಥಾಪಿಸಿ ನಿತ್ಯಾರಾಧನಾದಿಗಳನ್ನು ನಡೆಯಿಸುತ್ತಿರುವದು.

# ವೇದಾಂತಪ್ರವೇಶಿಕೆ

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1983

# ಬಿನ್ನಹ

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ತಮ್ಮ ಪೂರ್ವಾಶ್ರಮದಲ್ಲಿ ಬರೆದಿದ್ದ ಈ ಪ್ರಕರಣವು ಓದುಗರಲ್ಲಿ ವೇದಾಂತವಿಚಾರದ ಹಸಿವನ್ನುಂಟುಮಾಡುವದಕ್ಕೆ ತಕ್ಕದ್ದಾಗಿದೆ ಎಂಬುದು ಅನುಭವದಿಂದ ಕಂಡುಬಂದಿದೆ. ಮೂಲಗ್ರಂಥವು ನಿಜವಾಗಿ ಶ್ರೀಶಂಕರಭಗವತ್ಪಾದರೇ ಬರೆದವೋ, ಅಲ್ಲವೋ-ಎಂಬ ಬಗ್ಗೆ ಐತಿಹಾಸಿಕರ ದೃಷ್ಟಿಯಿಂದ ವಾದಗ್ರಸ್ತವಾಗಿರಬಹುದು; ಆದರೆ ಶ್ರೀಗಳವರು ತಮ್ಮ ವ್ಯಾಖ್ಯಾನದಲ್ಲಿ ಪ್ರಸ್ಥಾನತ್ರಯದ ಭಾಷ್ಯಗಳನ್ನೇ ಆಧಾರವಾಗಿಟ್ಟುಕೊಂಡು ವಿವರಣೆಯನ್ನು ಬರೆದಿರುವದರಿಂದಲೂ ಮುಖ್ಯವಾಗಿ ಅವಸ್ಥಾತ್ರಯಪ್ರಕ್ರಿಯೆಯ ಮರ್ಮವನ್ನು ವಿಚಾರಪ್ರಧಾನರಾದ ಓದುಗರಿಗೆ ಮನಗಾಣಿಸುವದಕ್ಕೆ ತಕ್ಕಂತೆ ಸಂಭಾಷಣೆಯ ರೂಪದಲ್ಲಿ ಜೋಡಿಸಿರುವದರಿಂದಲೂ ಈ ಗ್ರಂಥವು ಚಿರಕಾಲ ಜಿಜ್ಞಾಸುಗಳ ಆದರಕ್ಕೆ ಪಾತ್ರವಾಗಿ ಬಾಳುವದೆಂಬ ಬಗ್ಗೆ ಯಾವ ಸಂಶಯವೂ ಇಲ್ಲ.

ಈ ಪುಸ್ತಕದ ಪ್ರತಿಗಳೆಲ್ಲ ಮಾರಾಟವಾಗಿ ಮುಗಿದುಹೋದದ್ದರಿಂದ ಮತ್ತೆ ಅಚ್ಚಿನ ತಪ್ಪುಗಳನ್ನೆಲ್ಲ ತಿದ್ದಿ ಈ ಮೂರನೆಯ ಸಂಸ್ಕರಣವನ್ನು ಹೊರಕ್ಕೆ ತಂದಿರುತ್ತೇವೆ. ಶ್ರೀಗಳವರು ಬರೆದು ಅನುಗ್ರಹಿಸಿರುವ ಅಧ್ಯಾತ್ಮ ಗ್ರಂಥಗಳನ್ನೆಲ್ಲ ಓದುಗರ ದೃಷ್ಟಿಯಿಂದ ವರ್ಗೀಕರಿಸಿ, ವೇದಾಂತವಿಚಾರವನ್ನು ಹೊಸದಾಗಿ ಪ್ರಾರಂಭಿಸಲಿರುವ ಪ್ರಾಥಮಿಕ ಓದುಗರಿಗೆ ಈ ಪುಸ್ತಕವು ಅತ್ಯವಶ್ಯವೆಂದು ಕಂಡುಬಂದದ್ದರಿಂದ ಮತ್ತೆ ಪ್ರಕಾಶಗೊಳಿಸಲಾಗಿದೆ. ಇದು ಮೊದಲಿಗಿಂತಲೂ ಹೆಚ್ಚಾಗಿ ವೇದಾಂತಪ್ರೇಮಿಗಳ ಅನುರಾಗವನ್ನು ಸಂಪಾದಿಸಿಕೊಳ್ಳುವದೆಂದು ನಮಗೆ ಭರವಸೆಯಿದೆ.

ಇತಿ–

ಹೊಳೆನರಸೀಪುರ,
1-11-1983.

**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,**
ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

# ಪೀಠಿಕೆ

'ವೇದಾಂತಬಾಲಬೋಧೆ'ಯಲ್ಲಿ ತಿಳಿಸಿರುವ ಮುಖ್ಯವಿಷಯಗಳನ್ನು ಇದರಲ್ಲಿ ಸ್ವಲ್ಪಮಟ್ಟಿಗೆ ಬೆಳೆಯಿಸಿ ಬರೆದಿರುತ್ತದೆ. 'ನಮ್ಮೆಲ್ಲರ ಪರಮಾರ್ಥವಾದ ಆತ್ಮನು ಅದ್ವಿತೀಯನಾದ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ ಶಿವನೇ, ನಾವು ನಿಜವಾಗಿ ಸಂಸಾರಿಗಳಲ್ಲ' ಎಂಬುದು ಈ ಐದು ಶ್ಲೋಕಗಳಲ್ಲಿ ತಿಳಿಸಿರುವ ವಿಷಯವು. ಮೊದಲನೆಯ ಶ್ಲೋಕದಲ್ಲಿ ದೇಹಾದಿಗಳು ಅನಾತ್ಮವೆಂಬುದನ್ನು ಹೇಳಿದೆ; ಮುಂದಿನ ಮೂರು ಶ್ಲೋಕಗಳಲ್ಲಿ ನಾವು ನಿಜವಾಗಿ ಸಂಸಾರಿಗಳಲ್ಲವಾದರೂ ಸುಖದುಃಖವನ್ನನುಭವಿಸುತ್ತಿರುವಂತೆಯೂ ಪರಮೇಶ್ವರನಿಗಿಂತ ಭಿನ್ನರಾಗಿರುವಂತೆಯೂ ಭ್ರಾಂತಿಯಿಂದ ತೋರುತ್ತಿರುವದೆಂಬುದನ್ನು ಹಗ್ಗದ ಹಾವು, ಕನಸು, ಕನ್ನಡಿಯಲ್ಲಿ ತೋರುವ ಪ್ರತಿಬಿಂಬ-ಈ ಮೂರು ದೃಷ್ಟಾಂತಗಳಿಂದ ಮನಗಾಣಿಸಿರುತ್ತದೆ. ಕೊನೆಯ ಶ್ಲೋಕದಲ್ಲಿ ನಮ್ಮ ಸ್ವರೂಪವು ನಿತ್ಯಮುಕ್ತವಾಗಿ ಶುದ್ಧವೂ ಪೂರ್ಣವೂ ಆಗಿರುವ ಚೈತನ್ಯಸ್ವರೂಪವೇ ಎಂಬುದನ್ನು ತಿಳಿಸಿರುತ್ತದೆ. ಈ ಗ್ರಂಥದಲ್ಲಿ ಶಿವನೆಂದರೆ ಅವಸ್ಥಾತ್ರಯಾತೀತವಾಗಿ ಸರ್ವರ ಆತ್ಮನಾಗಿರುವ ಪರಬ್ರಹ್ಮವೆಂದು ಅರ್ಥವೇ ಹೊರತು ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನೆಂಬರ್ಥವಲ್ಲವೆಂಬುದನ್ನು ತಿಳಿಸಬೇಕಾದದ್ದೇ ಇಲ್ಲ. ಓದುಗರು ಈ ಪುಸ್ತಕದಲ್ಲಿರುವ ಪ್ರಶ್ನೋತ್ತರಗಳನ್ನು ಚೆನ್ನಾಗಿ ಮತ್ತೆ ಮತ್ತೆ ಮನನಮಾಡಿದಂತೆಲ್ಲ ವ್ಯಾವಹಾರಿಕಬುದ್ಧಿಯಲ್ಲಿ ಉಂಟಾಗಬಹುದಾದ ಅನೇಕಸಂಶಯಗಳನ್ನು ನೀಗಿಕೊಂಡು ಆಧ್ಯಾತ್ಮಮಾರ್ಗದಲ್ಲಿ ಮುಂದುವರೆಯುವದರಲ್ಲಿ ಸಂಶಯವಿಲ್ಲ.

—**ಗ್ರಂಥಕರ್ತ.**

|| ಓಂ ||

# ಅದ್ವೈತಪಂಚರತ್ನಮ್

ನಾಹಂ ದೇಹೋ ನೇಂದ್ರಿಯಾಣ್ಯನ್ತರಂಗಂ
ನಾಹಂಕಾರಃ ಪ್ರಾಣವರ್ಗೋ ನ ಬುದ್ಧಿಃ ।
ದಾರಾಪತ್ಯಕ್ಷೇತ್ರ ವಿತ್ತಾದಿದೂರಃ
ಸಾಕ್ಷೀ ನಿತ್ಯಃ ಪ್ರತ್ಯಗಾತ್ಮಾ ಶಿವೋಽಹಮ್ || ೧ ||

ರಜ್ಜ್ವಜ್ಞಾನಾದ್ಭಾತಿ ರಜ್ಜೌ ಯಥಾಹಿಃ
ಸ್ವಾತ್ಮಾಜ್ಞಾನಾದಾತ್ಮನೋ ಜೀವಭಾವಃ ।
ಆಪ್ತೋಕ್ತ್ಯಾ ಹಿ ಭ್ರಾಂತಿನಾಶೇ ಸ ರಜ್ಜು-
ರ್ಜೀವೋ ನಾಹಂ ದೇಶಿಕೋಕ್ತ್ಯಾ ಶಿವೋಽಹಮ್ || ೨ ||

ಆಭಾತೀದಂ ವಿಶ್ವಮಾತ್ಮನ್ಯಸತ್ಯಂ
ಸತ್ಯಜ್ಞಾನಾನಂದರೂಪೇ ವಿಮೋಹಾತ್ ।
ನಿದ್ರಾಮೋಹಾತ್ ಸ್ವಪ್ನವತ್ ತನ್ನ ಸತ್ಯಂ
ಶುದ್ಧಃ ಪೂರ್ಣೋ ನಿತ್ಯ ಏಕಃ ಶಿವೋಽಹಮ್ || ೩ ||

ಮತ್ತೋ ನಾನ್ಯತ್ಕಿಂಚಿದತ್ರಾಸ್ತಿ ವಿಶ್ವಂ
ಸತ್ಯಂ ಬಾಹ್ಯಂ ವಸ್ತು ಮಾಯೋಪಕ್ಲೃಪ್ತಂ ।
ಆದರ್ಶಾನ್ತರ್ಭಾಸಮಾನೇನ ತುಲ್ಯಂ
ಮಯ್ಯದ್ವೈತೇ ಭಾತಿ ತಸ್ಮಾಚ್ಛಿವೋಽಹಮ್ || ೪ ||

ನಾಹಂ ಜಾತೋ ನ ಪ್ರವೃದ್ಧೋ ನ ನಷ್ಟೋ
ದೇಹಸ್ಯೋಕ್ತಾಃ ಪ್ರಾಕೃತಾಃ ಸರ್ವಧರ್ಮಾಃ ।
ಕರ್ತೃತ್ವಾದಿಶ್ಚಿನ್ಮಯಸ್ಯಾಸ್ತಿ ನಾಹಂ-
ಕಾರಸ್ಯೈವ ಹ್ಯಾತ್ಮನೋ ಮೇ ಶಿವೋಽಹಮ್ || ೫ ||

ಇತಿ ಶ್ರೀಶಂಕರಭಗವತ್ಪಾದಾಚಾರ್ಯವಿರಚಿತಮದ್ವೈತಪಂಚರತ್ನಂ
ಸಂಪೂರ್ಣಮ್

# ವಿಷಯಾನುಕ್ರಮಣಿಕೆ

( ಸಂಖ್ಯೆಗಳು ಪುಟಗಳನ್ನು ಸೂಚಿಸುವವು )


## ೧. ಆತ್ಮಾನಾತ್ಮವಿವೇಕ

ಅನುಬಂಧ (೧)- ನಾನು ದೇಹವಲ್ಲ, ಇಂದ್ರಿಯಗಳಲ್ಲ (೫)- ನಾನು ಮನಸ್ಸಲ್ಲ, ಅಹಂಕಾರವಲ್ಲ (೯)-ನಾನು ಬುದ್ಧಿಯಲ್ಲ (೧೧)-ನಾನು ಪ್ರಾಣಗಳ ಗುಂಪಲ್ಲ (೧೨)- ನಾನು ಹೆಂಡಿರುಮಕ್ಕಳು ಹೊಲಹಣ ಮುಂತಾದವುಗಳಿಗೆ ದೂರನಾಗಿರುವವನು (೧೪)-ನಾನು ಸಾಕ್ಷಿಯು, ನಿತ್ಯನು, ಪ್ರತ್ಯಗಾತ್ಮನು (೧೫)-ನಾನು ಶಿವನು (೧೯). ೧-೨೦

## ೨. ಜೀವತ್ವಭ್ರಾಂತಿಯ ಪರಿಹಾರ

ಹಗ್ಗದ ಹಾವಿನ ದೃಷ್ಟಾಂತ (೨೨)- ಆತ್ಮನನ್ನು ಅರಿತುಕೊಳ್ಳದ್ದರಿಂದ ಜೀವತ್ವವು ತೋರುತ್ತಿದೆ (೨೬)- ಸದ್ಗುರುವಿನ ಉಪದೇಶದಿಂದ ಶಿವಸ್ವರೂಪವು ತಿಳಿಯುವದು (೨೮). ೨೧-೩೧

## ೩. ಜಗದ್ಭ್ರಾಂತಿಯ ಪರಿಹಾರ

ಹಗ್ಗದ ಹಾವಿನ ದೃಷ್ಟಾಂತದ ವಿಷಯದಲ್ಲಿ ಶಂಕೆ (೩೨)- ಪ್ರಪಂಚವು ತಪ್ಪು ತಿಳಿವಳಿಕೆಯಿಂದ ಆತ್ಮನಲ್ಲಿಯೇ ತೋರುವದು (೩೩)- ಆತ್ಮನು ಸಚ್ಚಿದಾನಂದ ಸ್ವರೂಪನು (೩೫)- ಪ್ರಪಂಚದ ತೋರಿಕೆಯು ಕನಸಿನಂತೆ (೩೮)-ಪ್ರಪಂಚವು ಸತ್ಯವಲ್ಲ(೩೯)- ನಾನು ಶುದ್ಧನು, ಪೂರ್ಣನು, ನಿತ್ಯನು, ಏಕನು (೪೩)- ನಾನು ಶಿವನು (೪೪)-. ೩೧-೪೪

## ೪. ದ್ವೈತಸ್ಥಿರತ್ವಭ್ರಾಂತಿಯ ಪರಿಹಾರ

ನನಗಿಂತ ಬೇರೆಯಾಗಿರುವ ಪ್ರಪಂಚವಿಲ್ಲ (೪೬)- ಹೊರಗಿನ ವಸ್ತು ಮಾಯಿಕ (೫೦)- ಪ್ರಪಂಚವು ಕನ್ನಡಿಯ ಪ್ರತಿಬಿಂಬದಂತೆ ಅದ್ವೈತಾತ್ಮನಲ್ಲಿ ತೋರುತ್ತಿರುವದು (೫೪)- ಆದ್ದರಿಂದ ನಾನು ಶಿವನು (೫೭). ೪೫-೫೮

## ೫. ವೇದಾಂತಜ್ಞಾನದ ಪ್ರಯೋಜನ

ಪ್ರಾಕೃತವಾದ ಧರ್ಮಗಳೆಲ್ಲ ದೇಹದವು (೬೧)- ಕರ್ತೃತ್ವಾದಿಗಳು ಅಹಂಕಾರದ ಧರ್ಮಗಳು (೬೨)- ಆದ್ದರಿಂದ ನಾನು ಶಿವನು (೬೫) ೫೯-೬೬

ಶಬ್ದಾನುಕ್ರಮಣಿಕೆ ೬೭

ಓಂ ||

# ವೇದಾಂತಪ್ರವೇಶಿ:

## ೧. ಆತ್ಮಾನಾತ್ಮವಿವೇಕ

### ಅನುಬಂಧ

ವೇದಾಂತವು ಲೋಕಾಂತರದಲ್ಲಾಗುವ ಫಲವನ್ನು ಹೇಳದೆ ಈ ಜನ್ಮದಲ್ಲಿಯೇ ಪಡೆದುಕೊಳ್ಳಬಹುದಾದ ಅನುಭವವನ್ನು ಕುರಿತ ಶಾಸ್ತ್ರವಾದರೂ ಅನೇಕರಿಗೆ ಇದರಲ್ಲಿ ಮನಸ್ಸು ಹೋಗುವದಿಲ್ಲ; ಇದಕ್ಕೆ ಕಾರಣವೇನೆಂದರೆ ಅನೇಕರಿಗೆ ವಿಚಾರಪ್ರಧಾನವಾದ ಗ್ರಂಥಗಳು ಸೊಗಸುವದಿಲ್ಲ; ವಿಚಾರಕ್ಕೆ ಮನವೊಲಿದಿರುವವರಲ್ಲಿಕೂಡ ಬಹುಜನರಿಗೆ ವೇದಾಂತದಲ್ಲಿ ಹೇಳಿರುವ ಪ್ರಮುಖವಿಷಯಗಳು ಯಾವವು, ಅವುಗಳನ್ನು ಬೆಳಿಸುವದಕ್ಕೆಂದು ಹೇಳಿರುವ ಪುಡಿವಿಷಯಗಳು ಯಾವವು ?- ಎಂಬ ವಿವೇಕವುಂಟಾಗಿರುವದಿಲ್ಲ. ಯಾರಿಗೆ ವಿಚಾರದಲ್ಲಿ ರುಚಿಯೇ ಇಲ್ಲವೋ ಅಂಥವರು ವೇದಾಂತಕ್ಕೆ ಅಧಿಕಾರಿಗಳೇ ಅಲ್ಲವಾದ್ದರಿಂದ ಅವರ ಮಾತು ನಮಗೆ ಪ್ರಕೃತವಲ್ಲ. ಆದರೆ ಯಾರು ನಿಜವಾಗಿಯೂ ವೇದಾಂತದ ತತ್ತ್ವವನ್ನು ತಿಳಿದುಕೊಳ್ಳಬೇಕೆಂದೂ ಅನುಭವಕ್ಕೆ ಅಳವಡಿಸಿಕೊಳ್ಳಬೇಕೆಂದೂ ಹವಣಿಸುತ್ತಿರುವರೋ ಅಂಥವರಿಗೆ ವೇದಾಂತದ ಪ್ರಧಾನವಿಷಯಗಳನ್ನು ಆರಿಸಿ ತಿಳಿಸುವ ಒಂದು ಪ್ರಕರಣವು ಅವಶ್ಯವಾಗಿದೆಯೆಂಬುದು ಸ್ಪಷ್ಟವಾಗಿರುತ್ತದೆ. ಈ ಆವಶ್ಯಕತೆಯನ್ನು ಪರಿಪೂರ್ತಿಗೊಳಿಸುವ ಉದ್ದೇಶದಿಂದ ಶ್ರೀ ಶಂಕರಭಗವತ್ಪಾದರವರು **"ಅದ್ವೈತ ಪಂಚರತ್ನ"** ವೆಂಬ ಒಂದು ಚಿಕ್ಕ ಪ್ರಕರಣವನ್ನು ಬರೆದಿರುತ್ತಾರೆ. ಅದರ ವಿವರಣೆಯ ರೂಪವಾಗಿ ಈ ಗ್ರಂಥವನ್ನು ರಚಿಸಿರುತ್ತದೆ.

ವೇದಾಂತದ ಪ್ರಧಾನವಿಷಯಗಳು ಮೂರು : ಪರಮಾರ್ಥಸತ್ಯವು ತನಗೆರಡನೆಯದಿಲ್ಲದ ಬ್ರಹ್ಮವೊಂದೇ ; ಅದರಲ್ಲಿ ಜೀವತ್ವವೂ ಜಗತ್ತೂ ಕಲ್ಪಿತವಾಗಿರುತ್ತವೆ ; ಪರಮಾರ್ಥಸತ್ಯವಾದ ಬ್ರಹ್ಮವು ನಮ್ಮೆಗಳೆಲ್ಲರ ಆತ್ಮನೇ ಆಗಿರುತ್ತದೆ- ಎಂಬಿವೇ ಆ ವಿಷಯಗಳು. ಈ ಮೂರು ವಿಷಯಗಳನ್ನೂ ಇಲ್ಲಿ ತಿಳಿಸಿಕೊಟ್ಟಿರುತ್ತದೆ.

ಈ ವಿಷಯಗಳನ್ನು ಅನುಭವದಲ್ಲಿ ಕಂಡುಕೊಳ್ಳಬೇಕಾದರೆ ನಾಲ್ಕು ಸಾಧನಸಂಪತ್ತಿಗಳು ಅತ್ಯವಶ್ಯವೆಂದು ತಿಳಿದವರು ಹೇಳುವರು. ನಿತ್ಯಾನಿತ್ಯ ವಿವೇಕ, ಇಹಾಮುತ್ರಫಲಭೋಗವಿರಾಗ, ಶಮಾದಿಷಟ್ಕಸಂಪತ್ತಿ, ಮುಮು ಕ್ಷುತ್ವ– ಇವೇ ಆ ನಾಲ್ಕು ಸಾಧನಗಳು. ಅನಿತ್ಯವಾಗಿರುವ ಎಂದರೆ ಕಾಲವಶ ವಾಗಿರುವ ವಸ್ತುಗಳ ಸ್ವಭಾವವು ಯಾವದು ? ನಿತ್ಯವಾಗಿರುವ ಎಂದರೆ– ಕಾಲವನ್ನು ಮೀರಿರುವ ವಸ್ತುವಿದ್ದರೆ ಅದು ಹೇಗಿರುವದು ?– ಎಂಬುದನ್ನು ವಿಂಗಡಿಸಿ ತಿಳಿಯಬಲ್ಲ ಶಕ್ತಿಯು **ನಿತ್ಯಾನಿತ್ಯವಿವೇಕವು**. ಈ ಲೋಕದಲ್ಲಿ ಇಂಥ ಸುಖವನ್ನು ಭೋಗಿಸಬೇಕು, ಪರಲೋಕದಲ್ಲಿ ಇಂಥ ಸುಖವನ್ನು ಭೋಗಿಸಬೇಕು– ಎಂಬ ಹಂಬಲಿಕೆಯಿಲ್ಲದಿರುವದೇ **ಇಹಾಮುತ್ರಫಲ ಭೋಗವಿರಾಗವು**. ಯಾವನಿಗೆ ಭೋಗದಲ್ಲಿ ಮನಸ್ಸು ನೆಟ್ಟಿರುವದೋ ಅವನು ಯಾವಾಗಲೂ ಇಂದ್ರಿಯಾರ್ಥಗಳನ್ನು ಕುರಿತು ಚಿಂತಿಸುತ್ತಿರುವನೇ ಹೊರತು ಪರಮಾರ್ಥವೇನು ?–ಎಂಬುದನ್ನು ವಿಚಾರಮಾಡಲಾರನು. ಆದ್ದ ರಿಂದ ಈ ವಿರಾಗವು ವಿಚಾರಮಾಡುವವರಿಗೆ ಅತ್ಯವಶ್ಯವಾಗಿದೆ. ಇನ್ನು ಜಿಜ್ಞಾಸುವಿನ ಮನಸ್ಸಿನಲ್ಲಿರಬೇಕಾದ ಆರು ಗುಣಗಳುಂಟು. ಶಮ, ದಮ, ಉಪರತಿ, ಸಮಾಧಾನ, ಶ್ರದ್ಧೆ, ತಿತಿಕ್ಷೆ–ಇವೇ ಆ ಆರು ಗುಣಗಳು ಇವು ಗಳಿರುವದನ್ನು **ಶಮಾದಿಷಟ್ಕಸಂಪತ್ತಿ**ಯೆಂದು ಕರೆಯುತ್ತಾರೆ. ಈ ಆರೂ ಇದ್ದವನಿಗೆ ಮನಸ್ಸು ತಕ್ಕ ಸಂಸ್ಕಾರವನ್ನು ಹೊಂದಿ ವಿಚಾರಕ್ಕೆ ಬೇಕಾದ ಸಾಮರ್ಥ್ಯವನ್ನು ಪಡೆದುಕೊಂಡಿರುತ್ತದೆ. ಇವು ಮೂರರ ಜೊತೆಗೆ **ಮುಮು ಕ್ಷುತ್ವ**ವೆಂಬ ಸಾಧನಸಂಪತ್ತಿಯೂ ಇರಬೇಕು. ಈಗ ನಾವಿರುವದು ಪರ ಮಾರ್ಥ ಸುಖದ ಸ್ಥಿತಿಯಲ್ಲ, ಎಲ್ಲಕ್ಕಿಂತಲೂ ಹೆಚ್ಚಿನದಾದ ಸುಖವೊಂದು ಮಾನವನಿಗೆ ಸಿಕ್ಕುವ ಸಂಭವವಿದೆ– ಎಂದು ಶಾಸ್ತ್ರಗಳಿಂದಲೂ ದೊಡ್ಡವ ರಿಂದಲೂ ನಾವು ಕೇಳಿರುತ್ತೇವೆ. ಈ ಮಾತಿನಲ್ಲಿ ನಿಜವಾದ ಭರವಸೆ ಹುಟ್ಟಿ ಈಗಿನ ಇಕ್ಕಟ್ಟಿನ ಸ್ಥಿತಿಯಿಂದ ಎಂದಿಗೆ ಪಾರಾಗಿ ಆ ನಿರತಿಶಯಸುಖವನ್ನು ಪಡೆದೇನು ?– ಎಂದು ಹಾತುವರಿಯುತ್ತಿರುವದೇ **ಮುಮುಕ್ಷುತ್ವವು**; ಅದು ಯಾರ ಮನಸ್ಸನ್ನು ಹಿಡಿದುಕೊಂಡಿರುವದೋ ಅವರು 'ಅಂಥ ಸುಖಸ್ಥಾನವು ಯಾವದು ? ಅದು ಸಿಕ್ಕುವದಕ್ಕೆ ಏನು ಮಾಡಬೇಕು ?' – ಎಂದು ಅವಶ್ಯ ವಾಗಿ ವಿಚಾರಮಾಡುವರು. ಪರಮಾರ್ಥತತ್ತ್ವವೇ ಸುಖದ ಬುಗ್ಗೆಯು, ಅದು

ನಮ್ಮ ಆತ್ಮನೇ ಆಗಿದೆ– ಎಂಬ ಉಪದೇಶವನ್ನು ಕೇಳಿ ಮುಮುಕ್ಷುಗಳಿಗೆ ಮೈಯಲ್ಲಿ ರೋಮಾಂಚವಾಗುತ್ತದೆ.• ಅವರು ಒಂದಿಷ್ಟೂ ಪಾಲುಮಾರಿಕೆಯಿಲ್ಲದೆ ಪರಮಾರ್ಥವಿಚಾರದಲ್ಲಿ ತತ್ಪರರಾಗುತ್ತಾರೆ; ಆ ವಿಚಾರಕ್ಕೆ ಬೇಕಾದ ವಿವೇಕಾದಿಗಳನ್ನೂ ಸಂಪಾದಿಸಿಕೊಳ್ಳುತ್ತಾರೆ. ಅಂತೂ ಪರಮಾರ್ಥವಿಚಾರಕ್ಕೆ ಮೊದಲೇ ಇಲ್ಲಿ ಹೇಳಿರುವ ನಾಲ್ಕು ಸಾಧನಗಳೂ ಉಂಟಾಗಿರಬೇಕು. ಅಂಥವರಿಗೆ ಮಾತ್ರ ವಿಚಾರವು ಪೂರ್ಣಫಲಕಾರಿಯಾಗುತ್ತದೆ. ಸಾಧನಸಂಪತ್ತಿಯು ಇಲ್ಲದವರಿಗೆ ಈ ಗ್ರಂಥದಿಂದ ಯಾವ ಪ್ರಯೋಜನವೂ ಇಲ್ಲವೆಂದು ಇದರ ಅರ್ಥವಲ್ಲ. ಅವರಿಗೂ ವೇದಾಂತದಲ್ಲಿರುವ ವಿಷಯಗಳನ್ನು ತಿಳಿದುಕೊಂಡು ನಿಜವಾದ ಮುಮುಕ್ಷುತೆಯನ್ನು ಸಂಪಾದಿಸಿಕೊಳ್ಳುವ ಇಚ್ಛೆಯು ಇದರಿಂದ ಉಂಟಾಗುವದಕ್ಕೆ ಅವಕಾಶವಿರುತ್ತದೆ.

ಈ ಸಾಧನಚತುಷ್ಟಯವನ್ನು ಆಚಾರ್ಯರವರು ಈ ಪ್ರಕರಣದಲ್ಲಿ ಸೂಚಿಸಿರುವದಿಲ್ಲ.[1] ಏಕೆಂದರೆ ಈ ಗ್ರಂಥವು ಸಾಧನಪ್ರಧಾನವಾದದ್ದಲ್ಲ, ಸಿದ್ಧಾಂತಪ್ರಧಾನವಾದದ್ದು. ಸಾಧನಚತುಷ್ಟಯವನ್ನಳವಡಿಸಿಕೊಂಡಿರುವವರು ಮೊದಲು ಮಾಡಬೇಕಾಗುವ ಆತ್ಮಾನಾತ್ಮವಿವೇಕವೆಂಬ ವಿಚಾರವನ್ನೇ ಅವರು ಇಲ್ಲಿ ಪ್ರಾರಂಭಿಸಿರುತ್ತಾರೆ.

ನಾವು ಪರಶಿವಸ್ವರೂಪರೇ ಆಗಿರುವೆವು– ಎಂಬ ಜ್ಞಾನವು ಜನರಿಗೆ ಹುಟ್ಟದೆ ಇರುವದಕ್ಕೆ ಅವರಿಗೆ ಆತ್ಮಾನಾತ್ಮವಿವೇಕವಿಲ್ಲದ್ದೇ ಕಾರಣವಾಗಿರುತ್ತದೆ. ಆತ್ಮನೆಂದರೆ ತಾನು, ಅನಾತ್ಮವೆಂದರೆ ತಾನಲ್ಲದ್ದು. ಆತ್ಮನು, ಎಂದರೆ ತನ್ನ ಸ್ವರೂಪವು ಯಾವದು ? ಅನಾತ್ಮವು, ಎಂದರೆ ತನಗಿಂತ ಬೇರೆಯಾದದ್ದು ಯಾವದು ?– ಎಂಬುದನ್ನು ವಿಂಗಡಿಸಿ ತಿಳಿದುಕೊಳ್ಳುವದೇ **ಆತ್ಮಾನಾತ್ಮವಿವೇಕವು.** ಜನರಿಗೆ ಈ ವಿವೇಕವು ಇಲ್ಲದ್ದರಿಂದ ಅವರು ದೇಹವೇ ಮುಂತಾದವುಗಳನ್ನೇ ತಾವೆಂದು ಭಾವಿಸಿಕೊಂಡಿರುತ್ತಾರೆ: "ನಾನು ಈ ಪ್ರಪಂಚದ ಒಂದು ಭಾಗವಾದ ಭೂಲೋಕದ ಇಂಥ ಕಡೆಯಲ್ಲಿ ಇಷ್ಟು ವರ್ಷಗಳ ಕೆಳಗೆ ಇಂಥ ತಂದೆತಾಯಿಗಳಿಂದ ಜನಿಸಿದೆನು; ಇಂಥ ವಿದ್ಯಾಭ್ಯಾಸವನ್ನು ಮಾಡಿಕೊಂಡು ಇಂಥ ವೃತ್ತಿಯನ್ನು ಅವಲಂಬಿಸಿಕೊಂಡಿರುತ್ತೇನೆ; ಹೆಂಡಿರು,

1. ಸಾಧನಚತುಷ್ಟಯವನ್ನು ಅಧ್ಯಾತ್ಮಗ್ರಂಥಾವಳಿಯ **"ಸರ್ವೇಷ್ಟಸಿದ್ಧಿ"** ಎಂಬ ಗ್ರಂಥದಲ್ಲಿ ವಿವರಿಸಿರುತ್ತದೆ.

ಮಕ್ಕಳು, ಬಂಧುಗಳು– ಇವರಿಂದ ಕೂಡಿದ ಕುಟುಂಬಕ್ಕೆ ಸೇರಿದವನಾಗಿದ್ದೇನೆ: ಎಲ್ಲರಂತೆ ಕೆಲವು ವರ್ಷಗಳು ಇದ್ದು ಆಯುಸ್ಸು ತೀರಿದ ಬಳಿಕ ಮರಣವನ್ನು ಹೊಂದುವೆನು''–ಎಂಬುದೀಗ ಇಂಥ ಜನರ ಮನೋಭಾವವು. ಅಂಥವರಿಗೆ "ನಾನು ನಿತ್ಯಶುದ್ಧನೂ ಮುಕ್ತನೂ ಆದ ಪರಮೇಶ್ವರನು'' ಎಂಬ ಬುದ್ಧಿಯು ಹೇಗೆ ಉಂಟಾದೀತು ? ಈಶ್ವರನು ಸೃಷ್ಟಿಸಿರುವ ಜಗತ್ತಿನ ಒಂದು ಭಾಗದಲ್ಲಿ ಮೂರುದಿನವಿದ್ದು ಮರೆಯಾಗುವ ನಾನು ಈಶ್ವರನು ಹೇಗಾದೇನು ?– ಎಂದು ಅವರಿಗೆ ಶಂಕೆಯುಂಟಾಗುವದು. ಆದ್ದರಿಂದ ಮುಮುಕ್ಷುವಾದವನು ಈ ತಪ್ಪುತಿಳಿವಳಿಕೆಯನ್ನು ನೀಗಿಕೊಳ್ಳುವದಕ್ಕಾಗಿ ಮಾಡಬೇಕಾಗಿರುವ ಆತ್ಮಾನಾತ್ಮವಿವೇಚನದ ಕ್ರಮವನ್ನು ತಿಳಿಸುವದಕ್ಕೆಂದು ಈ ಮೊದಲನೆಯ ಶ್ಲೋಕವು ಬಂದಿರುತ್ತದೆ:

**ನಾಹಂ ದೇಹೋ ನೇನ್ದ್ರಿಯಾಣ್ಯನ್ತರಙ್ಗಂ**
**ನಾಹಙ್ಕಾರಃ ಪ್ರಾಣವರ್ಗೋ ನ ಬುದ್ಧಿಃ ।**
**ದಾರಾಪತ್ಯಕ್ಷೇತ್ರವಿತ್ತಾದಿದೂರಃ**
**ಸಾಕ್ಷೀ ನಿತ್ಯಃ ಪ್ರತ್ಯಗಾತ್ಮಾ ಶಿವೋಽಹಮ್** ॥ ೧ ॥

**ಪ್ರತಿಪದಾರ್ಥ :** ಅಹಂ–ನಾನು, ದೇಹಃ–ಶರೀರವು, ನ–ಅಲ್ಲ, ಇನ್ದ್ರಿಯಾಣಿ–ಇಂದ್ರಿಯಗಳು, ನ-ಅಲ್ಲ. ಅನ್ತರಙ್ಗಂ–ಮನಸ್ಸು, ನ-ಅಲ್ಲ. ಅಹಙ್ಕಾರಃ–ಅಹಂಕಾರವು, ನ–ಅಲ್ಲ. ಪ್ರಾಣವರ್ಗಃ–ಪ್ರಾಣಗಳ ಗುಂಪು, ನ–ಅಲ್ಲ. ಬುದ್ಧಿಃ–ಬುದ್ಧಿಯು, ನ–ಅಲ್ಲ. ದಾರಾಪತ್ಯಕ್ಷೇತ್ರವಿತ್ತಾದಿದೂರಃ-ಹೆಂಡತಿ, ಮಕ್ಕಳು, ಹೊಲ, ಹಣ-ಮುಂತಾದವುಗಳಿಗೆ ದೂರವಾಗಿರುವವನು. ಅಹಂ–ನಾನು, ಸಾಕ್ಷೀ–ಎಲ್ಲವನ್ನೂ ನೇರಾಗಿ ನೋಡುತ್ತಿರುವ, ನಿತ್ಯಃ–ನಿತ್ಯನಾಗಿರುವ, ಪ್ರತ್ಯಗಾತ್ಮಾ-ಒಳಗಿನ ಆತ್ಮನಾದ, ಶಿವಃ–ಶಿವನು.

೧. ನಾನು ದೇಹವಲ್ಲ, ಇಂದ್ರಿಯಗಳಲ್ಲ, ಮನಸ್ಸಲ್ಲ, ಅಹಂಕಾರವಲ್ಲ, ಪ್ರಾಣಗಳ ಗುಂಪಲ್ಲ, ಬುದ್ಧಿಯಲ್ಲ. ನಾನು ಹೆಂಡತಿ, ಮಕ್ಕಳು, ಹೊಲ, ಹಣ– ಮುಂತಾದವುಗಳಿಗೆ ದೂರನಾಗಿರುವವನು. ಎಲ್ಲವನ್ನೂ ನೇರಾಗಿ ನೋಡುತ್ತಿರುವ ನಿತ್ಯನಾಗಿರುವ ಒಳಗಿನ ಆತ್ಮನಾದ ಶಿವನೇ ನಾನು.

# ವಿವರಣೆ

ಇಲ್ಲಿ ನಾನು ಎಂದು ಜನರು ಭಾವಿಸಿಕೊಂಡಿರುವ ಅನಾತ್ಮಗಳನ್ನೆಲ್ಲ ಒಂದೊಂದಾಗಿ ಅಲ್ಲಗಳೆದಿರುತ್ತಾರೆ.

## ನಾನು ದೇಹವಲ್ಲ, ಇಂದ್ರಿಯಗಳಲ್ಲ

ಕೆಲವರು ದೇಹವು ಅಥವಾ ಇಂದ್ರಿಯಗಳು ತಾವೆಂದು ತಿಳಿದಿರುತ್ತಾರೆ. ಹೊರಗೆ ಕಾಣುವ ಕಲ್ಲು, ಮಣ್ಣು–ಮುಂತಾದವುಗಳಲ್ಲಿ ಚೇತನವಿರುವದಿಲ್ಲ. ಕಲ್ಲು ಮುಂತಾದವು ತಮಗೆತಾವೇ ಓಡಾಡುತ್ತಿರುವದಿಲ್ಲ; ಅವುಗಳಲ್ಲಿ ನಿಶ್ವಾಸ, ಉಚ್ಛ್ವಾಸ, ರಕ್ತಚಲನೆ– ಮುಂತಾದ ಚೇತನದ ಗುರುತುಗಳಿಲ್ಲ; ಅವಕ್ಕೆ ಕಣ್ಣು ಕಾಣಿಸುವದಿಲ್ಲ, ಕಿವಿ ಕೇಳಿಸುವದಿಲ್ಲ. ಈ ಮೊದಲಾದ ಕಾರಣ ಗಳಿಂದ ಕಲ್ಲು, ಮಣ್ಣು, ಕಟ್ಟಿಗೆ– ಮುಂತಾದವುಗಳಿಗೂ ನಮಗೂ ಭೇದ ವಿರುತ್ತದೆ. ನಾವು ಚಲಿಸುತ್ತಿರುವ **ಚೇತನರು**, ಅವು ಅಲುಗಾಡಲಾರದ **ಜಡ**ವಸ್ತುಗಳು. ಹೀಗೆಂದು ಎಷ್ಟೋ ಜನರು ತಿಳಿದುಕೊಂಡಿರುವರು. ಮತ್ತೆ ಕೆಲವರು ಇನ್ನೂ ಸ್ವಲ್ಪ ವಿಚಾರಮಾಡಿ ಕಲ್ಲು, ಮಣ್ಣು– ಮುಂತಾದವು ನಿರ್ಜೀವವಸ್ತುಗಳು, ನಾವು ಸಜೀವವಸ್ತುಗಳು; ನಿರ್ಜೀವವಸ್ತುಗಳೇ ಕೆಲವು ಮಾರ್ಪಾಡುಗಳನ್ನು ಹೊಂದಿ ಸಜೀವವಾದ ದೇಹೇಂದ್ರಿಯಗಳ ರೂಪವನ್ನು ಹೊಂದಿರುತ್ತವೆ. ಆದ್ದರಿಂದ ವಸ್ತುವಿನ ತಿರುಳಿನ ದೃಷ್ಟಿಯಿಂದ ನೋಡಿದರೆ ದೇಹೇಂದ್ರಿಯಗಳೂ ಹೊರಗಿನ ವಸ್ತುಗಳೂ ಒಂದೇ ಆಗಿರುತ್ತವೆ. ಆದರೂ ಹೊರಗಿನ ವಸ್ತುಗಳನ್ನು ಅರಿತುಕೊಳ್ಳುವ ಶಕ್ತಿಯೂ ಅವುಗಳನ್ನು ನಮ್ಮ ಕೆಲಸಕ್ಕೆ ಉಪಯೋಗಿಸಿಕೊಳ್ಳುವ ಶಕ್ತಿಯೂ ನಮಗೆ ಇದೆ. ಆದ್ದರಿಂದಲೇ ನಾವು ಹೊರಗಿನ ವಸ್ತುಗಳನ್ನು 'ಅದು, ಇದು' ಎನ್ನುತ್ತೇವೆ. ದೇಹೇಂದ್ರಿಯಗಳ ಗುಂಪನ್ನು 'ನಾನು' ಎಂದು ಕರೆದುಕೊಳ್ಳುತ್ತೇವೆ–ಎಂದು ಅಭಿಪ್ರಾಯಪಡುತ್ತಾರೆ.

ಆದರೆ ಈ ಇಬ್ಬರ ಅಭಿಪ್ರಾಯವೂ ಸರಿಯಲ್ಲ. ದೇಹೇಂದ್ರಿಯಗಳ ಗುಂಪೇ ನಾನು ಎಂಬ ಪದಾರ್ಥವಾದರೆ ದೇಹದ ಅವಯವಗಳಲ್ಲಿಯೂ ಒಂದೊಂದು ಇಂದ್ರಿಯದಲ್ಲಿಯೂ ನಾನು ಎಂಬ ಬುದ್ಧಿಯುಂಟಾಗಬಾರದು.

ಆದರೆ ನಾನು ನಡೆಯುತ್ತೇನೆ, ನಾನು ಮುಟ್ಟುತ್ತೇನೆ, ನಾನು ಮೂಸು ತ್ತೇನೆ; ನಾನು ನೋಡುತ್ತೇನೆ- ಎಂದು ಒಂದೊಂದು ಅವಯವದಲ್ಲಿಯೇ, ಒಂದೊಂದು ಇಂದ್ರಿಯದಲ್ಲಿಯೇ, ನಾನು ಎಂಬ ಬುದ್ಧಿಯು ಉಂಟಾಗುತ್ತಿರು ವದು ಅನುಭವದಲ್ಲಿರುತ್ತದೆ. ಇನ್ನೊಂದು ವಿಷಯ. ದೇಹಕ್ಕೆ ಅನೇಕ ಅವ ಯವಗಳಿವೆ. ಇಂದ್ರಿಯಗಳೂ ಅನೇಕವಾಗಿವೆ; ಇವುಗಳಲ್ಲಿ ಒಂದೊಂದೂ ನಾನು ಎಂಬ ವಸ್ತುವಾದರೆ ಅನೇಕ ಇಂದ್ರಿಯಗಳಿರುವವನಿಗೆ 'ನಾನುಗಳು ಅಥವಾ ನಾವು' ಎಂದೇಕೆ ಬುದ್ಧಿಯುಂಟಾಗುವದಿಲ್ಲ? ನಾನು ಎಂಬ ಪದಾ ರ್ಥವು ಒಂದೇ ಎಂಬ ಭಾವನೆಯು ನಮಗೆ ಬಲವಾಗಿ ಬೇರೂರಿಕೊಂಡುಬಿಟ್ಟಿ ರುವದಲ್ಲ! ಇದೇಕೆ?

ದೇಹದ ಭಾಗಗಳನ್ನಾಗಲಿ, ಇಂದ್ರಿಯಗಳನ್ನಾಗಲಿ, ಅವುಗಳ ಗುಂಪ ನ್ನಾಗಲಿ 'ನಾನು' ಎಂಬ ಪದಾರ್ಥವೆಂದು ಭಾವಿಸುವದಕ್ಕೆ ಮತ್ತೂ ಒಂದು ಅಡ್ಡಿಯಿದೆ. ಅದೇನೆಂದರೆ ದೇಹದಲ್ಲಿಯೂ ಇಂದ್ರಿಯಗಳಲ್ಲಿಯೂ ಆಗಾಗ್ಗೆ ಮಾರ್ಪಾಡುಗಳು ಆಗುತ್ತಲೇ ಇರುತ್ತವೆ. ದೇಹಾದಿಗಳೇ ನಾವಾಗಿದ್ದರೆ ಈ ಮಾರ್ಪಾಡುಗಳು ನನ್ನಲ್ಲಿಯೇ ಆದವೆಂದು ನಾವು ಯಾವಾಗಲೂ ವ್ಯವಹರಿಸ ಬೇಕಾಗುತ್ತಿತ್ತು. ಆದರೆ ಹಾಗಿಲ್ಲ. 'ನನ್ನ ಕಣ್ಣು ಮಬ್ಬಾಗಿದೆ, ನನ್ನ ಕಾಲು ಕುಂಟಾಗಿದೆ'-ಎಂದೂ ನಾವು ವ್ಯವಹರಿಸುತ್ತೇವೆ. ಕಣ್ಣುಕಾಲುಗಳು ನಾವೇ ಆಗಿದ್ದರೆ 'ನನ್ನ ಕಣ್ಣು' ಎಂದಾಗ ನನ್ನ, ನಾನು_ ಎಂಬ ಅಪಾರ್ಥವಾದ ಮಾತನ್ನುಪಯೋಗಿಸಿದಂತಾಗುತ್ತಿತ್ತಲ್ಲವೆ? ಈ ಸಂದರ್ಭದಲ್ಲಿ ಮತ್ತೊಂದು ಅನುಭವವನ್ನು ನಾವು ಮನಸ್ಸಿಗೆ ತಂದುಕೊಳ್ಳಬಹುದು. ನಾವು ಕೈಕಾಲು ಗಳಿಂದ ಹೊರಗಿನ ವಿಷಯಗಳನ್ನು ಹಿಡಿದು ನೂಕುವದಕ್ಕೆ ಬರುತ್ತಿರುವದರಿಂದ ಆ ವಿಷಯಗಳು ನಮಗಿಂತ ಬೇರೆಯೆಂದು ಯಾರಿಗಾದರೂ ಸುಲಭವಾಗಿ ತಿಳಿಯಬರುವದಲ್ಲವೆ? ಇದರಂತೆಯೇ ನಮ್ಮ ದೇಹದಲ್ಲಿರುವ ಯಾವ ಭಾಗವನ್ನಾದರೂ ಕತ್ತರಿಸಿ ಕಿತ್ತುಹಾಕಿಬಿಡಬಹುದು, ಆದರೆ ಇದರಿಂದ ನಾವೇ ಕಿತ್ತುಹೋದೆವೆಂಬ ಭಾವನೆ ಬರುವದಿಲ್ಲ. ಮೈಮೇಲೆ ಬೆಳೆದಿದ್ದ ಹುಣ್ಣನ್ನು ಶಸ್ತ್ರವೈದ್ಯನು ಕತ್ತರಿಸಿಹಾಕಿದರೆ ನೆಲದಮೇಲೆ ಬಿದ್ದಿರುವ ಆ ಶರೀರಭಾಗದಲ್ಲಿ ನಾನೆಂಬ ಬುದ್ಧಿಯು ಹುಟ್ಟುವದಿಲ್ಲ. ಇದರಂತೆಯೇ ಸಿಂಬಳ, ಕುಗ್ಗಿ, ಪಿಸಿರು, ಜೊಲ್ಲು, ಬೆವರು, ಕೂದಲು, ಉಗುರು_ ಮುಂತಾದ ಶರೀರದ ಭಾಗಗಳನ್ನು

ನಾವು ಶರೀರದಿಂದಾಚೆಗೆ ಆಗಾಗ್ಗೆ ತೆಗೆದುಹಾಕುತ್ತಲೇ ಇರುವೆವು ; ಅವು ನೆಲದಮೇಲೆ ಬಿದ್ದಿದ್ದರೆ ಅವುಗಳನ್ನು ಕಂಡು ಅಸಹ್ಯಪಡುವೆವೇ ಹೊರತು ಅವೇ ನಾನೆಂದು ಎಂದಿಗೂ ಅಭಿಮಾನಪಡುವದಿಲ್ಲ. ಇದೇ ರೀತಿಯಲ್ಲಿ ಇಂದ್ರಿಯಗಳ ವಿಚಾರವನ್ನೂ ನಿರ್ಣಯಮಾಡಿಕೊಳ್ಳಬಹುದು. ಹೇಗೆಂದರೆ 'ನನ್ನ ಕಣ್ಣು', 'ನನ್ನ ಕಿವಿ', 'ನನ್ನ ಮೂಗು',- ಎಂದು ಆಯಾ ಇಂದ್ರಿಯಗಳನ್ನು ನಾವು ಬೇರ್ಪಡಿಸಿಕೊಂಡು ಅರಿಯುತ್ತೇವೆ. ಇನ್ನೂ ಒಳಹೊಕ್ಕು ನೋಡಿದರೆ ಕಣ್ಣು, ಕಿವಿ, ಮೂಗು – ಮುಂತಾದವುಗಳೇ ಇಂದ್ರಿಯವಲ್ಲ ; ಇಂದ್ರಿಯಗಳು ಅವುಗಳಲ್ಲಿ ಕೆಲಸಮಾಡುತ್ತಿರುತ್ತವೆ ; ಆದರೆ ಕಣ್ಣು, ಕಿವಿ, ಮೂಗು-ಮುಂತಾದ **ಇಂದ್ರಿಯಗೋಳಕ**ಗಳಂತೆಯೇ ನೋಟದ, ಕೇಳುವಿಕೆಯ, ಮೂಸುವಿಕೆಯ ಸಾಧನವಾದ ಆ ಇಂದ್ರಿಯಗಳನ್ನೂ ನಾವು ನಮ್ಮಿಂದ ಬೇರ್ಪಡಿಸಿಯೇ ತಿಳಿಯುತ್ತೇವೆ. ಇದೂ ಅಲ್ಲದೆ ಕಣ್ಣು, ಕಿವಿ, ಮೂಗು ಮುಂತಾದವುಗಳಲ್ಲಿರುವ ಇಂದ್ರಿಯಗಳ ಪಾಟವವು ಕಡಿಮೆಯಾದರೂ ಅಥವಾ ತೀರ ಇಲ್ಲವಾಗಿಬಿಟ್ಟರೂ ನಾವೇ ಆಯಾ ಮಾರ್ಪಾಡನ್ನು ಹೊಂದಿದೆವೆಂದು ನಾವು ಯಾರೂ ನಂಬುವದಿಲ್ಲ. ಆದ್ದರಿಂದ ಇಂದ್ರಿಯಗಳೂ ನಮ್ಮಲ್ಲಿರುವ ನಾನು ಎಂಬ ವಸ್ತುವಲ್ಲ-ಎಂದು ಏರ್ಪಡುತ್ತದೆ.

ಅಂತೂ ಏನು ತೀರ್ಮಾನವಾಯಿತೆಂದರೆ ದೇಹೇಂದ್ರಿಯಗಳು ಅನೇಕವಾಗಿವೆ, ನಾನು ಒಬ್ಬನೇ; ದೇಹೇಂದ್ರಿಯಗಳು ಬೇರೆಬೇರೆಯ ಮಾರ್ಪಾಡುಗಳನ್ನು ಹೊಂದುತ್ತಿರುವವು, ಆಗಲೂ ನಾನು ಇದ್ದಂತೆಯೇ ಇರುವೆನು ; ದೇಹೇಂದ್ರಿಯಗಳು ಅರಿಯಲ್ಪಡುವವು, ನಾನು ಅವುಗಳನ್ನು ಅರಿಯುವೆನು. ಆದ್ದರಿಂದ ದೇಹೇಂದ್ರಿಯಗಳು ಹೊರಗಿನ ಕಲ್ಲು, ಮಣ್ಣು, ಕಟ್ಟಿಗೆ–ಮುಂತಾದವುಗಳಂತೆ ಭೌತಿಕವಸ್ತುಗಳೇ, ಅವು **ಜಡವಸ್ತು**ಗಳೇ. ಅವುಗಳಲ್ಲಿ ಒಂದೂ ನಾನಲ್ಲ, ಅವುಗಳನ್ನು ಅರಿಯುವ ಚೇತನವಸ್ತುವೇ ನಾನು.

ಇಲ್ಲಿ ಒಂದು **ಶಂಕೆ**ಯು ತಲೆದೋರಬಹುದು : ದೇಹವೂ ಇಂದ್ರಿಯಗಳೂ ಚೇತನವಲ್ಲದಿದ್ದರೆ, ಅವು ಕಲ್ಲು ಮಣ್ಣು ಮುಂತಾದವುಗಳಂತೆ ಜಡ ಪದಾರ್ಥಗಳೇ ಆಗಿದ್ದರೆ, ಅವುಗಳಲ್ಲಿ ತೋರುವ ಚೇತನದ ಗುರುತುಗಳಿಗೇನು

ಗತಿ? ವಿಷಯಗಳನ್ನು ತಿಳಿದುಕೊಳ್ಳುವದು, ತೆಗೆದುಕೊಳ್ಳುವದು, ಅವುಗಳನ್ನು ಬಿಟ್ಟು ಅತ್ತಸರಿಯುವದು-ಮುಂತಾದ ಚೇತನದ ಗುರುತುಗಳು ದೇಹೇಂದ್ರಿಯಾದಿಗಳಲ್ಲಿ ಕಂಡುಬರುತ್ತವೆಯಷ್ಟೆ; ಕಲ್ಲು ಮಣ್ಣು ಮುಂತಾದವುಗಳಲ್ಲಿಲ್ಲದ ಈ ಗುರುತುಗಳು ದೇಹೇಂದ್ರಿಯಗಳಲ್ಲಿ ಎಲ್ಲಿಂದ ಬಂದವು? ಇದಕ್ಕೆ **ಸಮಾಧಾನ**ವೇನೆಂದರೆ ಇವುಗಳಲ್ಲಿ ಚೇತನದ ಗುರುತುಗಳು ನಿಜವಾಗಿ ಇರುವದಿಲ್ಲ. ರೈಲುಗಾಡಿಯ ಎಂಜಿನ್ನು ಓಡುತ್ತದೆ, ಸೂಜಿಕಲ್ಲು ಕಬ್ಬಿಣವನ್ನು ತನ್ನಕಡೆಗೆ ಎಳೆದುಕೊಳ್ಳುತ್ತದೆ; ಆದರೆ ಈ ಗುರುತುಗಳಿಂದ ಅವುಗಳನ್ನು ಚೇತನವಸ್ತುಗಳೆಂದು ಯಾರಾದರೂ ಬಗೆಯುವರೇನು ? ದೇಹೇಂದ್ರಿಯಗಳಲ್ಲಿ ಎಷ್ಟೇ ಚಲನೆಯಿರಲಿ, ಎಷ್ಟೇ ಶಕ್ತಿಯಿರಲಿ, ಇವುಗಳು ತಮ್ಮ ಚಲನೆಯನ್ನೂ ಶಕ್ತಿಯನ್ನೂ ತಮಗಾಗಿ ಉಪಯೋಗಿಕೊಳ್ಳಬಲ್ಲ ಚೇತನವಲ್ಲ; ಇವನ್ನು ಉಪಯೋಗಿಸುವವರು ಚೇತನರು. ದೇಹೇಂದ್ರಿಯಗಳು ನಮ್ಮವು, ನಾವು ಅವನ್ನು ಉಪಯೋಗಿಸಿಕೊಳ್ಳುತ್ತೇವೆ. ಆದ್ದರಿಂದ ನಾವು ಚೇತನರು, ಅವು ಜಡವಸ್ತುಗಳೇ. ಇಂದ್ರಿಯಗಳಲ್ಲಿ ಅರಿವು ಇದೆಯೆಂದು ಭಾವಿಸುವದಂತೂ ಬರಿಯ ತಪ್ಪು. ಏಕೆಂದರೆ ಇಂದ್ರಿಯಗಳನ್ನು ನಾವು ಅರಿಯುತ್ತೇವೆ, ಅವು ವಿಷಯಗಳಾಗಿರುತ್ತವೆ. ದುರ್ಬೀನಿನ ಮೂಲಕವಾಗಿ ಹೊರಗಿನ ವಿಷಯಗಳನ್ನು ನಾವು ಅರಿಯುತ್ತೇವೆ. ಆದ್ದರಿಂದ ಇಂದ್ರಿಯಗಳು ಜಡಪದಾರ್ಥಗಳು, ನಮಗೆ ಕರಣಗಳು; ಅವುಗಳ ಮೂಲಕವಾಗಿ ಅರಿಯುತ್ತಿರುವ ನಾವೇ ಚೇತನರು.

ಹೀಗೆ ದೇಹವಾಗಲಿ, ಇಂದ್ರಿಯಗಳಾಗಲಿ– ನಮ್ಮೊಳಗಿನ ನಾನು ಎಂಬ ಪದಾರ್ಥವಲ್ಲವೆಂದು ಸಿದ್ಧವಾಯಿತು. ಮುಖ್ಯವಾಗಿ, ಅರಿಯಲ್ಪಡುವ ದೇಹೇಂದ್ರಿಯಗಳು ಅರಿಯುವ ನಾನಲ್ಲವೆಂಬ ಯುಕ್ತಿಯು ಬಲವಾಯಿತು. ಆದರೆ ದೇಹೇಂದ್ರಿಯಗಳನ್ನು ಅರಿಯುವದಕ್ಕೆ ನಮ್ಮಲ್ಲಿ ಮನಸ್ಸೆಂಬ ಒಂದು ಸಾಧನವಿದೆ. ಅದೇ ಎಲ್ಲವನ್ನೂ ಅರಿಯುತ್ತಿರುವದರಿಂದ ಅದೇ ನಾನು ಎಂಬ ವಸ್ತುವೆಂದು ಏತಕ್ಕೆ ಹೇಳಬಾರದು ?– ಎಂಬ **ಶಂಕೆ**ಯೊಂದು ಎದ್ದುಕೊಳ್ಳುವದು ಸಹಜವಾಗಿದೆ. ಈ ಶಂಕೆಯೂ ಯುಕ್ತವಾದದ್ದಲ್ಲ.

ಏಕೆಂದರೆ-

## ನಾನು ಮನಸ್ಸಲ್ಲ, ಅಹಂಕಾರವಲ್ಲ

ನಾನು ದಪ್ಪಗಿದ್ದೇನೆ, ಬೆಳ್ಳಗಿದ್ದೇನೆ, ತರುಣನಾಗಿದ್ದೇನೆ, ನೋಡು ತ್ತೇನೆ, ಕೇಳುತ್ತೇನೆ- ಎಂದು ಮುಂತಾಗಿ ವ್ಯವಹಾರವುಂಟಾಗುತ್ತಿದ್ದರೂ ನನ್ನ ದೇಹ, ನನ್ನ ಕಣ್ಣು, ನನ್ನ ಕಿವಿ- ಎಂದು ಮುಂತಾಗಿ ಅರಿವು ಉಂಟಾ ಗುತ್ತಿರುವದರಿಂದಲೂ ದೇಹವೇ ಮುಂತಾದವುಗಳು ಆ ಅರಿವಿಗೆ ವಿಷಯ ಗಳಾಗಿ ಬೇರ್ಪಡುವದರಿಂದಲೂ ಹೇಗೆ ದೇಹಾದಿಗಳು ನಾವಲ್ಲವೆಂಬುದು ಸ್ಫುಟವಾಗುವದೋ ಹಾಗೆಯೇ '**ನನ್ನ ಮನಸ್ಸು**' ಎಂದು ವ್ಯವಹಾರ ವಾಗುವದರಿಂದ ಮನಸ್ಸೂ ನನಗಿಂತ ಬೇರೆಯೇ ಆಗಿರಬೇಕಾಯಿತು. ಮನಸ್ಸಿನಿಂದ ನಾನು ಅರಿಯುತ್ತಿರುವೆನೇ ಹೊರತು ಮನಸ್ಸು ತಾನೇ ಅರಿ ಯುವದಿಲ್ಲ ; ಹಿಂದೆ ಹೇಳಿದ ದುರ್ಬೀನಿನ ದೃಷ್ಟಾಂತವನ್ನು ಇಲ್ಲಿಯೂ ಅನ್ವ ಯಿಸಿಕೊಳ್ಳಬಹುದಾಗಿದೆ. ಸೂಕ್ಷ್ಮವಸ್ತುಗಳನ್ನು ಅರಿಯುವದಕ್ಕೆ ದುರ್ಬೀನು ಒಂದು ಕರಣವಾಗಿರುವಂತೆ ಮನಸ್ಸೂ ಒಂದು ಕರಣವಾಗಿರುತ್ತದೆ. ಇಂದ್ರಿಯಗಳು **ಬಹಿಃಕರಣ**ಗಳು, ಹೊರಗಿನ ವಿಷಯಗಳನ್ನು ಅರಿಯು ವದಕ್ಕೆ ಬೇಕಾದ ಕರಣಗಳು ; ಮನಸ್ಸು **ಅಂತಃಕರಣವು**, ಎಂದರೆ ಒಳಗೆ ಆಗುವ ಅರಿವಿಗೆ ಸಾಧನವಾಗಿರುವ ಕರಣವು. ಕರಣವು ಜಡವಾದ ಸಾಧನ ಮಾತ್ರ, ಅದನ್ನುಪಯೋಗಿಸುವ ನಾವೇ ಚೇತನರು. ಇದಲ್ಲದೆ ಮನಸ್ಸು ಅತ್ತಿತ್ತ ಹರಿದಾಡುತ್ತಿರುವದು. ಅದಕ್ಕೂ ಇಂದ್ರಿಯಗಳಿಗೂ ಸಂಬಂಧ ವಾದರೆ ಮಾತ್ರ ನಮಗೆ ಅದರ ಮೂಲಕ ಅರಿವು ಉಂಟಾಗುತ್ತಿರುವದು. ಈ ಕಾರಣದಿಂದಲೇ ನಾವು ಎಷ್ಟೋ ಸಲ ಶಬ್ದವನ್ನು ಕೇಳಿದರೂ, ವಸ್ತುಗಳನ್ನು ಕಂಡರೂ "ಏನು ಹೇಳಿದಿರಿ ? ನನಗೆ ಸರಿಯಾಗಿ ಗೊತ್ತಾಗಲಿಲ್ಲ ; ಯಾರೋ ಬಂದುಹೋದಂತಾಯಿತು, ನನಗೆ ಸರಿಯಾಗಿ ಗೊತ್ತಾಗಲಿಲ್ಲ" ಎನ್ನುತ್ತಿರು ವೆವು. ಆ ಸಂದರ್ಭಗಳಲ್ಲಿ ನಮ್ಮ ಮನಸ್ಸು ಬೇರೊಂದು ಕಡೆಗೆ ಹೋಗಿದ್ದದ್ದೇ ಶಬ್ದದ ಅಥವಾ ನೋಟದ ಗೊತ್ತಾದ ಅರಿವು ನಮಗೆ ಆಗದೆ ಇರುವದಕ್ಕೆ ಕಾರಣವು.' ಈ ಕಾರಣದಿಂದ ಹರಿದಾಡುತ್ತಿರುವ ಮನಸ್ಸು ಬೇರೆ, ಅದರ ಹರಿದಾಟವನ್ನು ಅರಿಯುತ್ತಿರುವ ನಾನು ಬೇರೆ ಎಂದು ಏರ್ಪಡುತ್ತದೆ.

ಇದೂ ಆಗಲಿ. 'ನಾನು ಅರಿತೆನು', 'ನಾನು ನೋಡಿದೆನು', 'ನಾನು

ಕೇಳಿದೆನು'–ಎಂದು ಮುಂತಾಗಿ ಪ್ರತಿಯೊಂದು ವ್ಯವಹಾರದಲ್ಲಿಯೂ ನಾನು ನಾನೆಂದು ಅರಿವು ಆಗುತ್ತಿರುವದಲ್ಲ, ಆದಾದರೂ ನಮ್ಮ ಸ್ವರೂಪವೋ, ಅಲ್ಲವೋ ? ಅದೇ ನಮ್ಮ ಸ್ವರೂಪವಾದರೆ 'ನಾನು ದೇಹದಲ್ಲಿದ್ದುಕೊಂಡು ಮನಸ್ಸಿನಿಂದ ಅರಿಯುತ್ತೇನೆ, ದೇಹೇಂದ್ರಿಯಗಳಿಂದ ವ್ಯವಹರಿಸುತ್ತೇನೆ, ದೇಹವು ಪ್ರಪಂಚದಲ್ಲಿ ಒಂದು ಭಾಗದಲ್ಲಿದೆ'–ಎಂದು ಜನರು ಭಾವಿಸಿರುವದು ಸರಿಯಾದ ತಿಳಿವಳಿಕೆಯೇ ಆಯಿತಲ್ಲ ! ಈ ಭಾವನೆಯು ತಪ್ಪೆಂದೂ 'ನಾನು ನಿತ್ಯಶುದ್ಧಬುದ್ಧ ಮುಕ್ತನಾದ ಪರಮೇಶ್ವರನೇ' ಎಂಬುದೇ ಸರಿಯಾದ ತಿಳಿವಳಿಕೆಯೆಂದೂ ಮೊದಲು ಹೇಳಿದ್ದು ಹೇಗೆ ಸರಿಯಾದೀತು ? – ಎಂಬ **ಆಕ್ಷೇಪವು** ಎದ್ದುಕೊಳ್ಳುವದು ಸ್ವಾಭಾವಿಕವಾಗಿದೆಯಷ್ಟೆ. ಇದಕ್ಕೆ **ಸಮಾಧಾನ**ವೇನೆಂದರೆ: ನಾವು ವ್ಯವಹಾರಮಾಡುತ್ತಿರುವಾಗ 'ನಾನು, ನಾನು'–ಎಂದು ತೋರುವದು ನಿಜವಾದ ನಮ್ಮ ಸ್ವರೂಪವಲ್ಲ. ಮೇಲೆ ಹೇಳಿದ ಅಂತಃಕರಣವೇ ಈ ರೂಪವಾಗಿಯೂ ನಮ್ಮಲ್ಲಿ ತೋರಿಕೊಳ್ಳುತ್ತಿರುವದು. 'ನಾನು ಇಂದ್ರಿಯಗಳ ಮೂಲಕ ಇದನ್ನು ಅರಿಯುತ್ತೇನೆ' ಎಂಬ ವ್ಯವಹಾರದಲ್ಲಿ ಅರಿಯುವದೆಂಬ ಕ್ರಿಯೆಯನ್ನು ಮಾಡುವ ಅಂತಃಕರಣದ ಮಾರ್ಪಾಡನ್ನು ವೇದಾಂತಿಗಳು **ಮನಸ್ಸು** ಎಂದು ಕರೆಯುತ್ತಾರೆ ; ನಾನು ಎಂಬ ರೂಪದಲ್ಲಿ ಅವರಿಗೆ ಕರ್ತೃವಾಗಿ ನಿಂತುಕೊಳ್ಳುವ ಮಾರ್ಪಾಡನ್ನು **'ಅಹಂಕಾರ'** ಎಂದು ಕರೆಯುತ್ತಾರೆ. ಕರ್ತೃಕರಣರೂಪವಾಗಿ ತೋರಿಕೊಳ್ಳುವದೆಂಬ ಇದೊಂದು ತಾರತಮ್ಯವನ್ನು ಬಿಟ್ಟರೆ ಮನಸ್ಸಿಗೂ ಅಹಂಕಾರಕ್ಕೂ ಯಾವ ಭೇದವೂ ಇರುವದಿಲ್ಲ. ಅವೆರಡೂ ಅಂತಃಕರಣದ ಮಾರ್ಪಾಡುಗಳೇ. ಆದ್ದರಿಂದ ಮನಸ್ಸು ಹೇಗೆ ನಮ್ಮಿಂದ ಬೇರೆಯಾಗಿರುವದೋ ಅದರಂತೆ 'ನಾನು' ಎಂಬ ಅಹಂಕಾರವೂ ಬೇರೆಯಾಗಿಯೇ ಇರುತ್ತದೆ.

ಅಹಂಕಾರವು ನಮ್ಮ ಸ್ವರೂಪಕ್ಕಿಂತ ಬೇರೆಯೆಂಬುದನ್ನು ಮನಗಾಣುವದಕ್ಕೆ ಕೆಲವು ಸಂಗತಿಗಳನ್ನು ಲಕ್ಷಿಸಬೇಕು. ಮನಸ್ಸು ಹೇಗೆ ವ್ಯವಹಾರದಲ್ಲಿ ಆಗಾಗ್ಗೆ ನಮ್ಮ ಗೋಚರಕ್ಕೆ ಬರದೆ ಹೋಗುವದೋ ಹಾಗೆಯೇ ಅಹಂಕಾರವೂ ಗೋಚರಕ್ಕೆ ಬರದೆ ಇರುವದುಂಟು. ನಿಜವಾಗಿ ನೋಡಿದರೆ ನಾವು ಯಾವಾಗಲೂ ಹೊರಗಿನ ವಿಷಯಗಳ ವಿಚಾರದಲ್ಲಿಯೇ ಮುಳುಗಿರುವದರಿಂದ ಬೇಕೆಂತ ಲಕ್ಷ್ಯಕ್ಕೆ ತಂದುಕೊಂಡಹೊರತು ನಮಗೆ ನಾನೆಂಬುದು ತೋರಿ

ಕೊಳ್ಳುವದೇ ಇಲ್ಲ. ಯಾರು ತತ್ತ್ವವಿಚಾರಕ್ಕೆ ಹೊರಟಿರುವರೋ ಅವರು ಮಾತ್ರ 'ನಾನು, ಇದು' ಎಂದು ವಿಂಗಡಿಸಿಕೊಂಡು ಈ ನಾನನ್ನು ತಮ್ಮ ಅರಿವಿಗೆ ಗೋಚರವಾಗಿಸಿಕೊಳ್ಳುತ್ತಾರೆ. ಮಿಕ್ಕವರಿಗೆ ನಾನು ಎಂಬುದೇ ಗೋಚರವಾಗುವದಿಲ್ಲ. ನಮಗೆ ಗಾಢನಿದ್ರೆಯು ಹತ್ತಿದಾಗಲಂತೂ ನಾನು ಎಂಬುದರ ಸುಳಿವೇ ಇರುವದಿಲ್ಲ. ಆದರೂ ಗಾಢನಿದ್ರೆಯಲ್ಲಿ ನಮ್ಮ ಸ್ವರೂಪವೇ ಇಲ್ಲವೆಂದು ನಾವು ಯಾರೂ ಭಾವಿಸುವದಿಲ್ಲ. ಆದ್ದರಿಂದ ಎಚ್ಚರಕನಸುಗಳಲ್ಲಿ ಮಾತ್ರ ತೋರಿಕೊಂಡು 'ನಾನು, ನಾನು' ಎಂಬ ನಮ್ಮ ವ್ಯವಹಾರಕ್ಕೆ ಸಾಧನವಾಗಿರುವ ಅಹಂಕಾರವು ಬೇರೆ, ನಮ್ಮ ಸ್ವರೂಪವು ಬೇರೆ-ಎಂದು ನಿಶ್ಚಿತವಾಯಿತು.

## ನಾನು ಬುದ್ಧಿಯಲ್ಲ

ಅಂತಃಕರಣಕ್ಕೆ ಅಹಂಕಾರ, ಮನಸ್ಸು- ಎಂಬ ರೂಪಗಳಂತೆ **ಬುದ್ಧಿ**ಯೆಂಬ ಮತ್ತೊಂದು ರೂಪವೂ ಉಂಟು. ಹೊರಗಿನ ವಿಷಯಗಳ ಅರಿವನ್ನು ಇಂದ್ರಿಯಗಳು ತಂದೊಪ್ಪಿಸಲು ಅವುಗಳನ್ನು ಒಂದೊಂದಾಗಿ ಅರಿಯುತ್ತಿರುವದು ಮನಸ್ಸಿನ ಕೆಲಸವು; ಈ ಅರಿವನ್ನು ಅದು ಜೋಡಿಸಿಟ್ಟು ಬುದ್ಧಿಗೆ ಒಪ್ಪಿಸಲು ಬುದ್ಧಿಯು ಇದು ಇಂಥದ್ದು-ಎಂದು ಗೊತ್ತುಪಡಿಸುವದು; ಆಗ ಅಹಂಕಾರವು 'ಈ ಅರಿವು ನನಗೆ ಆಯಿತು, ಇದು ಇಂಥದ್ದೆಂದು ಅರಿತೆನು-' ಎಂದು ಅಭಿಮಾನಪಡುವದು. ಆಗ ನಮಗೆ ವಿಷಯಗಳ ಅರಿವಿನಿಂದ ಸುಖವೋ, ದುಃಖವೋ ಉಂಟಾಗುವದು. ಆ ಸುಖದುಃಖಗಳು ನಮ್ಮಲ್ಲಿಯೇ ಉಂಟಾಗುತ್ತಿರುವದರಿಂದ ಅವುಗಳನ್ನು ಅನುಭವಿಸುವದಕ್ಕೂ ಅರಿಯುವದಕ್ಕೂ ಅಂತಃಕರಣವೇ ಸಾಧನವಾಗಿರುತ್ತದೆ. ಅಂತೂ ಬುದ್ಧಿಯೂ ಮನೋಹಂಕಾರಗಳಂತೆ ಸಾಧನಮಾತ್ರವಾಗಿರುವದರಿಂದಲೂ ನಮ್ಮಿಂದ ಅರಿಯಲ್ಪಡುತ್ತಿರುವದರಿಂದಲೂ ನಮ್ಮ ಸ್ವರೂಪಕ್ಕಿಂತ ಬೇರೆಯೇ ಎಂದಾಯಿತು.

ಅಂತಃಕರಣದಲ್ಲಿ ಆಗುವ ಮನಸ್ಸು, ಬುದ್ಧಿ, ಅಹಂಕಾರ-ಎಂಬ ಮಾರ್ಪಾಡುಗಳೂ ಸುಖ, ದುಃಖ, ಆಸೆ, ಸಿಟ್ಟು, ಅಂಜಿಕೆ, ನಾಚಿಕೆ-ಮುಂತಾದ ಮಾರ್ಪಾಡುಗಳೂ **ವೃತ್ತಿ**ಗಳೆನಿಸುವವು. ಮನಸ್ಸು, ಬುದ್ಧಿ, ಅಹಂಕಾರ- ಮುಂತಾದವು ಅರಿವಿಗೆ ಸಂಬಂಧಪಟ್ಟ ವೃತ್ತಿಗಳು : ಸುಖ,

ದುಃಖ-ಮುಂತಾದವು ವಿಷಯಗಳ ಅನುಭವಕ್ಕೆ ಸಂಬಂಧಪಟ್ಟ **ವೇದನೆ**ಗಳೆಂಬ ವೃತ್ತಿಗಳು. ಈ ವೃತ್ತಿಗಳೆಲ್ಲವೂ ಅಂತಃಕರಣದಲ್ಲಿಯೇ ಉಂಟಾಗುತ್ತಿರುವದರಿಂದಲೂ ಅಂತಃಕರಣವು ಸಾಧನಮಾತ್ರವಾಗಿರುವದರಿಂದಲೂ ಅದು ಯಾರಿಗೆ ;ಸಾಧನವಾಗಿರುವದೋ ಆ ನನ್ನ ಸ್ವರೂಪವು ಅದಕ್ಕಿಂತಲೂ ಮತ್ತು ಅದರ ವೃತ್ತಿಗಳಿಗಿಂತಲೂ ಬೇರೆಯಾಗಿರುತ್ತದೆ : ಅವುಗಳೊಂದೂ ನನ್ನ ಸ್ವರೂಪವಲ್ಲ–ಎಂದು ವಿವೇಕಿಯಾದವನು ನಿಶ್ಚಯಿಸಬೇಕು.

## ನಾನು ಪ್ರಾಣಗಳ ಗುಂಪಲ್ಲ

ಈ ಲೋಕದಲ್ಲಿ ಕೆಲವರು ಭಾವಿಸಿರುವದೇನೆಂದರೆ; ದೇಹೇಂದ್ರಿಯಗಳು ನಾವಲ್ಲ ; ಮನಸ್ಸು, ಬುದ್ಧಿ, ಅಹಂಕಾರ– ಇವೂ ನಾವಲ್ಲ. ಇವುಗಳನ್ನು ಕೆಲಸಕ್ಕೆ ಉಪಯೋಗಿಸಿಕೊಳ್ಳುವವರು ನಾವು. ಉದಾಹರಣೆಗೆ ನನಗೆ ಬೇಕಾದಾಗ ಕೈಯೆತ್ತುತ್ತೇನೆ, ಅದು ಸಾಕಾದರೆ ಕೆಳಗಿಳಿಸುತ್ತೇನೆ ; ನನಗೆ ಬೇಕಾದ ವಸ್ತುವನ್ನು ಹಿಡಿದುಕೊಳ್ಳುತ್ತೇನೆ, ಬೇಡದಿದ್ದರೆ ಬಿಡುತ್ತೇನೆ ; ನನಗೆ ಬೇಕಾದ ವಿಷಯವನ್ನು ಚಿತ್ತವಿಟ್ಟು ಯೋಚಿಸುತ್ತೇನೆ, ಬೇಡವಾದದ್ದನ್ನು ಅಸಡ್ಡೆಯಿಂದ ಮರೆತುಬಿಡುವೆನು ; ನಿದ್ರೆಯಲ್ಲಿ ಅಹಂಕಾರವನ್ನೂ ಮನಸ್ಸನ್ನೂ ಕರಗಿಸಿಬಿಡುವೆನು, ಅಥವಾ ಅವುಗಳನ್ನು ಅತ್ತಿತ್ತ ಹರಿದಾಡದಂತೆ ತಡೆದುಕೊಂಡು ಒಕ್ಕಡೆಗೆ ನಿಲ್ಲಿಸಿಕೊಳ್ಳುವೆನು. ಹೀಗೆ ದೇಹೇಂದ್ರಿಯಾದಿಗಳು ಯಾರ ಕಟ್ಟಿಗೆ ಒಳಪಟ್ಟು ಕೆಲಸಮಾಡುತ್ತಿರುವವೋ ಆ ವಸ್ತುವೇ ನಾನು.

ಈ ಅಭಿಪ್ರಾಯವು ಸರಿಯಲ್ಲ. ಏಕೆಂದರೆ ದೇಹೇಂದ್ರಿಯಾದಿಗಳನ್ನು ಕೆಲಸಮಾಡಿಸುವ ಶಕ್ತಿಗೆ **ಪ್ರಾಣ**ವೆಂದು ಹೆಸರು. ಆ ಪ್ರಾಣಕ್ಕೆ ಆಶ್ರಯನಾಗಿರುವವನೇ ನಾನು. ಹಿಂದೆ ಹೇಳಿರುವ ಅಹಂಕಾರ ಮನೋಬುದ್ಧಿಗಳು ಜ್ಞಾನಕ್ಕೆ ಸಂಬಂಧಪಟ್ಟಿರುವಂತೆ, ಪ್ರಾಣಕ್ಕೂ ಸಂಬಂಧಪಟ್ಟಿರುತ್ತವೆ 'ನಾನು ಇದನ್ನು ಅರಿಯುತ್ತೇನೆ' ಎಂಬಲ್ಲಿ ಹೇಗೆ ನಾನು ಎಂಬುದು ಅಹಂಕಾರವೆಂದೂ ಅರಿಯುತ್ತೇನೆಂಬುದು ಮನಸ್ಸೆಂದೂ ಅರಿವಿನ ನಿಶ್ಚಯಮಾಡಿದ್ದು ಬುದ್ಧಿಯೆಂದೂ ಗೊತ್ತುಪಡಿಸಿದೆವೋ ಹಾಗೆಯೇ ಪ್ರಾಣದಿಂದಾಗುವ ದೇಹಾದಿ ವ್ಯಾಪಾರಗಳಲ್ಲಿಯೂ ಗೊತ್ತುಪಡಿಸಬಹುದಾಗಿದೆ. ಹೇಗೆಂದರೆ 'ನಾನು ಇಂಥ ಕೆಲಸವನ್ನು ಮಾಡುತ್ತೇನೆ' ಎಂಬಲ್ಲಿ ನಾನು ಎಂಬ ಕರ್ತೃಭಾವವನ್ನು

ವಹಿಸುವದು ಅಹಂಕಾರವು, ಕರ್ಮವನ್ನು ಸಂಕಲ್ಪಿಸುವದು ಮನಸ್ಸು, ಮಾಡಬೇಕೆಂದು ನಿಶ್ಚಯಿಸುವದು ಬುದ್ಧಿಯು. ಈ ರೀತಿಯಲ್ಲಿ ಕಾರ್ಯದ ನಿಶ್ಚಯವಾದ ಬಳಿಕವೇ ಪ್ರಾಣವು ಕೆಲಸಮಾಡುವದು. ಅಹಂಕಾರವೇ ಮುಂತಾದವು ಅನಾತ್ಮಗಳೆಂದು, ಎಂದರೆ ನಮ್ಮ ಸ್ವರೂಪವಲ್ಲವೆಂದು, ಹಿಂದೆಯೇ ನಿಶ್ಚಯಿಸಿರುತ್ತೇವೆ. ಆದ್ದರಿಂದ ಅವುಗಳ ಹಿಂತಡಿಕೆಯಿಂದ ಕೆಲಸಮಾಡುವ ಪ್ರಾಣವು ಅನಾತ್ಮವೇ, ನಾನಲ್ಲ, ಎಂಬುದು ತಾನೇ ಸಿದ್ಧವಾಗುತ್ತದೆ.

ಪ್ರಾಣವು ಎಚ್ಚರದಲ್ಲಿ ಕೆಲಸಗಳನ್ನು ಸಂಕಲ್ಪಪೂರ್ವಕವಾಗಿ ಮಾಡುವ ದಲ್ಲದೆ ಸಂಕಲ್ಪವಿಲ್ಲದೆಯೂ ಮಾಡುತ್ತಿರುವದು. ಉಸಿರಾಡುವದು, ಹೃದ ಯವು ಬಡಿದುಕೊಳ್ಳುವದು, ರಕ್ತದ ಚಲನೆ, ಪಿತ್ತವೇ ಮುಂತಾದ ರಸಗಳನ್ನು ಸಜ್ಜುಗೊಳಿಸುವದು, ಮಲಮೂತ್ರಗಳನ್ನು ಹೊರಕ್ಕೆ ನೂಕುವದು-ಮುಂತಾ ದ ವ್ಯಾಪಾರಗಳು ವ್ಯಕ್ತವಾದ ನಮ್ಮ ಸಂಕಲ್ಪವೇ ಇಲ್ಲದೆ ಒಂದೇಸಮನೆ ನಡೆಯುತ್ತಿರುವವು. ಹೀಗೆ ಈ ಪ್ರಾಣಶಕ್ತಿಯು ಬಗೆಬಗೆಯಾಗಿ ಕೆಲಸ ಮಾಡುತ್ತಿರುವದರಿಂದ ಅದರಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ-ಎಂಬ ಐದು ವೃತ್ತಿಗಳುಂಟೆಂದು ಕೆಲವು ಗ್ರಂಥಗಳಲ್ಲಿ ವರ್ಣಿಸಿರು ತ್ತದೆ. ಈ ಪ್ರಾಣವೃತ್ತಿಗಳನ್ನು ಪ್ರಾಣಭೇದಗಳೆಂದು ಕರೆಯುವದೂ ಉಂಟು. ಆದರೆ ದೇಹೇಂದ್ರಿಯಾದಿಗಳ ಸಂಬಂಧವಿರುವ ಎಚ್ಚರದವಸ್ಥೆಯಲ್ಲಿ ನಮಗೆ ಈ ಪ್ರಾಣಗಳ ಸಂಬಂಧವಿದೆಯೆಂದು ಊಹಿಸಿದರೂ ಊಹಿಸಬಹು ದು; ಯಾವ ಎರಡನೆಯ ವಸ್ತುವಿನ ಸಂಬಂಧವೂ ನಮಗಿಲ್ಲದ ಗಾಢನಿದ್ರೆ ಯಂಥ ಅವಸ್ಥೆಯಲ್ಲಿ ನಮಗೆ ಯಾವ ಕೆಲಸದ ಸಂಬಂಧವೂ ಇರುವದಿಲ್ಲ ವೆಂಬುದು ಸ್ಪಷ್ಟವಾಗಿದೆ. ನಾವು ಎಚ್ಚರವಾಗಿರುವಾಗ ಮತ್ತೊಬ್ಬರು ನಿದ್ರಿ ಸುತ್ತಿರುವದನ್ನು ನೋಡಿ ನಮ್ಮ ನಿದ್ರೆಯಲ್ಲಿಯೂ ನಾವು ಅರಿಯದಂತೆ ನಮ್ಮಲ್ಲಿ ವ್ಯಾಪಾರಗಳು ನಡೆಯುತ್ತಲೇ ಇರುವವೆಂದು ಊಹಿಸಬಹುದು, ನಿಜ. ಆದರೆ ಎಚ್ಚರದಲ್ಲಿ ನಮಗೆ ನಿದ್ರೆಯು ಅರ್ಥವಾಗುವದಿಲ್ಲ, ಊಹೆ ಯಾಗುತ್ತದೆ ; ನೇರಾಗಿ ಅನುಭವವಾಗುವ ನಮ್ಮ ನಿದ್ರೆಯಲ್ಲಿ ಯಾವ ಪ್ರಾಣವ್ಯಾಪಾರದ ಸುಳಿವೂ ಕಂಡುಬರುವದಿಲ್ಲ. ಊಹೆಗಿಂತ ಅನುಭವವೇ ತತ್ತ್ವನಿರ್ಣಯಕ್ಕೆ ಹೆಚ್ಚು ಬಲವಾದ ಸಾಧನವಾಗಿರುವದರಿಂದ ನಮ್ಮ

ಸ್ವರೂಪಕ್ಕೆ ಪ್ರಾಣದ ಅಥವಾ ಅದಕ್ಕೆ ಆಶ್ರಯವಾಗಿರುವ ಅಂತಃಕರಣ ಸಂಬಂಧವು ಎಳ್ಳಷ್ಟೂ ಇಲ್ಲವೆಂಬುವೇ ಸರಿಯಾದ ಅಭಿಪ್ರಾಯವಾಗಿರುತ್ತದೆ.

ಅಂತೂ ಪ್ರಾಣಶಕ್ತಿಗಳು ಅನೇಕವಾಗಿರುವದರಿಂದಲೂ ವ್ಯಾಪಾರ ನ್ನು ಹೊಂದುತ್ತಿರುವದರಿಂದಲೂ ನಮಗೆ ವಿಷಯವಾಗಿ ಅರಿಯಲ್ಪಡುವದ ರಿಂದಲೂ ಗಾಢನಿದ್ರೆಯಲ್ಲಿ ಅತ್ಯಂತವಾಗಿ ಇಲ್ಲವಾಗುವದರಿಂದಲೂ ಅವು ನಮಗಿಂತ ಬೇರೆಯಾದ ಜಡಸ್ವರೂಪವೇ; ಅವನ್ನು ಅರಿಯುವ ಚೇತನವಾದ ನಮ್ಮ ಸ್ವರೂಪವು ಅವಕ್ಕಿಂತಲೂ ಬೇರೆಯೇ ಎಂದು ಸಿದ್ಧವಾಯಿತು

## ನಾನು ಹೆಂಡತಿ, ಮಕ್ಕಳು, ಹೊಲ, ಹಣ– ಮುಂತಾದವುಗಳಿಗೆ ದೂರವಾಗಿರುವವನು

ಈ ರೀತಿಯಲ್ಲಿ ದೇಹೇಂದ್ರಿಯಗಳಾಗಲಿ ಮನೋಹಂಕಾರ ಬುದ್ಧಿ ಗಳಾಗಲಿ ಪ್ರಾಣಗಳಾಗಲಿ ನಮ್ಮ ಸ್ವರೂಪವಲ್ಲವೆಂದು ಅನುಭವದ ಆಧಾರದ ಮೇಲೆ ಮಾಡಿದ ವಿಚಾರದಿಂದ ಸ್ಪಷ್ಟವಾಯಿತಷ್ಟೆ. ಈಗ ಹೆಂಡಿರುಮಕ್ಕಳು- ಮುಂತಾದ ಮಮತೆಗೆ ಕಾರಣವಾಗಿರುವ ವಸ್ತುಗಳು ನಮ್ಮ ಸ್ವರೂಪಕ್ಕೆ ಸಂಬಂಧಪಟ್ಟಿರುವದಿಲ್ಲವೆಂದು ತಾನೇ ಇದರಿಂದ ಹೊರಡುತ್ತದೆ. ಏಕೆಂದರೆ ಅನಾತ್ಮವಾದ ದೇಹೇಂದ್ರಿಯಾದಿಗಳಲ್ಲಿ ನಾನೆಂಬ ಭಾವನೆಯಿರುವವರಿಗೇ ಹೆಂಡಿರು, ಮಕ್ಕಳು, ಹೊಲ, ಮನೆ, ಹಣ, ಕಾಸು– ಇವುಗಳು ನಮ್ಮವೆಂಬ ಭಾವನೆಯು ಗಟ್ಟಿಯಾಗಿರುತ್ತದೆ. ದೇಹಾತ್ಮಬುದ್ಧಿಯುಳ್ಳ ಅವಿವೇಕಿಗಳು ಕೆಲವರು ಈ ದಾರಾಪತ್ಯಾದಿಗಳೇ ತಾವೆಂದು ಭಾವಿಸುವಷ್ಟು ಅಭಿಮಾನ ವನ್ನು ತೋರ್ಪಡಿಸಿಕೊಳ್ಳುವರು. ಅಂಥವರು ತಮ್ಮ ಹೆಂಡಿರುಮಕ್ಕಳಿಗೆ ಸುಖವಾಗಿದ್ದರೆ ತಮಗೇ ಸುಖವಾದಂತೆಯೂ ಅವರಿಗೆ ದುಃಖವಾದರೆ ತಮಗೆ ದುಃಖವಾದಂತೆಯೂ ಭಾವಿಸುತ್ತಾರೆ; ಹೊಲ, ಮನೆ, ಹಣ, ಕಾಸು –ಮುಂತಾದವು ರಾಶಿಯಾದರೆ 'ಇನ್ನು ಗರಿಗಟ್ಟಿಕೊಂಡೆನು, ನನಗೇನೂ ಯೋಚನೆಯಿಲ್ಲ' ಎನ್ನುವರು; ಅವು ನಾಶವಾದರೆ "ಅಯ್ಯೋ ! ನಾನು ಹಾಳಾದೆನು !" ಎನ್ನುವರು. ಆದರೆ ದೇಹಾತ್ಮಬುದ್ಧಿಯು ತಪ್ಪುತಿಳಿವಳಿಕೆ ಯೆಂದೂ ದೇಹ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ– ಇವು ಯಾವವೂ ನಮ್ಮ ಸ್ವರೂಪಕ್ಕೆ ನಿಜವಾಗಿ ಸಂಬಂಧಪಟ್ಟಿಲ್ಲವೆಂದೂ ಇದುವರೆಗೆ ತಿಳಿಸಿ

ರುವ ವಿಚಾರಕ್ರಮದಿಂದ ಗೊತ್ತುಪಡಿಸಿಕೊಂಡವರಿಗೆ ದೇಹಕ್ಕೆ ಸಂಬಂಧಪಟ್ಟಿರುವ ಹೆಂಡಿರು, ಮಕ್ಕಳು-ಮುಂತಾದದ್ದರ ಸಂಬಂಧವು ಎಷ್ಟು ದೂರವಾಯಿತು ! ಈ ಹೆಂಡಿರು, ಮಕ್ಕಳು - ಮುಂತಾದವುಗಳು ನಮಗೆ ಸಂಬಂಧಪಟ್ಟಿರುವಂತೆ ತೋರುವದು ನಿಜ ; ಆದರೆ ಸ್ವಪ್ನದಲ್ಲಿಯೂ ನಮಗೆ ಹೀಗೆಯೇ ತೋರುವದಿಲ್ಲವೆ ? ಸ್ವಪ್ನದಲ್ಲಿ ಕಾಣುವ ಹೆಂಡಿರು ಮಕ್ಕಳು-ಮುಂತಾದವು ಆ ಕಾಲಕ್ಕೆ ನಮ್ಮವೆಂದೇ ತೋರುತ್ತಿದ್ದರೂ ಅವು ನಿಜವಾಗಿ ನಮಗೆ ಸಂಬಂಧಪಟ್ಟವುಗಳಾಗಿರುವದಿಲ್ಲವೆಂದು ನಾವು ನಿಶ್ಚಯಿಸಿರುವೆವಲ್ಲವೆ ? ಇದರಂತೆ ಇಲ್ಲಿ ತೋರುವ ಸಂಬಂಧವೂ ಬರಿಯ ತೋರಿಕೆ, ಅದು ನಿಜವಲ್ಲ-ಎಂದೇ ನಿಶ್ಚಯಿಸಬೇಕು.

## ನಾನು ಸಾಕ್ಷಿಯು, ನಿತ್ಯನು, ಪ್ರತ್ಯಗಾತ್ಮನು

ಈಗ ಇನ್ನೊಂದು ಪ್ರಶ್ನೆ ಹುಟ್ಟುವದು : ನಾನು, ನಾನು- ಎಂದು ನಾವು ವ್ಯವಹರಿಸುತ್ತಿರುವ ದೇಹವೇ ಮುಂತಾದವುಗಳಲ್ಲಿ ಯಾವದೊಂದೂ ನಾವಲ್ಲವಾದರೆ, ನಾನು ಎಂಬ ಅಹಂಕಾರವೂ ನಾವಲ್ಲವಾದರೆ, ಇವೆಲ್ಲವನ್ನೂ ಬಿಟ್ಟ ನಮ್ಮ ಸ್ವರೂಪವೆಂಬುದು ಯಾವದು ? ಅದು ಇದೆಯೆಂದು ನಿಶ್ಚಯಿಸುವದಾದರೂ ಹೇಗೆ ?

ಈ ಪ್ರಶ್ನೆಯನ್ನು ಕೇಳುವವರು ಹೊರಗಿನ ಅನಾತ್ಮದ ಕಡೆಗೇ ಬಲವಾದ ದೃಷ್ಟಿಯನ್ನಿಟ್ಟಿರುವರೆಂದು ಹೇಳಬೇಕಾಗಿದೆ. ಏಕೆಂದರೆ ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ- ಇವುಗಳೆಲ್ಲವೂ ವಿಷಯಗಳು, ಅರಿಯಲ್ಪಡತಕ್ಕವುಗಳು; ಇವನ್ನು ಅರಿಯುವ ನಮ್ಮ ಸ್ವರೂಪವು ಇವುಗಳಿಗಿಂತ ಬೇರೆ- ಎಂದು ಮತ್ತೆ ಮತ್ತೆ ತಿಳಿಸಿದ್ದಾಗಿರುತ್ತದೆ. ಹೀಗಿರುವಲ್ಲಿ ಅರಿಯಲ್ಪಡುವ ದೇಹಾದಿಗಳು ಯಾವದೂ ನಾನಲ್ಲವೆಂದಮಾತ್ರದಿಂದ ಅರಿಯುವ ನಾನೇ ಇಲ್ಲವೆಂದು ಹೇಗೆ ಸಿದ್ಧವಾದೀತು ?

**ಆಕ್ಷೇಪ :** ದೇಹೇಂದ್ರಿಯಗಳಲ್ಲಿ ಅರಿವು ಇಲ್ಲವೆಂದು ಒಪ್ಪಿಕೊಂಡರೂ ಅಂತಃಕರಣದಲ್ಲಿ ಅರಿವು ಇರುವವೆಂಬುದನ್ನು ನಾವೆಲ್ಲರೂ ಒಪ್ಪಲೇಬೇಕು ; ಏಕೆಂದರೆ ಅಂತಃಕರಣವನ್ನು ಉಪಯೋಗಿಸದೆ ನಮಗೆ ಯಾವಾಗಲೂ ಅರಿವಾದದ್ದೇ ಇಲ್ಲ. ಹೀಗಿರುವದರಿಂದ ನಮಗೆ ಅರಿವಿಗೆ ಆಶ್ರಯವಾಗಿರುವ ನಾನು ಎಂಬ ಅಹಂಕಾರವನ್ನು ಕೈಬಿಟ್ಟು ಅದಕ್ಕಿಂತ ಬೇರೊಂದು ಸ್ವರೂಪವಿರುವ

ವೆಂದು ಹೇಳಿದರೆ ಅದರ ಇರವನ್ನು ಗೊತ್ತುಪಡಿಸುವದು ಹೇಗಾದೀತು ? ಅದರಲ್ಲಿ ಅರಿವು ಇದೆಯೆಂಬುದನ್ನು ಗೊತ್ತುಪಡಿಸುವದಾದರೂ ಹೇಗಾದೀತು ? ನಾನು ಎಂಬ ಅಹಂಕಾರವು ತನಿನಿದ್ರೆಯಲ್ಲಿ ಇರುವದಿಲ್ಲವೆಂದು ನೀವು ಹೇಳಿರುವದು ನಿಜ ; ಆದರೆ ಆಗ ನಮಗೆ ಅರಿವೂ ಇರುವದಿಲ್ಲ. ಆ ಅನುಭವ ದಿಂದಲೂ ಅಂತಃಕರಣಕ್ಕಿಂತ ಹೆಚ್ಚಿನ ತತ್ತ್ವವು ಯಾವದೂ ನಮಗೆ ಗೋಚರ ವಾದಂತಾಗುವದಿಲ್ಲವಲ್ಲ !

**ಸಮಾಧಾನ :** ಅಂತಃಕರಣದಲ್ಲಿ ಅರಿವು ಇರುವದೆಂದು ನಮಗೆ ತೋರುವದು ನಿಜ. ಆದರೆ ಅಂತಃಕರಣವನ್ನು ನಾವು ಅರಿಯುತ್ತೇವೆ, ಅದನ್ನು ನಮ್ಮ ಅನುಭವಕ್ಕೆ ಗೋಚರವಾಗಿಸಿಕೊಳ್ಳುತ್ತೇವೆ. ಆದ್ದರಿಂದ ಅಂತಃಕರಣವೂ ವಿಷಯವೇ ಆಯಿತು ; ಅದನ್ನು ಕೂಡ ಅರಿಯುತ್ತಿರುವ ನಮ್ಮ ಸ್ವರೂಪವು ಬೇರೆಯೆಂದೂ ಸಿದ್ಧವಾಯಿತು. ಅಹಂಕಾರವು ವಸ್ತು ಗಳನ್ನು ಅರಿಯುವದರಿಂದ ಅದರಲ್ಲಿಯೇ ಅರಿವು ಇದೆ ಎನ್ನುವದಾದರೆ ಇಂದ್ರಿಯಗಳು ವಿಷಯಗಳನ್ನು ಅರಿಯುವದರಿಂದ ಅವುಗಳಲ್ಲಿಯೇ ಅರಿವು ಇರುವದೆಂದು ಏತಕ್ಕೆ ನಿರ್ಣಯಿಸಬಾರದು ? ಇಂದ್ರಿಯಗಳು ಅಂತಃಕರಣಕ್ಕೆ ಗೋಚರವಾಗುವದರಿಂದಲೂ ಅವುಗಳು ಅರಿಯುವದು, ಅರಿಯದಿರುವದು– ಇವುಗಳೂ ಅಂತಃಕರಣವನ್ನೇ ಹೊಂದಿಕೊಂಡಿರುವದರಿಂದಲೂ ಅವುಗಳಲ್ಲಿರು ವ ಅರಿವು ನಿಜವಾಗಿ ಅಂತಃಕರಣದ್ದೇ ಎನ್ನುವದಾದರೆ ಅಂತಃಕರಣವೂ ನಮ್ಮ ಸ್ವರೂಪಕ್ಕೆ ಗೋಚರವಾಗುವದರಿಂದಲೂ ಅದು ಅರಿಯುವದು, ಅರಿಯದಿರುವದು–ಇವೆರಡನ್ನೂ ಅರಿಯುವ ನಮ್ಮ ಸ್ವರೂಪವು ಅದಕ್ಕಿಂತ ಬೇರೆಯೆಂದೂ ಆ ಸ್ವರೂಪವನ್ನೇ ಹೊಂದಿಕೊಂಡು ಅರಿಯುವ ಅಂತಃಕರಣ ದಲ್ಲಿರುವ ಅರಿವು ನಿಜವಾಗಿ ನಮ್ಮ ಸ್ವರೂಪದ್ದೇ ಎಂದೂ ಸಿದ್ಧವಾಗುತ್ತದೆ. ಆಗ ಚೈತನ್ಯವೇ ನಮ್ಮ ಸ್ವರೂಪವೆಂದು ಏರ್ಪಡುತ್ತದೆ.

ಈ ನಮ್ಮ ಸ್ವರೂಪವಾದ ಚೈತನ್ಯವು **ಸಾಕ್ಷಿ**ಯಾಗಿರುತ್ತದೆ, ಎಂದರೆ ಅನಾತ್ಮವೆಲ್ಲವನ್ನೂ ನೇರಾಗಿ ಅರಿಯುವದಾಗಿರುತ್ತದೆ[1]. ಮನಸ್ಸು,

1. ಮನಸ್ಸು, ಬುದ್ಧಿ– ಈ ಶಬ್ದಗಳನ್ನು ಸಂಕಲ್ಪಾದಿಗಳನ್ನು ಮಾಡುವ ಮತ್ತು ನಿಶ್ಚಯಿಸುವ ಅಂತಃಕರಣವೃತ್ತಿ ಎಂಬ, ಅಥವಾ ಆ ವೃತ್ತಿಗಳುಳ್ಳ ಅಂತಃಕರಣ ವೆಂಬ ಅರ್ಥದಲ್ಲಿಯೇ ಅಲ್ಲದೆ ಅಂತಃಕರಣವೆಂಬ ಅರ್ಥದಲ್ಲಿಯೂ ಉಪಯೋಗಿಸು

ಇಂದ್ರಿಯ-ಮುಂತಾದವು ವಿಷಯಗಳನ್ನು ನೇರಾಗಿ ಅರಿಯುವದಿಲ್ಲ. ಯಾವದಾದರೊಂದು ಸಹಾಯವು ಇದ್ದರೇ ಅರಿಯುತ್ತವೆ. ಉದಾಹರಣೆಗೆ ಮನಸ್ಸಿಗೆ ಒಂದು ಸುಂದರಚಿತ್ರವನ್ನು ಅರಿಯಬೇಕಾದರೆ ಅದಕ್ಕೆ ನೋಟದಿಂದ್ರಿಯದ ಸಹಾಯವು ಬೇಕು, ಆ ಇಂದ್ರಿಯಕ್ಕೆ ಕಣ್ಣೆಂಬ ಗೋಳಕವಿರಬೇಕು, ಕಣ್ಣಿಗೆ ಬೆಳಕಿನ ಸಹಾಯವಿರಬೇಕು. ಹೀಗೆ ಮಿಕ್ಕ ವಿಷಯಗಳೆಲ್ಲವೂ ನಡುವೆ ಯಾವದಾದರೂ ವ್ಯವಧಾನವನ್ನಿಟ್ಟುಕೊಂಡೇ ಅರಿಯುತ್ತವೆ. ಆದರೆ ಈ ನಮ್ಮ ಸ್ವರೂಪವು ಅಂತಃಕರಣವನ್ನು, ಅಥವಾ ಅನಾತ್ಮವೆಲ್ಲವನ್ನೂ, ಅರಿಯುವದು ಹೀಗಲ್ಲ; ಅದು ಯಾವದೊಂದು ವ್ಯವಧಾನವೂ ಇಲ್ಲದೆ, ಯಾವದೊಂದು ಕಾರಣವನ್ನೂ ಬಯಸದೆ, ನೇರಾಗಿ ತನ್ನ ವಿಷಯವನ್ನು ಬೆಳಗಿಬಿಡುತ್ತದೆ.

ಈ ಕಾರಣದಿಂದ ಅದು **ನಿತ್ಯ**ವಾಗಿರುತ್ತದೆ. ನಿತ್ಯವೆಂದರೆ ಕಾಲದ ಕಟ್ಟಿಲ್ಲದೆ ಇರುವದು. ಕಾಲವೆಂಬುದು ನಮ್ಮ ಎಚ್ಚರದಲ್ಲಿ ನಮ್ಮ ಬುದ್ಧಿಗೆ ಹೊಳೆಯುವ ಒಂದಾನೊಂದು ತತ್ತ್ವವು. ಎಚ್ಚರದಲ್ಲಿ ನಮಗೆ ತೋರುವ ಎಲ್ಲಾ ವಸ್ತುಗಳೂ ಕಾಲದಲ್ಲಿಯೇ ತೋರಿಕೊಳ್ಳಬೇಕಾಗಿರುವದರಿಂದ ಅವುಗಳನ್ನು ಕಾಲದ ಕಟ್ಟುಳ್ಳ ಅನಿತ್ಯವಸ್ತುಗಳೆಂದು ಎಣಿಸಬೇಕಾಗುವದು. ಆದರೆ ಕಾಲಸಹಿತವಾದ ಸಮಸ್ತ ಅನಾತ್ಮವನ್ನೂ ತನ್ನ ಚೈತನ್ಯದಿಂದ ಬೆಳಗುತ್ತಿರುವ ನಮ್ಮ ಸ್ವರೂಪಕ್ಕೆ ಕಾಲವು ಯಾವ ಕಟ್ಟನ್ನೂ ಏರ್ಪಡಿಸಲಾರದು. ಆದ್ದರಿಂದ ಈ ಚೈತನ್ಯವು ಕಾಲಕ್ಕೆ ಕಟ್ಟುಬಿದ್ದಿರುವ ವಸ್ತುಗಳಂತೆ ಮಾರ್ಪಾಡುಗಳನ್ನು ಹೊಂದಲಾರದು. ಈ ಕಾರಣದಿಂದ ಇದನ್ನು **ಕೂಟಸ್ಥನಿತ್ಯ**ವೆಂದೂ ಕರೆಯುವರು. ಕೂಟವೆಂದರೆ ಬೆಟ್ಟದಂತೆ ರಾಶಿಯಾಗಿರುವ ಪದಾರ್ಥವು; ಬೆಟ್ಟವು ಹೇಗೆ ಎಂಥ ಬಿರುಗಾಳಿ ಬಂದರೂ ಅಲುಗಾಡದೆ ಇರುವದೋ, ಹಾಗೆಯೇ ಆ ನಮ್ಮ ಸ್ವರೂಪವಾದ ಚೈತನ್ಯವು ತನ್ನ ಸ್ವರೂಪದಲ್ಲಿ ಒಂದಿಷ್ಟೂ ಹೆಚ್ಚುಕಡಿಮೆಯಾಗದೆ ಇರುವದು. ನಿತ್ಯವೆಂಬ ಶಬ್ದಕ್ಕೆ ರೂಢಿಯಲ್ಲಿ ಮತ್ತೊಂದು ಅರ್ಥವೂ ಇರುತ್ತದೆ. ಯಾವದು

---

ತ್ತಾರೆ. ಈ ಗ್ರಂಥದಲ್ಲಿ ನಾವು ಮನಸ್ಸು ಎಂಬ ಶಬ್ದವನ್ನು ಅಂತಃಕರಣವೆಂಬರ್ಥದಲ್ಲಿಯೇ ಬಹಳವಾಗಿ ಉಪಯೋಗಿಸಿರುವೆವು.

ತಾನು ಮಾರ್ಪಾಡುಗಳನ್ನು ಪಡೆಯುತ್ತಲೇ ಇದ್ದರೂ ಅದೇ ಇದು ಎಂಬ ಬುದ್ಧಿಯನ್ನುಂಟುಮಾಡುತ್ತಾ ಕಾಲದಲ್ಲಿ ಇದ್ದುಕೊಂಡೇ ಇರುವದೋ ಅದನ್ನೂ ನಾವು ನಿತ್ಯವೆನ್ನುವೆವು. ಉದಾಹರಣೆಗೆ ಈ ನಮ್ಮ ಭೂಮಿಯು ಬಹುಕಾಲದಿಂದಲೂ ಹೀಗೆಯೇ ಇರುವದೆಂದು ನಾವು ನಂಬಿರುತ್ತೇವೆಯಷ್ಟೆ. ಆದರೆ ಈಗ ಸಾವಿರ ವರ್ಷಗಳ ಹಿಂದೆ ಇದ್ದ ಭೂಮಿಯೋ ಅಚ್ಚಳಿಯದಂತೆ ಈಗ ಇರುವದಿಲ್ಲ; ಇನ್ನು ಸಾವಿರ ವರ್ಷಗಳ ಮೇಲೆ ಇದು ಈಗಿರುವಂತೆ ಇರುವದೂ ಇಲ್ಲ. ಆದರೂ ಭೂಮಿ ಎಂಬ ರೂಪದಿಂದ ಅದು ಅಷ್ಟರಮಟ್ಟಿಗೆ ನಿತ್ಯವೆನಿಸುವದು. ಭೌತಿಕವಿಜ್ಞಾನದ ದೃಷ್ಟಿಯಂತೆ ನೋಡಿದರೆ ದ್ರವ್ಯವು ಎಂದಿಗೂ ನಾಶವಾಗುವದಿಲ್ಲ; ಅದು ಮಾರ್ಪಾಡುಗಳನ್ನು ಪಡೆಯಬಹುದೇ ಹೊರತು ಅದರ ತಿರುಳು ಇಲ್ಲವಾಗುವದಿಲ್ಲ. ಆ ಮತದಂತೆ ನಮ್ಮ ಭೂಮಿಯು ಒಂದಾನೊಂದು ಕಾಲದಲ್ಲಿ ಸಂಪೂರ್ಣವಾಗಿ ನಾಶವಾಯಿತೆಂದರೂ ಇದರ ತಿರುಳಾಗಿರುವ ದ್ರವ್ಯವು ಮತ್ತೊಂದು ರೂಪದಲ್ಲಿ ಇದ್ದುಕೊಂಡೇ ಇರಬೇಕಾಗುವದಷ್ಟೆ. ಆದ್ದರಿಂದ ಭೂಮಿಯು ಅಥವಾ ಅದರ ತಿರುಳಾದ ದ್ರವ್ಯವು ಮಾರ್ಪಾಡಾಗುತ್ತಾ ನಿತ್ಯವಾಗಿರುವ ವಸ್ತುವೆಂದಾಯಿತು. ಇಂಥ ವಸ್ತುಗಳಿಗೆ **ಪರಿಣಾಮಿನಿತ್ಯ**ವೆಂದು ಹೆಸರು. ಆದರೆ ನಮ್ಮ ಸ್ವರೂಪವಾದ ಚೈತನ್ಯವು ನಿತ್ಯವೆಂದರೆ ಹೀಗಲ್ಲ; ಏಕೆಂದರೆ ಅದು ಕಾಲದಲ್ಲಿರುವದೂ ಇಲ್ಲ, ಪರಿಣಾಮವಾಗುವದೂ ಇಲ್ಲ. ಅದು **ನಿರ್ವಿಕಾರ**ವಾದ ಎಂದರೆ ಯಾವ ಮಾರ್ಪಾಡಿಗೂ ಒಳಗಾಗದ **ಕೂಟಸ್ಥನಿತ್ಯ**ವಸ್ತುವಾಗಿರುತ್ತದೆ.

ಇದೂ ಅಲ್ಲದೆ ಈ ಚೈತನ್ಯವೇ **ಪ್ರತ್ಯಗಾತ್ಮನು**; ನಮ್ಮೊಳಗಿರುವ ನಮ್ಮ ನಿಜವಾದ ಸ್ವರೂಪವು. ಈ ಮೊದಲೇ ವರ್ಣಿಸಿರುವಂತೆ ನಾವು ದೇಹವನ್ನು ನಾನೆಂದು ಕೆಲವು ವೇಳೆಗಳಲ್ಲಿ ವ್ಯವಹರಿಸುವೆವು. ಇಂದ್ರಿಯಗಳನ್ನು ನಾನೆಂದು ಕೆಲವು ವೇಳೆಗಳಲ್ಲಿ ವ್ಯವಹರಿಸುವೆವು. ಆದರೆ ದೇಹದ ಇರವು ಇಂದ್ರಿಯಜ್ಞಾನವನ್ನು ಹೊಂದಿಕೊಂಡಿರುವದರಿಂದ ಇಂದ್ರಿಯಗಳನ್ನು ದೇಹಕ್ಕಿಂತ ಒಳಗಿನ ಇರವಿನ ತಿರುಳು, ಎಂದರೆ ನಮ್ಮ ನಿಜವಾದ ಸ್ವರೂಪವು, ಎಂದು ಭಾವಿಸಬಹುದು. ಇದೇ ರೀತಿಯಲ್ಲಿ ವಿಚಾರಮಾಡುತ್ತಾ ಹೋದರೆ ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ- ಇವುಗಳು ಇನ್ನೂ ಹೆಚ್ಚಿನ ಅರ್ಥದಲ್ಲಿ ನಮ್ಮ ಒಳಗಿನ ಸ್ವರೂಪವಾಗುವವು ; ಏಕೆಂದರೆ ಇವುಗಳಲ್ಲಿ ಒಂದನ್ನು

ಬಿಟ್ಟು ಅದರ ಮುಂದಿನದನ್ನು ನೋಡಿದರೆ ಹಿಂದಿನದಕ್ಕಿಂತ ಮುಂದಿನದು ಹೆಚ್ಚಿನ ಇರವು ಉಳ್ಳದ್ದೆಂದೂ, ಆ ಮುಂದಿನದರ ಇರವು ಮತ್ತೊಂದನ್ನು ಅವಲಂಬಿಸಿಕೊಂಡಿರುವದೆಂದೂ, ಆ ಮುಂದಿನದರ ಇರವು ಮತ್ತೊಂದನ್ನು ಅವಲಂಬಿಸಿಕೊಂಡಿರುವದೆಂದೂ, ನಮಗೆ ತಿಳಿದುಬರುತ್ತದೆ. ಈ ವಿಚಾರದಿಂದ ನಾವು 'ನಾನು' ಎಂದು ತೋರಿಕೊಳ್ಳುತ್ತಿರುವ ಅಹಂಕಾರದವರೆಗೂ ಹೋಗಿ ನಿಲ್ಲಬಹುದು. ಆದರೆ ಹೀಗೆ ಅಹಂಕಾರದವರೆಗೆ ಹೋದಮೇಲೂ ನಮ್ಮ ನಿಜವಾದ ಆತ್ಮನು ಎಂದರೆ ಸ್ವರೂಪವು ಸಿಕ್ಕಿದಂತೆ ಆಗುವದಿಲ್ಲ ; ಏಕೆಂದರೆ ಮೇಲೆ ತೋರಿಸಿರುವಂತೆ ಅಹಂಕಾರಾದಿದೇಹಾಂತವಾಗಿರುವದನ್ನೆಲ್ಲ ತನ್ನ ಚೈತನ್ಯದಿಂದ ಬೆಳಗುತ್ತಿರುವ ಸಾಕ್ಷಿಯು ಈ ಅಹಂಕಾರಕ್ಕೂ ಇರವನ್ನು ಕೊಟ್ಟಿರುವದು. ಆದ್ದರಿಂದ ಈ ಸಾಕ್ಷಿಚೈತನ್ಯವೇ ನಮ್ಮ ತೀರ ಒಳಗಿನ ಆತ್ಮನು; ಪರಮಾರ್ಥದೃಷ್ಟಿಯಿಂದ ಅದನ್ನೇ ನಾವು 'ನಾನು' ಎಂದು ಕರೆದುಕೊಳ್ಳಬೇಕು. ಸಾಕ್ಷಿಚೈತನ್ಯದ ಬೆಳಕು ಒಂದಿಷ್ಟಿಷ್ಟು ಅಹಂಕಾರಾದಿಗಳಲ್ಲಿ ಬಿದ್ದಿರುವದರಿಂದಲೇ ಅವೂ 'ನಾನು' ಎಂಬ ವ್ಯವಹಾರಕ್ಕೆ ವಿಷಯವಾಗಿರುತ್ತವೆ. ಸರಿಯಾಗಿ ನೋಡಿದರೆ ಅಹಂಕಾರಾದಿಗಳು ನಮ್ಮ ಆತ್ಮನಲ್ಲ. ಅವು ತಪ್ಪುತಿಳಿವಳಿಕೆಯಿಂದ ನಮ್ಮ ಆತ್ಮನಾಗಿವೆ. ಆದ್ದರಿಂದ ಅಹಂಕಾರವೇ ಮುಂತಾದ ಎಲ್ಲಕ್ಕೂ ಒಳಗಿದ್ದುಕೊಂಡು ಅವುಗಳೆಲ್ಲಕ್ಕೂ ಆತ್ಮನಾಗಿರುವ ಸಾಕ್ಷಿಚೈತನ್ಯವೇ ನಮ್ಮ **ಪರಮಾತ್ಮನು**, ಎಂದರೆ ತಪ್ಪುತಿಳಿವಳಿಕೆಯ ಆತ್ಮರಿಗೆಲ್ಲರಿಗಿಂತಲೂ ಹೆಚ್ಚಾದ ನಿಜವಾದ ಅರ್ಥದಲ್ಲಿ ಆತ್ಮನಾಗಿರುವ **ಪ್ರತ್ಯಗಾತ್ಮನು.**

## ನಾನು ಶಿವನು

ಯಾರು ಈ ರೀತಿಯಲ್ಲಿ ಆತ್ಮಾನಾತ್ಮವಿವೇಕವನ್ನು ಮಾಡಿಕೊಂಡು ತಮ್ಮ ಪ್ರತ್ಯಗಾತ್ಮನನ್ನು ಕಂಡುಕೊಂಡಿರುವರೋ ಅವರಿಗೆ ನಾವು ಜಗತ್ತಿನೊಳಗೆ ಇದ್ದುಕೊಂಡಿರುವೆವೆಂಬ ಭ್ರಾಂತಿಯಾಗುವದಿಲ್ಲ. ಜಗತ್ತಿನೊಳಗೆ ಕಾಣುತ್ತಿರುವ ದೇಹಾದಿಗಳೇ ತಾವೆಂಬ ಭ್ರಾಂತಿಯೂ ಆಗುವದಿಲ್ಲ ; ತಮ್ಮಂತೆ ಅನೇಕರು ಈ ಜಗತ್ತಿನೊಳಗೆ ಇದ್ದುಕೊಂಡಿರುವರೆಂಬ ಮತ್ತು ಅವರಲ್ಲಿ ಶತ್ರು, ಮಿತ್ರ, ಉದಾಸೀನ- ಮುಂತಾದ ಭಾವವು ಇರುವದೆಂಬ ಭ್ರಾಂತಿಯೂ ಆಗುವದಿಲ್ಲ. ಇವೆಲ್ಲಕ್ಕೂ ಆಧಾರವಾಗಿ ಇವುಗಳ ಸೋಂಕು

ಒಂದಿಷ್ಟೂ ಇಲ್ಲದ ಶಿವಸ್ವರೂಪರೇ ತಾವೆಂದು ಅವರು ಅನುಭವದಿಂದ ಕಂಡು ಕೊಳ್ಳುವರು. **"ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪಿ ಸರ್ವಭೂತಾನ್ತರಾತ್ಮಾ । ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥"** (ಶ್ವೇತಾಶ್ವತರ ೬–೧೧). "ಒಬ್ಬ ದೇವನೇ ಸಮಸ್ತಪ್ರಾಣಿಗಳಲ್ಲಿಯೂ ಅಡಗಿರುತ್ತಾನೆ. ಅವನು ಸರ್ವ ವ್ಯಾಪಿಯು, ಸಮಸ್ತಪ್ರಾಣಿಗಳಿಗೂ ಒಳಗಿರುವ ಆತ್ಮನು, ಕರ್ಮಗಳಿಗೆ ಒಡೆಯನು, ಸಮಸ್ತಪ್ರಾಣಿಗಳಲ್ಲಿಯೂ ನೆಲೆಸಿರುವವನು, ಸಾಕ್ಷಿಯು, ಚೈತನ್ಯಸ್ವರೂಪನು, ಕೇವಲನಾಗಿರುವವನು; ಯಾವ ಗುಣದ ಸಂಬಂಧವೂ ಇಲ್ಲದವನು"– ಎಂದು ಶ್ರುತಿಯಲ್ಲಿ ಹೇಳಿರುವ ಈಶ್ವರನೂ ತಾವೂ ಒಂದೇ ಎಂಬ ಹೆಚ್ಚಿನ ಅರಿವು ಇಂಥ ಮಹಾತ್ಮರಿಗೆ ಮಾತ್ರ ಉಂಟಾಗುತ್ತದೆ.

ಶಿವ ಎಂದರೆ ಮಂಗಲಸ್ವರೂಪವು. ನಮ್ಮೆಗಳ ಆತ್ಮನಾಗಿರುವ ಪರಮೇಶ್ವರನು ಅತ್ಯಂತಕಲ್ಯಾಣಗುಣಸ್ವರೂಪನಾಗಿರುತ್ತಾನೆ ; ಅವನಲ್ಲಿ ಅಮಂಗಲರೂಪವಾದ ಯಾವ ಕುಂದುಕೊರತೆಗಳೂ ಇರುವದಿಲ್ಲ. ಆತನು ಯಾವಾಗಲೂ ಕಲ್ಯಾಣಕ್ಕೆ ಆಶ್ರಯನಾಗಿರುತ್ತಾನೆ ; ಲೋಕದಲ್ಲಿ ಮಂಗಲ ರೂಪವೆಂದು ಭಾವಿಸಿರುವದೆಲ್ಲವೂ ಆತನನ್ನೇ ಆಶ್ರಯಿಸಿಕೊಂಡಿರುತ್ತದೆ ; ಏಕೆಂದರೆ ಆತನೇ ಅದರ ಆತ್ಮನಾಗಿರುತ್ತಾನೆ. ಯಾರು ಆತನನ್ನು ನೆನೆಯು ತ್ತಿರುವರೋ ಅವರ ಇಷ್ಟಾರ್ಥಗಳೆಲ್ಲವೂ ನೆರವೇರುವವು ; ಏಕೆಂದರೆ ನಮ್ಮ ನಿಜವಾದ ಆತ್ಮಸ್ವರೂಪವನ್ನು ನಾವು ಪಡೆದುಕೊಂಡು ಅಲ್ಲಿಯೇ ನೆಲೆನಿಂತರೇ ನಾವು ಕೃತಕೃತ್ಯರಾಗುವೆವು. ಈ ಎಲ್ಲಾ ಕಾರಣಗಳಿಂದ ಆ ಪರಮೇಶ್ವರನನ್ನು **ಶಿವ**ನೆಂದು ಶ್ರುತಿಸ್ಮೃತಿಗಳಲ್ಲಿ ಕರೆದಿರುತ್ತದೆ. ಈ ಶ್ಲೋಕದಲ್ಲಿ ವರ್ಣಿಸಿರುವ ಆತ್ಮಸ್ವರೂಪವನ್ನು ಅನುಭವದಿಂದ ಕಂಡುಕೊಂಡವರು ತಾವು ಆ ಶಿವ ಸ್ವರೂಪರೆಂಬುದನ್ನು ನಿಶ್ಚಯಿಸಿಕೊಂಡು ನಿಶ್ಚಿಂತರಾಗಿರುವರು.

# ೨. ಜೀವತ್ವಭ್ರಾಂತಿಯ ಪರಿಹಾರ

ನಾವು ನಿಜವಾಗಿಯೂ ಶಿವಸ್ವರೂಪರೇ ಆಗಿದ್ದರೆ ನಾವು ಜೀವರೆಂಬ ಭಾವನೆಯು ಉಂಟಾಗಿರುವದು ಹೇಗೆ? ಶಿವನ ಸ್ವರೂಪದಲ್ಲಿಲ್ಲದ ಸುಖ ದುಃಖಾದಿಗಳು ನಮ್ಮಲ್ಲಿ ಇರುವಂತೆ ತೋರುವದಕ್ಕೆ ಕಾರಣವೇನು ? ಇವು ನಿಜವಾಗಿಲ್ಲವೇ ಇಲ್ಲವೆನ್ನುವದಾದರೆ ಜನರೆಲ್ಲರಿಗೂ ಅವುಗಳಿರುವವೆಂದೇ ತೋರುತ್ತಿರುವದಕ್ಕೆ ಕಾರಣವೇನು? ನಾನು ಜೀವನಲ್ಲವೆಂದೂ ಜೀವತ್ವವೇ ಕಲ್ಪಿತವೆಂದೂ ಹೇಳುವ ವೇದಾಂತಿಗಳೂ ಮಿಕ್ಕವರಂತೆಯೇ ವ್ಯವಹರಿಸುತ್ತಿರುವಾಗ ಜೀವತ್ವವು ಹೋಗುವದೆಂಬುದಕ್ಕೆ ಪ್ರಮಾಣವಾದರೂ ಏನು ?– ಎಂಬ ಶಂಕೆಯು ನಮ್ಮಲ್ಲಿ ಕೆಲವರಿಗೆ ಉಂಟಾಗಬಹುದು. ಇದರ ಪರಿಹಾರಕ್ಕಾಗಿ ಈ ಮುಂದಿನ ಶ್ಲೋಕವು ಬಂದಿರುತ್ತದೆ :—

**ರಜ್ಜ್ವಜ್ಞಾನಾದ್ಭಾತಿ ರಜ್ಜೌ ಯಥಾಹಿಃ**
**ಸ್ವಾತ್ಮಾಜ್ಞಾನಾದಾತ್ಮನೋ ಜೀವಭಾವಃ ।**
**ಆಪ್ತೋಕ್ತ್ಯಾ ಹಿ ಭ್ರಾನ್ತಿನಾಶೇ ಸ ರಜ್ಜು-**
**ರ್ಜೀವೋ ನಾಹಂ ದೇಶಿಕೋಕ್ತ್ಯಾ ಶಿವೋಽಹಮ್ ॥೨॥**

**ಪ್ರತಿಪದಾರ್ಥ :–** ರಜ್ಜ್ವಜ್ಞಾನಾತ್– ಹಗ್ಗವನ್ನು ತಿಳಿಯದೆ ಇರುವದರಿಂದ ರಜ್ಜೌ–ಹಗ್ಗದಲ್ಲಿ, ಯಥಾ–ಹೇಗೆ, ಅಹಿಃ–ಹಾವು, ಭಾತಿ–ತೋರುತ್ತದೆಯೋ ಹಾಗೆ ಸ್ವಾತ್ಮಾಜ್ಞಾನಾತ್–ತನ್ನ ಆತ್ಮನನ್ನು ತಿಳಿಯದೆ ಇರುವದರಿಂದ, ಆತ್ಮನಃ–ಆತ್ಮನಿಗೆ, ಜೀವಭಾವಃ–ಜೀವತ್ವವು (ತೋರುತ್ತದೆ). ಹಿ–ಏಕೆಂದರೆ, ಆಪ್ತೋಕ್ತ್ಯಾ–ಬಲ್ಲವರು ತಿಳಿಸುವದರಿಂದ, ಭ್ರಾನ್ತಿನಾಶೇ–ಭ್ರಾಂತಿಯು ಹೋಗಲಾಗಿ, ಸಃ–ಅದು, ರಜ್ಜುಃ–ಹಗ್ಗವಾಗುವದು, (ಇದರಂತೆಯೇ) ದೇಶಿಕೋಕ್ತ್ಯಾ–ಗುರುಗಳ ವಚನದಿಂದ, ಅಹಂ–ನಾನು, ಜೀವಃ–ಜೀವನು, ನ–ಅಲ್ಲ, ಅಹಂ–ನಾನು, ಶಿವಃ–ಶಿವನು.

೨. ಹಗ್ಗವೆಂದು ತಿಳಿಯದೆ ಇರುವದರಿಂದ ಹಗ್ಗದಲ್ಲಿ ಹಾವು ತೋರುವಂತೆ ತನ್ನ ಆತ್ಮನನ್ನು ಅರಿತುಕೊಳ್ಳದ್ದರಿಂದ ಆತ್ಮನಲ್ಲಿ ಜೀವತ್ವವು ತೋರುತ್ತಿರುವದು. ಬಲ್ಲವರು ಇದು ಹಗ್ಗವೆಂದು ತಿಳಿಸ

ಲಾಗಿ ಅದು ಹಗ್ಗವೇ ಆಗಿಬಿಡುವಂತೆ ಸದ್ಗುರುಗಳ ಉಪದೇಶದಿಂದ ನಾನು ಜೀವನಲ್ಲ, ಶಿವನೇ ಆಗಿರುವೆನು.

## ಹಗ್ಗದ ಹಾವಿನ ದೃಷ್ಟಾಂತ

ನಮ್ಮ ನಿಜವಾದ ಸ್ವರೂಪವನ್ನು ತಿಳಿಯದೆ ಇರುವದರಿಂದ ನಾವು ಜೀವರು–ಎಂಬ ಭ್ರಾಂತಿಯುಂಟಾಗಿರುತ್ತದೆ. ನಮ್ಮ ನಿಜವಾದ ಸ್ವರೂಪವನ್ನು ಅರಿತುಕೊಂಡಕೂಡಲೆ ಈ ಭ್ರಾಂತಿಯು ತೊಲಗಿಬಿಡುತ್ತದೆ. ಇದಕ್ಕೊಂದು ದೃಷ್ಟಾಂತವನ್ನು ಕೊಡಬಹುದು : ನಸುಗತ್ತಲೆಯಲ್ಲಿ ಬೀದಿಯಲ್ಲಿ ಬಿದ್ದಿರುವ ಹಗ್ಗವನ್ನು ನೋಡಿ ಹಾವೆಂದು ಭ್ರಾಂತಿಪಟ್ಟ ಅನುಭವವು ನಮಗೆಲ್ಲರಿಗೂ ಇದೆಯಷ್ಟೆ ; ಹಗ್ಗದ ನಿಜಸ್ವರೂಪವನ್ನು ಅರಿಯದ್ದರಿಂದಲೇ ಅಲ್ಲವೆ, ಆ ಭ್ರಾಂತಿಯುಂಟಾಗುವದು ? ಭ್ರಾಂತಿಯಿರುವಾಗ ಹಾವೆಂದೇ ತೋರಿದರೂ ಇದು ಹಗ್ಗವು ಎಂಬ ಅನುಭವವು ಬಂದಕೂಡಲೆ ಆ ಭ್ರಾಂತಿಯು ಹೋಗಿಬಿಡುತ್ತದೆ. ಈ ದೃಷ್ಟಾಂತದಲ್ಲಿ ಭ್ರಾಂತಿಯಿಂದ ತೋರಿದ ಹಾವಿನಂತೆಯೇ ದಾರ್ಷ್ಟಾಂತಿಕದಲ್ಲಿ ಜೀವತ್ವವು ತೋರುತ್ತಿರುವದು ಎಂಬುದು ವೇದಾಂತದ ಸಿದ್ಧಾಂತವಾಗಿರುತ್ತದೆ.

ದೃಷ್ಟಾಂತವನ್ನು ಈಗ ಸ್ವಲ್ಪ ವಿವರವಾಗಿ ವಿಚಾರಮಾಡೋಣ. ಹಗ್ಗದಲ್ಲಿ ಭ್ರಾಂತಿಯಿಂದ 'ಹಾವು'ಎಂದು ತೋರಿಕೊಂಡ ಪದಾರ್ಥವು ಯಾವದು? ಅದು ಹಗ್ಗಕ್ಕಿಂತ ಬೇರೆಯಾಗಿರುವದೆ ? ಇಲ್ಲ. ಏಕೆಂದರೆ ಸರಿಯಾದ ಅರಿವು ಉಂಟಾದಾಗ 'ಇದು ಹಗ್ಗವೇ, ಹಾವಲ್ಲ'– ಎಂದು ಅನುಭವವಾಗುತ್ತದೆ. ನಿಜವಾದ ಹಾವೇ ನಮಗೆ ಭ್ರಾಂತಿಯಲ್ಲಿ ತೋರುತ್ತದೆ ಎಂದೂ ಯಾರೂ ಇಟ್ಟುಕೊಳ್ಳುವದಿಲ್ಲ ; ಏಕೆಂದರೆ ಭ್ರಾಂತಿಯು ತೊಲಗುತ್ತಲೂ ಆ ಹಾವು ಎಲ್ಲಿಗೆ ಹೋಯಿತೆಂಬುದನ್ನು ಗೊತ್ತುಪಡಿಸುವದು ಯಾರಿಂದಲೂ ಆಗುವದಿಲ್ಲ. ಹಾಗೆ ಗೊತ್ತುಪಡಿಸುವದಕ್ಕೆ ವಿವೇಕಿಗಳಾದವರು ಯಾರೂ ಪ್ರಯತ್ನಿಸುವದಿಲ್ಲ. 'ಹಗ್ಗದ ಹಾವು ಕಡಿದು ಇಂಥವರು ಸತ್ತರು' ಎಂದು ಯಾರೂ ಕಂಡು ಕೇಳಿದ್ದಿಲ್ಲ. ಹಗ್ಗವನ್ನೇ ತುಳಿದರೂ 'ಹಾವನ್ನು ತುಳಿದೆನು. ಅದು ಕಡಿದು ವಿಷವೇರಿದೆ'–ಎಂಬ ಸುಳ್ಳುಭಾವನೆಯುಂಟಾಗಿ ಯಾರಿಗಾದರೂ ಮರಣವಾಗಿರಬಹುದಾದರೂ ಆ ಮರಣಕ್ಕೆ ನಿಜವಾಗಿ ಒಂದು ಹಾವು ಕಾರಣವಾಯಿ

ತೆಂದು ನಾವುಗಳು ಭಾವಿಸುವದಿಲ್ಲ. ಆ ಕಾಲಕ್ಕೆ ನಮ್ಮ ಮನೋಭಾವನೆಯೇ ಹಾವಾಗಿ ಪರಿಣಮಿಸಿತ್ತೆಂದು ತರ್ಕಿಸುವದೂ ನಮಗೆ ಒಪ್ಪಿತವಾಗುವದಿಲ್ಲ ; ಏಕೆಂದರೆ ನನ್ನ ಮನಸ್ಸು ಹಾವಾಗಿ ಪರಿಣಮಿಸಿತ್ತು ಎಂದು ಯಾರಿಗೂ ಅನುಭವವುಂಟಾಗುವದಿಲ್ಲ. 'ಇಲ್ಲಿ ಹಾವು ಇರಲೇ ಇಲ್ಲ. ಇದು ಹಗ್ಗವೇ'- ಎಂದು ನಮಗೆ ಉಂಟಾಗುವ ತಿಳಿವಳಿಕೆಯೇ ಭ್ರಾಂತಿಯಲ್ಲಿ ಯಾವ ಬಗೆಯ ನಿಜವಾದ ಹಾವೂ ಇರಲಿಲ್ಲವೆಂಬುದಕ್ಕೆ ಸಾಕಾಗಿರುತ್ತದೆ. ಭ್ರಾಂತಿಯ ಕಾಲಕ್ಕೆ ಹಗ್ಗವೇ ಹಾವಾಗಿತ್ತು ಎಂದು ಭಾವಿಸುವದಂತೂ ತೀರ ಅವಿವೇಕವಾಗುವದು; ಏಕೆಂದರೆ ಪದಾರ್ಥಗಳು ತಮ್ಮ ತಮ್ಮ ಸ್ವರೂಪವನ್ನು ಬಿಟ್ಟು ಬೇರೆ ಬೇರೆ ಪದಾರ್ಥಗಳ ಸ್ವರೂಪವನ್ನು ತಾವುತಾವೇ ಹೊಂದುವದಾಗಿದ್ದರೆ ಲೋಕದಲ್ಲಿ ಯಾವ ವ್ಯವಹಾರವೂ ಸಾಗುತ್ತಿರಲ್ಲಿಲ್ಲ. ಆ ಸಂದರ್ಭದಲ್ಲಿ ಹಾಲಿನಿಂದಲೇ ಮೊಸರಾಗುವದೆಂಬ ನಿಯಮವಿರುತ್ತಿರಲಿಲ್ಲ, ಹಾಲಿನಿಂದ ಮೊಸರೇ ಆಗುವದೆಂಬ ನಿಯಮವೂ ಇರುತ್ತಿರಲಿಲ್ಲ. ಒಂದೊಂದು ವೇಳೆ ನೀರೂ ಮೊಸರಾಗಬಹುದಾಗಿತ್ತು. ಒಂದೊಂದು ವೇಳೆ ಮೊಸರಿಗಾಗಿ ಹೆಪ್ಪುಹಾಕಿದ ಹಾಲು ನೀರೂ ಆಗಿಬಿಡಬಹುದಾಗಿತ್ತು ! ಹೀಗಾಗುವದಾದರೆ ಜನರು ಯಾವ ಭರವಸೆಯಿಂದ ವ್ಯವಹಾರಮಾಡಬೇಕು ? ಹಗ್ಗದಲ್ಲಿ ಹಾವಿನಂಶವೂ ಒಂದಿಷ್ಟು ತಗಲಿಕೊಂಡಿತ್ತೆಂದೂ ಅದು ನಮಗೆ ಭ್ರಾಂತಿಯಾಗುವಾಗ ಹಾವಾಗಿ ತೋರಿತೆಂದೂ ಇಟ್ಟುಕೊಳ್ಳಬಹುದೊ ? ಅದು ಯಾರೂ ಒಪ್ಪುವ ಮಾತಲ್ಲ.ಇಂಥ ಪದಾರ್ಥದಲ್ಲಿ ಇಂಥ ಪದಾರ್ಥದ ಅಂಶವು ತಗಲಿಕೊಂಡಿರುವದರಿಂದ ಆ ತಗಲಿಕೊಂಡ ಪದಾರ್ಥವು ಭ್ರಾಂತಿಯಿಂದ ಯಾವಾಗಲಾದರೂ ತೋರಬಹುದೆಂಬುದನ್ನು ಯಾವ ಜಾಣನೂ ಪರೀಕ್ಷೆಮಾಡಿ ತೋರಿಸುವದಕ್ಕಾಗುವದಿಲ್ಲ. ಆ ಕಾಲಕ್ಕೆ ಒಂದು ಹಾವು ಹುಟ್ಟಿ ಭ್ರಾಂತಿಯು ಹೋಗುತ್ತಲೂ ಸತ್ತುಹೋಯಿತು- ಎಂದು ಹೇಳುವದಂತೂ ಅನುಭವಕ್ಕೆ ತೀರ ಹೊಂದದ ಮಾತು. 'ಹಾವು ಎಲ್ಲಿಯದು ? ಬರಿಯ ಭ್ರಮೆಯಾಯಿತು, ಎಂದಲ್ಲವೆ, ನಾವು ಹಗ್ಗವನ್ನು ಕಂಡುಕೊಂಡಾಗ ಹೇಳಿಕೊಳ್ಳುವದು ? ಹಗ್ಗವನ್ನು ನೋಡಿದಾಗ ಹಾವನ್ನು ಸ್ಮರಿಸಿಕೊಂಡದ್ದರಿಂದ ಹಾವು ತೋರಿತೆನ್ನೋಣವೆ ? –ಎಂದರೆ ಅದು ಸರಿಯಾಗುವದಿಲ್ಲ ; ಏಕೆಂದರೆ ನೆನಸಿಕೊಂಡ ಮಾತ್ರದಿಂದ ಎದುರಿಗೆ ಹಾವು ಇದ್ದಂತೆ ತೋರುವದಕ್ಕೆ ಕಾರಣವೇನೂ ಇರುವದಿಲ್ಲ.

ಇದಲ್ಲದೆ ಹಾವಿನ ನೆನಪಾದಮಾತ್ರದಿಂದ ಹಗ್ಗವೇಕೆ ಮರೆಯಾಗಬೇಕು ? ಇದಕ್ಕೆ ಈ ಪಕ್ಷದಲ್ಲಿ ಉತ್ತರವು ದೊರೆಯುವ ಹಾಗಿಲ್ಲ. 'ಹಾವನ್ನು ಸ್ಮರಿಸಿ ಕೊಂಡೆನು' ಎನ್ನುವದಕ್ಕೆ ಬದಲಾಗಿ 'ಹಾವನ್ನು ಕಂಡೆನು' ಎಂದೇ ಅನುಭವ ವಾಗುವದೂ ಈ ಕಲ್ಪನೆಗೆ ವಿರುದ್ಧವಾಗಿರುತ್ತದೆ. ಅಂತೂ ಈ ದೃಷ್ಟಾಂತದಲ್ಲಿ ನಿಜವಾದ ಹಾವು ಇಲ್ಲ, ಅದರ ನೆನಪೂ ಇಲ್ಲ. ಆದರೂ ಹಾವನ್ನು ಕಂಡಂತೆ ಭ್ರಾಂತಿಯಲ್ಲಿ ಅನುಭವವಾಗುವದಲ್ಲ! ಈ ತೊಡಕನ್ನು ಬಿಚ್ಚುವದು ಹೇಗೆ?

ಇದಕ್ಕೆ ನಮ್ಮ ಉತ್ತರವೇನೆಂದರೆ ದೃಷ್ಟಾಂತದಲ್ಲಿ ಹಾವು ಉಂಟಾದದ್ದು ಸುಳ್ಳು ; ಹಗ್ಗವನ್ನು ಹಗ್ಗವೆಂದು ಸರಿಯಾಗಿ ಅರಿಯದವರಿಗೆ ಮಬ್ಬುಗತ್ತಲೆಯಲ್ಲಿ ಅದು ಹಾವಿನಂತೆ ತೋರುವದೇ ಹೊರತು ಯಾವ ಹಾವೂ ಅದರಲ್ಲಿರುವದಿಲ್ಲ. ಭ್ರಾಂತಿಯಲ್ಲಿ ಹಾವು ಹುಟ್ಟುವದೂ ಇಲ್ಲ. ಸರಿಯಾದ ತಿಳಿವಳಿಕೆಯಾಗುತ್ತಲೂ ಅದು ಹೋಗುವದೂ ಇಲ್ಲ. 'ಹಗ್ಗವನ್ನೇ ಹಾವೆಂದು ತಿಳಿದುಕೊಂಡಿದ್ದೆನು' ಎಂಬ ತಿಳಿವಳಿಕೆಯು ಈ ಸಿದ್ಧಾಂತಕ್ಕೆ ಬೆಂಬಲವಾಗಿರುತ್ತದೆ. ಆದ್ದರಿಂದ ಹಾವೆಂಬುದು ಬರಿಯ ಭ್ರಾಂತಿ, ಹಗ್ಗವೆಂಬುದೇ ನಿಜ-ಎಂದಿಷ್ಟೇ ಹೇಳಬಹುದಲ್ಲದೆ ಭ್ರಾಂತಿಯಿಂದಾಗಿರುವ ಹಾವಿಗೆ ಕಾರಣವನ್ನು ಜೋಡಿಸುವದಕ್ಕೆ ಹೊರಡುವದು ಯುಕ್ತವಲ್ಲ. ಇದರಂತೆಯೇ ದಾರ್ಷ್ಟಾಂತಿಕದಲ್ಲಿಯೂ ತಿಳಿಯಬೇಕು. ನಾವು ಜೀವರೆಂಬುದು ಬರಿಯ ಭ್ರಾಂತಿಯು. ನಮ್ಮ ನಿಜವಾದ ಸ್ವರೂಪವನ್ನು ತಿಳಿಯದ್ದರಿಂದ ಈ ಭ್ರಾಂತಿಯಾಗಿರುವದೇ ಹೊರತು ನಮಗೆ ನಿಜವಾಗಿಯೂ ಜೀವತ್ವವು ಉಂಟಾಗಿರುವದಿಲ್ಲ. ನಾವು ಯಾವಾಗಲೂ ಶಿವಸ್ವರೂಪರೇ ಎಂಬುದೇ ಸರಿಯಾದ ತಿಳಿವಳಿಕೆ.

ಇಲ್ಲಿ ಒಂದು **ಆಕ್ಷೇಪ :** ಹಗ್ಗವು ಅರಿವಿಗೆ ವಿಷಯವಾಗಿರುವದೆಂತಲೂ ಹಾವು ತೋರುವದೆಂತಲೂ ಹೇಳುವದು ಸರಿಯಲ್ಲ ; ಯಾವದು ತೋರುತ್ತದೆಯೋ ಅದೇ ವಿಷಯವಾಗಿರುವದೆಂಬುದು ನಿಯಮವು; ಆದ್ದರಿಂದ ಇಲ್ಲಿ ಯಾವದಾದರೊಂದು ಹಾವೇ ತೋರುತ್ತದೆಯೆಂದಿಟ್ಟುಕೊಳ್ಳುವದೇ ಸರಿಯೆಂತ ತೋರುತ್ತದೆ. ಹಾಗಿಲ್ಲದೆ ಅನುಭವವನ್ನು ತಳ್ಳಿಹಾಕಿ, ತೋರುವದೊಂದು, ವಿಷಯವೊಂದು-ಹೀಗೂ ಇರಬಹುದೆನ್ನುವದಾದರೆ ಮನುಷ್ಯನನ್ನು ನೋಡುವಾಗ ನದಿಯೂ ಬೆಟ್ಟವನ್ನು ನೋಡುವಾಗ ಪಟ್ಟಣವೂ ಆನೆಯನ್ನು

ನೋಡುವಾಗ ಕೋಳಿಯಪಿಳ್ಳೆಯೂ ಕಾಣಿಸಬಹುದಾಗುವದು. ಆದರೆ ಅನುಭವದಲ್ಲಿ ಹೀಗೆ ಎಲ್ಲಿಯೂ ಇಲ್ಲ.

ಇದಕ್ಕೆ **ಸಮಾಧಾನ:** ಯಾವಾಗಲೂ ವಿಷಯವಿದ್ದಂತೆ ಅನುಭವವಾಗುವದೆಂಬ ನಿಯಮವಿರುವದಿಲ್ಲ. ಹೇಗೆಂದರೆ, ಒಂದು ಕೈಯನ್ನು ತಣ್ಣೀರಿನಲ್ಲಿಯೂ ಮತ್ತೊಂದು ಕೈಯನ್ನು ಬಿಸಿನೀರಿನಲ್ಲಿಯೂ ಇಟ್ಟಿದ್ದು ಆಮೇಲೆ ಎರಡನ್ನೂ ಒಟ್ಟಿಗೆ ತೆಗೆದು ಉಗುರುಬೆಚ್ಚಗಿರುವ ನೀರಿನಲ್ಲಿ ಅದ್ದಿದರೆ ತಣ್ಣೀರಿನಲ್ಲಿದ್ದ ಕೈಗೆ ನೀರು ಬಿಸಿಯಾಗಿ ತೋರುವದು, ಬಿಸಿನೀರಿನಲ್ಲಿದ್ದ ಕೈಗೆ ತಣ್ಣಗೆ ಕಾಣುವದು. ಒಂದೇ ನೀರು ಒಂದೇ ಕಾಲದಲ್ಲಿ ಬೇರೆಬೇರೆಯ ಪ್ರಮಾಣದಲ್ಲಿ ಔಷ್ಣ್ಯವುಳ್ಳದ್ದಾಗಿರುವದು ಅಸಂಭವವಾದ್ದರಿಂದ, ಆ ನೀರು ಒಂದೇ ಶಾಖದ ಪ್ರಮಾಣದಲ್ಲಿದ್ದರೂ ಭ್ರಾಂತಿಯಿಂದ ಬೇರೆಬೇರೆಯ ಪ್ರಮಾಣವಲ್ಲಿರುವಂತೆ ತೋರುತ್ತದೆಯೆಂದು ಭಾವಿಸಬೇಕಾಗಿದೆ. ತೋರಿದಂತೆಯೇ ವಿಷಯವೂ ಇರಬೇಕೆಂದು ಪಟ್ಟುಹಿಡಿಯುವವರು ನಿಜವಾಗಿಯೂ ಒಂದೇ ನೀರಿನಲ್ಲಿ ಬೇರೆ ಬೇರೆ ಪ್ರಮಾಣದ ಔಷ್ಣ್ಯವಿರಬೇಕೆಂದೇ ಕಲ್ಪಿಸಬೇಕಾಗುತ್ತದೆ. ಅದು ಯಾರಿಗೂ ಒಪ್ಪಿಗೆಯಾದದ್ದಲ್ಲ. ಇದೂ ಅಲ್ಲದೆ ಸರಿಯಾದ ಅರಿವು, ತಪ್ಪಾದ ಅರಿವು-ಎಂದು ಎರಡು ಬಗೆಯ ಅರಿವುಗಳಾಗುವಂತೆಯೂ ಸರಿಯಾದ ಅರಿವಿನಲ್ಲಿ ವಸ್ತುವು ತಾನಿದ್ದಂತೆ ತೋರಿಕೊಳ್ಳುವದೆಂತಲೂ ಸರಿಯಲ್ಲದ್ದರಲ್ಲಿ ಬೇರೊಂದು ರೂಪದಲ್ಲಿ ತೋರಿಕೊಳ್ಳುವದೆಂತಲೂ ಎಲ್ಲಾ ಜನರ ಅನುಭವದಲ್ಲಿರುತ್ತದೆ. ಹೀಗಿರುವಲ್ಲಿ, 'ಅದು ಸರಿಯಲ್ಲ, ನಿಜವಾಗಿ ಹೀಗಿರಬೇಕು' ಎಂದು ಸಾರ್ವತ್ರಿಕವಾದ ಅನುಭವಕ್ಕೆ ವಿರುದ್ಧವಾಗಿ ಕಲ್ಪಿಸುವದು ಎಂದಿಗೂ ಸರಿಯಾಗುವದಿಲ್ಲ. ಆದ್ದರಿಂದ ಹಗ್ಗವೇ ಹಾವೆಂದು ತಪ್ಪುತಿಳಿವಳಿಕೆಯಿಂದ ತೋರುವದೆಂಬುದೇ ಸರಿಯಾದದ್ದು.

**ಆಕ್ಷೇಪ:** ಹಾವು ತೋರುವ ಕಾಲದಲ್ಲಿ ಹಾವೇ ಇತ್ತೆಂದು ಭಾವಿಸುವದು ಏಕೆ ತಪ್ಪು? ಅದು ತಪ್ಪಾದರೆ ಹಗ್ಗವು ತೋರುವ ಕಾಲದಲ್ಲಿ ಹಗ್ಗವು ಇದೆಯೆಂದು ಹೇಳುವದಕ್ಕೆ ಏನು ಆಧಾರವಿದೆ?

**ಪರಿಹಾರ:** ಇದಕ್ಕೆ ಆಗಲೆ ಉತ್ತರವನ್ನು ಹೇಳಿರುತ್ತೇವೆ. ಭ್ರಾಂತಿಯಲ್ಲಿ ಇದು ಹಾವೇ ಎಂದು ತೋರಿದರೂ ಸರಿಯಾದ ತಿಳಿವಳಿಕೆಯುಂಟಾಗುತ್ತಲೂ ಇದು ಹಗ್ಗವೇ, ಇದರಲ್ಲಿ ಯಾವಾಗಲೂ ಹಾವು ಇರಲೇ ಇಲ್ಲ,

ಹಾವನ್ನು ಕಂಡಂತೆ ಆದ ಅನುಭವವು ಭ್ರಾಂತಿಯೇ–ಎಂದು ಸ್ಪಷ್ಟವಾಗಿ ಅನುಭವವಾಗಿ ಬಿಡುತ್ತದೆ. ಹಗ್ಗದರಿವು ಹಾಗಲ್ಲ ; 'ಇದು ಹಗ್ಗವಲ್ಲ' ಎಂಬ ಅನುಭವವು ಯಾರಿಗೂ ಉಂಟಾಗುವದಿಲ್ಲ. ಆದ್ದರಿಂದ ಅದು ಸರಿಯಾದ ಅನುಭವವಾಗಿದೆ. ಬಾಧಿತವಾದ ಅರಿವು ಎಂದಿಗೂ ನಿಜವಾಗಲಾರದು.

**ಆಕ್ಷೇಪ :** ಒಂದು ಭ್ರಾಂತಿಯು ಮತ್ತೊಂದು ಭ್ರಾಂತಿಯಿಂದ ಹೋಗುವಾಗ ಹೇಗೆ ? ಉದಾಹರಣೆಗೆ ದೂರಕ್ಕೆ ಒಬ್ಬ ಮನುಷ್ಯನು ನೆಲದಲ್ಲಿ ಒಂದು ಬಿರುಕಿರಬಹುದೆಂದು ಭಾವಿಸಿ ಹತ್ತಿರಕ್ಕೆ ಬರುತ್ತಾ ಅದು ಒಂದು ಕಡ್ಡಿಯೇ ಎಂದು ನಿಶ್ಚಯಿಸುತ್ತಾನೆ; ಆದರೆ ಇನ್ನೂ ಸ್ವಲ್ಪ ಹತ್ತಿರಕ್ಕೆ ಬರಲು ಅದು ಒಂದು ಹಗ್ಗವೇ ಎಂದು ನಿರ್ಣಯಿಸುತ್ತಾನೆ. ಈ ಸಂದರ್ಭದಲ್ಲಿ ಕಡ್ಡಿಯರಿವು ಬಿರುಕಿನರಿವನ್ನು ಬಾಧಿಸಿತ್ತು. ಆದರೂ ನಿಜವಾಗಲಿಲ್ಲವಲ್ಲ !

**ಸಮಾಧಾನ :** ಬಾಧಿಸಲ್ಪಟ್ಟದ್ದು ನಿಜವಲ್ಲವೆಂಬುದಕ್ಕೆ ನೀವು ಹೇಳಿದ್ದೂ ಒಂದು ದೃಷ್ಟಾಂತವೇ ಆಗುತ್ತದೆ. ಬಾಧಿಸುವ ಅರಿವು ಯಾವಾಗಲೂ ನಿಜವಾಗಿರಬೇಕೆಂಬ ನಿಯಮವಿಲ್ಲವೆಂಬುದು ನಿಜ ; ಆದರೆ ಯಾವಾಗಲೂ ಬಾಧಿತವಾಗದೆ ಇರುವ ವಿಷಯವನ್ನು ಜನರು ಒಪ್ಪಿಯೇ ಇಲ್ಲವೆಂದು ಹೇಳುವದಕ್ಕೆ ಆಗುವದಿಲ್ಲ. ಉದಾಹರಣೆಯ ಹಗ್ಗದಲ್ಲಿ ತೋರುವ ಹಾವು ಒಬ್ಬನಿಗೆ ಭ್ರಾಂತಿಯಿಂದ ಹಾವಾಗಿದ್ದರೂ ಮಿಕ್ಕವರಿಗೆಲ್ಲ ಅದು ಹಗ್ಗವಾಗಿಯೇ ತೋರುತ್ತಿರುವದು ; ಅದನ್ನು ಪರೀಕ್ಷೆಮಾಡಿ ನೋಡಿದಮೇಲೆ, ಹಾವೆಂದು ತಪ್ಪಾಗಿ ತಿಳಿದುಕೊಂಡಿದ್ದವನಿಗೂ ಅದು ಹಗ್ಗವೆಂದೇ ತೋರುತ್ತದೆ. ಹೀಗೆ ವ್ಯವಹಾರದಲ್ಲಿ ಹಗ್ಗವೂ ಹಗ್ಗವೆಂಬ ತಿಳಿವಳಿಕೆಯೂ ಎಂದಿಗೂ ಬಾಧಿತವಾಗುವದಿಲ್ಲವಾದ್ದರಿಂದ ಅದು ಸರಿಯಾದ ತಿಳಿವಳಿಕೆಯೆಂದೇ ಜನರು ಒಪ್ಪಿಕೊಂಡಿರುತ್ತಾರೆ. ಈ ಒಪ್ಪಿಗೆಯನ್ನನುಸರಿಸಿ ಹಗ್ಗದರಿವನ್ನು ನಿಜವೆಂದು ಇಟ್ಟುಕೊಂಡು ಇಲ್ಲಿ ಹಗ್ಗದ ಹಾವನ್ನು ದೃಷ್ಟಾಂತವಾಗಿ ಕೊಟ್ಟಿರುತ್ತೇವೆಯೇ ಹೊರತು ಹಗ್ಗವು ನಿಜವಾಗಿಯೂ ಅಬಾಧ್ಯವೆಂಬ ಅಭಿಪ್ರಾಯವೇನೂ ನಮ್ಮದಲ್ಲ. ಆತ್ಮನೊಬ್ಬನೇ ಪರಮಾರ್ಥವಾಗಿ ಸತ್ಯವಾಗಿರುತ್ತಾನೆ, ಅವನಲ್ಲಿ ಜೀವತ್ವವೂ ಜಗತ್ತೂ ಕಲ್ಪಿತವಾಗಿವೆ– ಎಂದು ಹೇಳುವ ವೇದಾಂತಿಗಳಿಗೆ ಹಾವಿನ ಆಧಾರವಾದ ಹಗ್ಗವು ನಿಜವಲ್ಲವೆಂದರೆ ಯಾವ ಹಾನಿಯೂ ಇಲ್ಲ ; ಅವರ ಮತದಲ್ಲಿ ಇಡಿಯ ಪ್ರಪಂಚವೇ ಮಿಥ್ಯವಾಗಿರುವದರಿಂದ ಅವರೊಳಗೆ

ಅಡಕವಾಗಿರುವ ಹಗ್ಗವೂ ಮಿಥ್ಯವಾಗಿಯೇ ಇರುತ್ತದೆ. ಆದರೂ ಹಗ್ಗವು **ವ್ಯಾವಹಾರಿಕಸತ್ಯ**ವಾಗಿರುತ್ತದೆ, ಅದರಲ್ಲಿ ಭ್ರಾಂತಿಯಿಂದ ತೋರುವ ಹಾವು ಹಾಗಲ್ಲ. ಅವೆರಡಕ್ಕೂ ಈ ತಾರತಮ್ಯವು ಇದ್ದೇ ಇರುತ್ತದೆ.

## ಆತ್ಮನನ್ನು ಅರಿತುಕೊಳ್ಳದ್ದರಿಂದ ಜೀವತ್ವವು ತೋರುತ್ತಿದೆ

ಇನ್ನು ದಾರ್ಷ್ಟಾಂತಿಕದ ಕಡೆಗೆ ತೆರಳೋಣ. ನಮ್ಮ ಆತ್ಮನ ಸ್ವರೂಪವು ಯಾವದೆಂಬುದನ್ನು ತಿಳಿಯದಿರುವದರಿಂದ ನಮಗೆ ಜೀವತ್ವವುಂಟಾಗಿದೆ; ಎಂದರೆ ಹಗ್ಗವೆಂದರಿಯದ್ದರಿಂದ ಕತ್ತಲೆಯಲ್ಲಿ ಅದನ್ನು ಹಾವೆಂದು ಜನರು ತಪ್ಪಾಗಿ ತಿಳಿದುಕೊಳ್ಳುವಂತೆಯೇ ನಮ್ಮ ಶಿವಸ್ವರೂಪವನ್ನು ತಿಳಿದುಕೊಳ್ಳದ್ದರಿಂದ ನಮಗೆ ಅದರಲ್ಲಿ ಜೀವತ್ವವು ತೋರುತ್ತಿರುವದು.

ಇಲ್ಲಿ ದೃಷ್ಟಾಂತಕ್ಕೂ ದಾರ್ಷ್ಟಾಂತಿಕಕ್ಕೂ ಬಹಳಮಟ್ಟಿಗೆ ಸಾಮ್ಯವಿದೆ. ಏಕೆಂದರೆ ಆತ್ಮನನ್ನು ಜೀವನೆಂದು ಎಣಿಸುವವನು ತನಗೆ ದೇಹ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ- ಇವುಗಳೆಲ್ಲದರ ಸಂಬಂಧವಿರುವದೆಂದು ಭಾವಿಸುತ್ತಾನೆ. ಹಗ್ಗವನ್ನರಿಯದೆ ಅದರಲ್ಲಿ ಹೆಡೆ, ಬಾಲ, ವಕ್ರತ್ವ- ಮುಂತಾದವುಗಳನ್ನು ಕಲ್ಪಿಸಿಕೊಂಡು ಹಾವೆಂದು ಅಂಜಿ ಬೆಚ್ಚಿಬೀಳುವ ಅವಿವೇಕಿಯಂತೆ ಇವನೂ ತನಗೆ ದೇಹಾದಿಗಳ ಸಂಬಂಧವನ್ನು ಕಲ್ಪಿಸಿಕೊಂಡು ತಾನು ಹುಟ್ಟುವೆನು, ಬೆಳೆಯುವೆನು, ಸಂಕಟಪಡುವೆನು, ಸಾಯುವೆನು, ಮತ್ತೂ ಹುಟ್ಟುವೆನು- ಎಂದು ಮುಂತಾಗಿ ತನ್ನಲ್ಲಿ ಸಂಸಾರವನ್ನು ಹುಟ್ಟಿಹಾಕಿಕೊಂಡು ನರಳುತ್ತಿರುವನು. ನಿಜವಾಗಿ ನೋಡಿದರೆ ಹಗ್ಗದಲ್ಲಿ ಹಾವಿನ ಒಂದಂಶವೂ ಇಲ್ಲದಿರುವಂತೆ ಎಲ್ಲಕ್ಕೂ ಸಾಕ್ಷಿಯಾಗಿರುವ ಚೈತನ್ಯಸ್ವರೂಪನಾದ ಆತ್ಮನಿಗೆ ಜೀವತ್ವದ ಒಂದಿಷ್ಟು ಸೋಂಕೂ ಇರುವದೇ ಇಲ್ಲ. ಚೆನ್ನಾಗಿ ಪರೀಕ್ಷಿಸಿ ಸಂಪಾದಿಸಿಕೊಂಡ ಹಗ್ಗದರಿವಿನಿಂದ ಹಾವಿನಂಜಿಕೆಯನ್ನು ಕಳೆದುಕೊಳ್ಳುವವನಂತೆಯೇ ಶಿವತ್ವದರಿವಿನಿಂದ ತನ್ನಲ್ಲಿದ್ದ ಸಂಸಾರಿತ್ವರೂಪವಾದ ಅನರ್ಥವನ್ನೆಲ್ಲ ಜಿಜ್ಞಾಸುವು ಕಳೆದುಕೊಂಡುಬಿಡುತ್ತಾನೆ.

**ಆಕ್ಷೇಪ :** ನಾನು ಜೀವನೆಂಬ ಅರಿವು ಭ್ರಾಂತಿಯಾದರೆ ಶಿವನೆಂಬ ಅರಿವು ಭ್ರಾಂತಿಯಲ್ಲವೆನ್ನುವದಕ್ಕೆ ಪ್ರಮಾಣವೇನು ? ಜೀವದರಿವು ವಿಚಾರದಿಂದ ಸುಳ್ಳಾದಂತೆ ಶಿವನೆಂಬರಿವೂ ಸುಳ್ಳಾಗುವ ಸಂಭವವು ಇದ್ದೇ ಇರುವದಲ್ಲವೆ ?

**ಪರಿಹಾರ :** ಅಂಥ ಅಂಜಿಕೆಗೇನೂ ಅವಕಾಶವಿರುವದಿಲ್ಲ. ಏಕೆಂದರೆ ಜೀವನೆಂಬ ಅರಿವು ಒಂದಾನೊಂದು ಅವಸ್ಥೆಯಲ್ಲಿ ತೋರುವ ದೇಹಾದಿಗಳ ಸಂಬಂಧವನ್ನು ಪರಮಾರ್ಥವೆಂದು ನಂಬಿದ್ದರಿಂದ ಆಗಿರುತ್ತದೆ. ಆದರೆ ಶಿವನೆಂಬ ಅರಿವು ಯಾವದೊಂದವಸ್ಥೆಯ ಸಂಬಂಧವೂ ಇಲ್ಲದ, ಕಾಲದ ಕಟ್ಟಿಲ್ಲದ, ಕೂಟಸ್ಥನಿತ್ಯವಾದ ಚೈತನ್ಯದ ಅನುಭವದಿಂದಾಗಿರುತ್ತದೆ. ಕಾಲದ ಕಟ್ಟಿಗೆ ಸಿಕ್ಕಿರುವ ವಸ್ತುವಿನ ವಿಷಯದಲ್ಲಿ ಅದು ಯಾವಾಗಲಾದರೂ ತನ್ನ ಸ್ವರೂಪವನ್ನು ಮಾರ್ಪಡಿಸಿಕೊಳ್ಳಬಹುದೆಂಬ ಅಂಜಿಕೆಯಿರುವದು ; ಕಾಲಾತೀತವಾದ ಪರಮಾತ್ಮಸ್ವರೂಪಕ್ಕೆ ಇಂಥ ಮಾರ್ಪಾಡು ಆಗಬಹುದೆಂದು ಯಾರುತಾನೆ ಹೇಳಲಾಪರು ?

## ಸದ್ಗುರುವಿನ ಉಪದೇಶದಿಂದ ಶಿವಸ್ವರೂಪವು ತಿಳಿಯುವದು

ಇಲ್ಲಿ ಇನ್ನೊಂದು ಶಂಕೆ ಉಳಿದುಕೊಂಡಿರುತ್ತದೆ : ನಾನು ಜೀವನಲ್ಲವೆಂದು ಹೇಳುವ ವೇದಾಂತಿಗಳೂ ಮಿಕ್ಕವರಂತೆಯೇ ವ್ಯವಹರಿಸುತ್ತಿರುವಾಗ ಜೀವತ್ವವು ಹೋಗಿ ಶಿವತ್ವವು ಬರುವದೆನ್ನುವದಕ್ಕೆ ಪ್ರಮಾಣವೇನಿದೆ ?

ಈ ಶಂಕೆಗೆ ಪರಿಹಾರವೇನೆಂದರೆ : ರಜ್ಜುಸರ್ಪದೃಷ್ಟಾಂತದಲ್ಲಿ ಹಗ್ಗದಲ್ಲಿ ಹಾವು ಮೊದಲೂ ಇರಲಿಲ್ಲವೆಂತಲೂ ಸರಿಯಾದ ತಿಳಿವಳಿಕೆಯುಂಟಾದಮೇಲೆ ಅದು ನಿಜವಾಗಿಯೂ ಹೋಗಲಿಲ್ಲವೆಂತಲೂ ಸ್ಪಷ್ಟವಾಗಿ ಹೇಳಿದ್ದೇವೆ. ಇದರಂತೆ ಜೀವತ್ವವು ತಪ್ಪುತಿಳಿವಳಿಕೆಯಿಂದ ಉಂಟಾದದ್ದೆಂದೂ ಅದು ನಿಜವಾಗಿ ಇರುವದಿಲ್ಲವೆಂದೂ ಶಿವಸ್ವರೂಪವೇ ಪರಮಾರ್ಥವೆಂದೂ ಹೇಳಿರುತ್ತೇವೆ. ಹೀಗಿರುವಲ್ಲಿ ಜೀವತ್ವವು ಹೋಗುವದೆಂದರೇನು, ಶಿವತ್ವವು ಬರುವದೆಂದರೇನು ? ನಾವು ಯಾವಾಗಲೂ ಶಿವಸ್ವರೂಪರೇ ; ಇದೇ ಪರಮಾರ್ಥವು.

ನಾವು ಶಿವಸ್ವರೂಪರೆಂಬುದಕ್ಕೆ ಪ್ರಮಾಣವು ಬೇಕಿರುವದಿಲ್ಲ; ಏಕೆಂದರೆ ನಮ್ಮ ಸ್ವರೂಪವು ನಮಗೆ ಮರೆಯಾಗಿರುವದಲ್ಲ. ನಸುಗತ್ತಲೆಯಲ್ಲಿ ಹಗ್ಗವನ್ನು ಹಾವೆಂದು ತಿಳಿದವನಿಗೆ ಅದನ್ನು ಹಗ್ಗವೆಂದು ಬಲ್ಲವರು 'ಇದು ಹಗ್ಗವು, ಹಾವಲ್ಲ'- ಎಂದು ಹೇಳಿದರೆ ಕೂಡಲೆ ಅದು ಹಾವೆಂಬ ಸಂಶಯವು ತೊಲಗುವದು; ಆದರೆ ಆ ದೃಷ್ಟಾಂತದಲ್ಲಿ ಮತ್ತೊಬ್ಬರು ವಿಷಯವನ್ನು

ತಿಳಿಸಿದಮೇಲೂ ಮುಟ್ಟಿನೋಡುವದರಿಂದಲೋ ಬೆಳಕಿಗೆ ಹಿಡಿಯುವದರಿಂದಲೋ ಅದು ಹಗ್ಗವೇ ಎಂಬುದನ್ನು ಗೊತ್ತುಪಡಿಸಿಕೊಳ್ಳಬೇಕಾಗಿರುತ್ತದೆ. ನಮ್ಮ ಆತ್ಮಸ್ವರೂಪದ ವಿಷಯದಲ್ಲಿ ಹೀಗಿಲ್ಲ; ಅದನ್ನು ಬೆಳಗಿ ತೋರಿಸುವದಕ್ಕೆ ಮತ್ತೇನೂ ಬೇಡ. ಅದು ತಾನೇ ಚೈತನ್ಯಪ್ರಕಾಶರೂಪವಾಗಿರುತ್ತದೆ. ಹೀಗಿರುವದರಿಂದ ಸದ್ಗುರುಗಳು ನೀನು 'ದೇಹಾದಿಗಳಲ್ಲ, ಪರಶಿವಸ್ವರೂಪನು' -ಎಂಬುದನ್ನು ಉಪದೇಶಿಸಿದರೆ ಸಾಕು, ಜಿಜ್ಞಾಸುವಾದವನಿಗೆ ಅಷ್ಟುಮಾತ್ರದಿಂದಲೇ ಹಿಂದಿನ ಶ್ಲೋಕಗಳಲ್ಲಿ ಹೇಳಿರುವಂತೆ ದೇಹಾದಿಗಳನ್ನು ನೇರಾಗಿ ನೋಡುವ ಸಾಕ್ಷಿಚೈತನ್ಯವೇ ನಾನೆಂಬ ಅರಿವು ಉಂಟಾಗಿಬಿಡುತ್ತದೆ.

ಎಷ್ಟೋ ಜನ ವೇದಾಂತಿಗಳೆಂದುಕೊಳ್ಳುವವರು 'ನಾನು ದೇಹಾದಿಗಳಲ್ಲ, ಶಿವಸ್ವರೂಪನು'-ಎಂದು ಹೇಳಿಕೊಳ್ಳುವದುಂಟು; ಆದರೆ ಅವರದು ಶಾಸ್ತ್ರದಲ್ಲಿಯೂ ಸಂಪ್ರದಾಯದಲ್ಲಿಯೂ ಇರುವ ನಂಬಿಕೆಯೇ ಹೊರತು ಮತ್ತೇನೂ ಆಗಿರುವದಿಲ್ಲ. ಆದರೆ ಸದ್ಗುರುವಿನ ಅನುಗ್ರಹದಿಂದ ಆತ್ಮಸ್ವರೂಪವನ್ನು ನಿಜವಾಗಿಯೂ ಅರಿತುಕೊಂಡಿರುವವರ ವಿಚಾರವು ಹಾಗಲ್ಲ. ಶ್ರದ್ಧಾವೇದಾಂತಿಗಳಂತೆ ಅವರು ಸಂಸಾರದಲ್ಲಿ ಮಿತಿಮೀರಿದ ಅಭಿಮಾನವುಳ್ಳವರಾಗಿರುವದಿಲ್ಲ; ಆದ್ದರಿಂದ ಅವರಿಗೆ ಮಿಕ್ಕವರಂತೆ ಶೋಕಮೋಹಗಳು ಉಂಟಾಗುವದಿಲ್ಲ. ಇಷ್ಟೇ ಅಲ್ಲ. ಅಂಥ ಜ್ಞಾನಿಗಳು ಯಾರಿಗೆ ತತ್ತ್ವವನ್ನು ಉಪದೇಶಿಸುವರೋ ಅವರಿಗೂ ತತ್ತ್ವವು ಮನವರಿಕೆಯಾಗಿ ಶೋಕಮೋಹಗಳು ತೊಲಗುವವು. ಸುಮ್ಮನೆ ಶಾಸ್ತ್ರದ ವಚನಗಳನ್ನಾಡುತ್ತಿರುವವರನ್ನು ಇಲ್ಲಿ ಉದಾಹರಣೆಗೆ ತೆಗೆದುಕೊಳ್ಳಬಾರದು; ತಾವೂ ತತ್ತ್ವವನ್ನು ಮನಗಂಡು ಮಿಕ್ಕವರಿಗೂ ಮನದಟ್ಟುಮಾಡಿಸಿಕೊಡಬಲ್ಲವರೂ ಹಾಗೆ ತತ್ತ್ವದ ಸಾಕ್ಷಾತ್ಕಾರಮಾಡಿಕೊಡುವ ಕೆಲಸದಲ್ಲಿ ನಿರತರೂ ಆಗಿರುವ ಮಹನೀಯರನ್ನು ತೆಗೆದುಕೊಳ್ಳಬೇಕು. ಅಂಥವರಿಗೆ ಆಪ್ತರೆಂದು ಹೆಸರು. ಹಗ್ಗದ ಹಾವನ್ನೂ ಅದರ ಅಂಜಿಕೆಯನ್ನೂ ತೊಲಗಿಸುವದಕ್ಕೆ ಹಗ್ಗದ ತತ್ತ್ವವನ್ನು ಬಲ್ಲ ಆಪ್ತರ ವಚನವು ಹೇಗೆ ಪ್ರಮಾಣವಾಗುವದೋ ಹಾಗೆ ನಿತ್ಯಸಿದ್ಧವಾದ ನಮ್ಮ ಶಿವಸ್ವರೂಪವನ್ನು ತಿಳಿಸಿ ಸಂಸಾರದ ಅಂಜಿಕೆಯನ್ನು ತೊಲಗಿಸುವದಕ್ಕೆ ಪರಮಾರ್ಥದ ಸ್ವರೂಪವನ್ನು ಬಲ್ಲ ಸದ್ಗುರುಗಳೆಂಬ ಆಪ್ತರ ವಚನವು ಪ್ರಮಾಣವಾಗುವದು.

**ಆಕ್ಷೇಪ :** ಎಷ್ಟೋ ಜನಗಳು 'ನೀನು ಈಶ್ವರನೇ, ಜೀವನಲ್ಲ' ಎಂಬ ದೊಡ್ಡವರ ಉಪದೇಶವನ್ನು ಕೇಳಿರುತ್ತಾರೆ. ಆದರೂ ಅವರಿಗೆ ಸಂಸಾರಿತ್ವ ಭ್ರಾಂತಿಯು ಹೋಗಿರುವದಿಲ್ಲವಲ್ಲ !

**ಉತ್ತರ :** ಇದಕ್ಕೆ ಉತ್ತರವನ್ನು ಹೇಳಿದಂತೆಯೇ ಆಗಿದೆ. ಏಕೆಂದರೆ ತತ್ತ್ವವನ್ನು ಹೇಳುವವರು ಹೇಗೆ ಅದನ್ನು ಮನಗಂಡವರಾಗಿರಬೇಕೆಂಬ ನಿಯಮವಿರುವದೋ ಅದರಂತೆ ಅದನ್ನು ಶ್ರವಣಮಾಡುವವರೂ ಅದಕ್ಕೆ ತಕ್ಕ ಯೋಗ್ಯತೆಯುಳ್ಳವರಾಗಿರಬೇಕು. ಇದಲ್ಲದೆ ವೇದಾಂತಶ್ರವಣವೆಂದರೆ ಹೇಗೋ ಒಂದೆರಡು ಸಲ ವೇದಾಂತದ ವಾಕ್ಯಗಳನ್ನು ಕಿವಿಗೆ ಹಾಕಿಕೊಳ್ಳುವದಲ್ಲ. ಲೋಕದಲ್ಲಿ ಯಾವದಾದರೊಂದು ವಿಷಯದ ತತ್ತ್ವವನ್ನು ಅರಿತುಕೊಳ್ಳಬೇಕೆನ್ನುವವರು ಹೇಗೆ ತಮ್ಮ ಸಂದೇಹಗಳೆಲ್ಲವೂ ತೊಲಗಿ ಅದನ್ನು ತಾವು ಚೆನ್ನಾಗಿ ತಿಳಿದುಕೊಳ್ಳುವವರೆಗೂ ಅದನ್ನೇ ವಿಚಾರಮಾಡುತ್ತಿರುವರೋ ಅದರಂತೆಯೇ ಇಲ್ಲಿಯೂ ಶ್ರದ್ಧೆಯಿಂದಲೂ ತತ್ಪರತೆಯಿಂದಲೂ ಕೂಡಿ ಸದ್ಗುರುಗಳ ಉಪದೇಶವನ್ನು ಆದರದಿಂದ ಕೇಳಿ ಅದರ ಅಭಿಪ್ರಾಯವನ್ನು ಚೆನ್ನಾಗಿ ಪರ್ಯಾಲೋಚಿಸಿ ಮನಸ್ಸಿಗೆ ತಂದುಕೊಳ್ಳುವದು ಅವಶ್ಯವಾಗಿರುತ್ತದೆ.

ಇದು ಹಗ್ಗವೆಂದು ಬಲ್ಲವರು ಹೇಳಿದರೂ ಅದು ಹಾವೇ ಸರಿಯೆಂಬ ತಪ್ಪು ತಿಳಿವಳಿಕೆಯು ಬಲವಾಗಿರುವವನು ಆ ಕಡೆಗೆ ಕಣ್ಣನ್ನೇ ಹಾಕದಿದ್ದರೆ ಅದು ಹಗ್ಗವೆಂಬುದು ತಿಳಿಯುವ ಬಗೆ ಹೇಗೆ ? ಇದರಂತೆ ವೇದಾಂತವಾಕ್ಯಗಳನ್ನೂ ಶ್ರವಣಮಾಡುತ್ತಿರುವದು, ಪ್ರಪಂಚವು ಸತ್ಯವೇ ಸರಿಯೆಂಬ ತಿಳಿವಳಿಕೆಯನ್ನು ಬಲಪಡಿಸುವ ವಿಚಾರಗಳನ್ನೂ ಮನಸ್ಸಿನಲ್ಲಿ ತುಂಬಿಕೊಳ್ಳುವದು–ಹೀಗೆ ನಡೆಯುತ್ತಿರುವವರಿಗೆ ವೇದಾಂತಶ್ರವಣದ ನಿಜವಾದ ಫಲವು ಎಂದಿಗೂ ಉಂಟಾಗಲಾರದು. ವೇದಾಂತವಾಕ್ಯಗಳು ಅವರ ಕಿವಿಗೆ ಇಷ್ಟುಮಟ್ಟಿಗೆ ಬಿದ್ದಿರುವದೂ ಕಾಲಾನುಕಾಲಕ್ಕೆ ಏನಾದರೂ ಪ್ರಯೋಜನವನ್ನು ಉಂಟುಮಾಡೀತು; ಆದರೆ ಸದ್ಯಃಫಲವಾದ ಆತ್ಮಸಾಕ್ಷಾತ್ಕಾರವು ಈ ಬಗೆಯ ಶ್ರವಣದಿಂದ ಎಂದಿಗೂ ಉಂಟಾಗಲಾರದು. ನಾವು ಶಿವಸ್ವರೂಪರಾಗಿರುವೆವೆಂಬುದು ಪರಮಾರ್ಥವಾಗಿರುವದರಿಂದ ಜ್ಞಾನಮಾತ್ರದಿಂದಲೇ ಅದು ಸಿದ್ಧಿಸುವದು ಖಂಡಿತ; ಆದರೆ ಜ್ಞಾನವುಂಟಾಗುವದಕ್ಕೆ ಬೇಕಾದ ಶ್ರದ್ಧೆ,

ತಾತ್ಪರ್ಯ, ಇಂದ್ರಿಯನಿಗ್ರಹ, ಗುರುಸೇವೆ, ತತ್ತ್ವವಿಚಾರ– ಮುಂತಾದವುಗಳನ್ನು ಅವಲಂಬಿಸದವರಿಗೆ ಜ್ಞಾನವು ಎಂದಿಗೂ ಲಭಿಸದು. ಆದ್ದರಿಂದ ಮುಮುಕ್ಷುವಾದವನು ಸಾಧನಸಂಪನ್ನನಾಗಿ ಸದ್ಗುರುಗಳಲ್ಲಿ ಶ್ರವಣಮಾಡಿದರೆ ಫಲಕಾರಿಯಾದ ಆತ್ಮಜ್ಞಾನವು ಅವಶ್ಯವಾಗಿ ಲಭಿಸುವದೆಂದು ನಂಬಬೇಕು.

## ೩. ಜಗದ್ಭ್ರಾಂತಿಯ ಪರಿಹಾರ

ನಾವು ಅದ್ವಿತೀಯ ಶಿವಸ್ವರೂಪರೇ ಆಗಿರುವೆವೆಂಬುದನ್ನು ಮನಗಾಣುವದಕ್ಕೆ ಅಡ್ಡಿಯಾಗಿರುವದು ನಮ್ಮ ಜೀವತ್ವವೊಂದೇ ಅಲ್ಲ. ನಮಗೆ ಕಾಣುತ್ತಿರುವ ಜಗತ್ತೂ ಆ ಅರಿವಿಗೆ ಅಡ್ಡಿಯಾಗಿರುತ್ತದೆ. ನಾವು ಅದ್ವಿತೀಯ ಚೈತನ್ಯಸ್ವರೂಪರಾಗಿದ್ದರೆ ಜಡವಸ್ತುಗಳಿಂದ ಕೂಡಿದ ಈ ಜಗತ್ತು ಹೇಗೆ ಬಂದೀತು ?– ಎಂಬ ಯೋಚನೆಯೊಂದು ಶಿವಭಾವನೆಗೆ ಅಡ್ಡಿಬರುವ ಆತಂಕವಾಗಿರುತ್ತದೆ. ನಮ್ಮಂತೆ ಅನೇಕ ಜೀವರು ಇಲ್ಲಿರುತ್ತಾರೆ ; ಅವರೆಲ್ಲರೂ ನಮ್ಮೊಡನೆ ಈ ಜಗತ್ತಿನಲ್ಲಿ ಬಾಳುತ್ತಿದಾರೆ ; ನಮ್ಮಂತೆಯೇ ಸುಖದುಃಖಗಳನ್ನು ಹೊಂದಿರುತ್ತಾರೆ. ಈ ಜೀವಾನೇಕತ್ವವು ಹೇಗೆ ಉಂಟಾಯಿತು ? ಜೀವನು ಚೈತನ್ಯರೂಪನೆಂದು ಹೇಗೋ ಮನಗಾಣಬಹುದು : ಆದರೆ ಜೀವನಿಗೆ ಗೋಚರವಾಗುತ್ತಿರುವ, ಜೀವನಿಗೆ ಪ್ರಿಯವಾಗಿಯೂ ಅಪ್ರಿಯವಾಗಿಯೂ ಕಾಣುತ್ತಿರುವ, ಜೀವನು ಉಪಯೋಗಿಸಿದಂತೆ ಉಪಯೋಗವಾಗುತ್ತಾ ಪರತಂತ್ರವಾಗಿದ್ದುಕೊಂಡಿರುವ ಜಡವಸ್ತುಗಳೂ ಚೈತನ್ಯರೂಪವೆಂದೇ ಹೇಗೆ ಮನಗಾಣಬಹುದು?– ಎಂಬ ಶಂಕೆಯು ನಮ್ಮಲ್ಲಿ ಅನೇಕರನ್ನು ಬಾಧಿಸುತ್ತಿರುವದು. ಆದ್ದರಿಂದ ಈ ಶಂಕೆಗೆ ಪರಿಹಾರವಾಗಿ ಮತ್ತೊಂದು ದೃಷ್ಟಾಂತವನ್ನೊಳಗೊಂಡಿರುವ ಈ ಮುಂದಿನ ಶ್ಲೋಕವನ್ನು ಪ್ರಾರಂಭಿಸಿರುತ್ತಾರೆ :

**ಆಭಾತೀದಂ ವಿಶ್ವಮಾತ್ಮನ್ಯಸತ್ಯಂ**
**ಸತ್ಯಜ್ಞಾನಾನನ್ದರೂಪೇ ವಿಮೋಹಾತ್ ।**
**ನಿದ್ರಾಮೋಹಾತ್ ಸ್ವಪ್ನವತ್ ತನ್ನ ಸತ್ಯಂ**
**ಶುದ್ಧಃ ಪೂರ್ಣೋ ನಿತ್ಯ ಏಕಃ ಶಿವೋಽಹಮ್ ॥ ೩ ॥**

**ಪ್ರತಿಪದಾರ್ಥ :** ಅಸತ್ಯಂ_ಸತ್ಯವಲ್ಲದ, ಇದಂ_ಈ, ವಿಶ್ವಂ-ಪ್ರಪಂಚವೆಲ್ಲವೂ, ಸತ್ಯಜ್ಞಾನಾನನ್ದರೂಪೇ_ಸಚ್ಚಿದಾನಂದರೂಪನಾದ, ಆತ್ಮನಿ_ಆತ್ಮನಲ್ಲಿ, ನಿದ್ರಾಮೋಹಾತ್ ನಿದ್ರೆಯಿಂದಾದ ಮೋಹದಿಂದ, ಸ್ವಪ್ನವತ್_ಕನಸು ಕಾಣಿಸುವಹಾಗೆ, ವಿಮೋಹಾತ್ ಭ್ರಾಂತಿಯಿಂದ, ಆಭಾತಿ_ತೋರುತ್ತಿರುವದು. ತತ್-ಆದ್ದರಿಂದ, ನ ಸತ್ಯಂ_ಸತ್ಯವಲ್ಲ ಅಹಂ-ನಾನು, ಶುದ್ಧಃ-ನಿರ್ಮಲನೂ, ಪೂರ್ಣಃ-ಒಂದರ ಅಳತೆಗೂ ಸಿಕ್ಕದವನೂ, ನಿತ್ಯಃ-ನಿತ್ಯನೂ, ಏಕಃ_ಒಬ್ಬನೇ ಒಬ್ಬನೂ ಆದ, ಶಿವಃ-ಶಿವನು.

೩. ಈ ಅಸತ್ಯವಾದ ಪ್ರಪಂಚವೆಲ್ಲವೂ ನಿದ್ರೆಯ ಮೋಹದಿಂದ ಕನಸು ತೋರಿಕೊಳ್ಳುವಂತೆ, ತಪ್ಪುತಿಳಿವಳಿಕೆಯಿಂದ ತೋರುತ್ತಿರುವದು. ಆದ್ದರಿಂದ ಇದು ಸತ್ಯವಲ್ಲ. ನಾನು ಶುದ್ಧನೂ ಪೂರ್ಣನೂ ನಿತ್ಯನೂ ಏಕನೂ ಆದ ಶಿವನು.

## ವಿವರಣೆ

### ಹಗ್ಗದ ಹಾವಿನ ದೃಷ್ಟಾಂತದ ವಿಷಯದಲ್ಲಿ ಶಂಕೆ

ಹಿಂದಿನ ಶ್ಲೋಕದಲ್ಲಿ ಹೇಳಿದ ಹಗ್ಗದ ಹಾವಿನ ದೃಷ್ಟಾಂತವನ್ನಿಟ್ಟುಕೊಂಡರೆ ಕೆಲವು ಸಂದೇಹಗಳು ಹುಟ್ಟುತ್ತವೆ. ಈಶ್ವರನಲ್ಲಿ ಜೀವತ್ವವೆಂಬುದು ಆ ದೃಷ್ಟಾಂತದಂತೆ ಕಲ್ಪಿತವಾಗಿರುವದೆಂದರೆ ಈ ಕೆಳಗಿನ **ಆಕ್ಷೇಪಗಳು** ಹುಟ್ಟುವವು ;

೧) ಹಗ್ಗವೂ ಹಾವೂ ನಾವು ನೋಡಿದ ಪದಾರ್ಥಗಳು. ಆದ್ದರಿಂದ ಹಗ್ಗವನ್ನು ಮಬ್ಬುಗತ್ತಲೆಯಲ್ಲಿ ನೋಡಿ ಅದು ಹಗ್ಗವೆಂದು ಅರಿತುಕೊಳ್ಳದೆ ಇದ್ದಾಗ ನಮಗೆ ಮೊದಲೇ ಇದ್ದ ಹಾವಿನರಿವಿನ ಸಂಸ್ಕಾರದಿಂದ ಇದು ಹಾವೆಂಬ ಭ್ರಮೆಯುಂಟಾಗಬಹುದಾಗಿದೆ. ಆದರೆ ನಾವು ಅದ್ವಿತೀಯಶಿವಸ್ವರೂಪರಾಗಿದ್ದರೆ ಸಂಸಾರಿತ್ವದ ಸಂಸ್ಕಾರವಾಗಲಿ, ಅದು ಎದ್ದುಕೊಳ್ಳುವದರಿಂದ ಉಂಟಾಗಬಹುದಾದ ಭ್ರಾಂತಿಯಾಗಲಿ, ಆಗುವದು ಹೇಗೆ ?

೨) ದೃಷ್ಟಾಂತದಲ್ಲಿ ಮೊದಲು ನಿಜವಾದ ಹಾವಿನ ಅನುಭವವೊಂದು ಆಗಿರುತ್ತದೆ ; ಅದರ ಸಂಸ್ಕಾರದಿಂದ ಹಾವಿನ ಭ್ರಾಂತಿಯಾಗಿರುತ್ತದೆ. ಇದಲ್ಲದೆ ಭ್ರಾಂತಿಯೆಂಬುದು ನಿಜವಾದ ಅನುಭವವೊಂದಿದ್ದರೇ ಉಂಟಾಗುವ

ದಾಗಿದೆ. ಆದ್ದರಿಂದ ಸಂಸಾರಿತ್ವವು ಭ್ರಾಂತಿಯಾಗಿದ್ದರೆ ನಿಜವಾದ ಸಂಸಾರಿತ್ವವೊಂದು ಇರಬೇಕಾಯಿತು. ಅದ್ವಿತೀಯಚೈತನ್ಯವಾದದಲ್ಲಿ ಸಂಸಾರಿತ್ವವು ಹೇಗೆ ಹೊಂದುತ್ತದೆ? ಅದು ಹೊಂದದಿದ್ದರೆ ಸಂಸಾರಿತ್ವವು ಭ್ರಾಂತಿಯೆಂದು ಹೇಗೆ ನಂಬುವದು ?

೩) ದೃಷ್ಟಾಂತದ ಹಗ್ಗವೂ ಹಾವೂ ನೋಡುವವನಿಗಿಂತ ಬೇರೆಯಾಗಿರುತ್ತವೆ, ವಿಷಯವಾಗಿರುತ್ತವೆ. ತನ್ನನ್ನೇ ಹಾವೆಂದು ಯಾವ ಮನುಷ್ಯನೂ ಎಣಿಸಿಕೊಳ್ಳುವದಿಲ್ಲ. ಆದರೆ ದೃಷ್ಟಾಂತದಲ್ಲಿ 'ನಾನು ಸಂಸಾರಿಯು' ಎಂದು ವಿಷಯಿಯನ್ನೇ ಸಂಸಾರಿಯೆಂದು ತಿಳಿದುಕೊಂಡಿದೇವೆಂದು ಹೇಳುತ್ತೀರಿ. ಆದ್ದರಿಂದ ಇದೂ ದೃಷ್ಟಾಂತಕ್ಕೆ ಹೊಂದಲಿಲ್ಲ.

೪) ಒಂದು ಹಗ್ಗವನ್ನು ಎರಡೆಂದು ಯಾರೂ ತಪ್ಪಾಗಿ ಭಾವಿಸುವದಿಲ್ಲ, ಒಂದು ಕಡೆ ಇರುವವನ್ನು ಮತ್ತೊಂದು ಕಡೆ ಇರುವದೆಂದೂ ಭ್ರಾಂತಿಪಡುವದಿಲ್ಲ ; ಹಗ್ಗದ ರೂಪಕ್ಕೆ ಸಮನಲ್ಲದ ರೂಪಿನ ಹಂಡೆಯೇ ಮುಂತಾದವುಗಳನ್ನು ಹಗ್ಗದಲ್ಲಿ ಯಾರೂ ಹುಟ್ಟುಗಟ್ಟುವದಿಲ್ಲ. ಆದರೆ ದಾರ್ಷ್ಟಾಂತಿಕದಲ್ಲಿ ಒಬ್ಬ ಶಿವನಲ್ಲಿ ಅನೇಕ ಜೀವರ ಭ್ರಾಂತಿಯಾಗಿರುತ್ತದೆಯೆಂದೂ ಆತ್ಮನಿಗೆ ವಿಷಯವಾಗಿ ಅವನಿಗೆ ಹೊರಚಾಗಿರುವ ಪ್ರಪಂಚವು ವಿಷಯಿಯಾಗಿರುವ ಅವನಲ್ಲಿ ಕಲ್ಪಿತವಾಗಿರುವದೆಂದೂ ಶುದ್ಧಚೈತನ್ಯಸ್ವರೂಪಕ್ಕೆ ಸಮನಲ್ಲದ ರೂಪಿನ ಅಶುದ್ಧಜಡವಸ್ತುಗಳಿಂದ ಕೂಡಿದ ಪ್ರಪಂಚವು ಅದರಲ್ಲಿ ಕಲ್ಪಿತವಾಗಿರುವದೆಂದೂ ವೇದಾಂತಿಗಳು ಹೇಳುತ್ತಾರೆ. ಇದೂ ಹಗ್ಗದ ಹಾವಿನ ದೃಷ್ಟಾಂತಕ್ಕೆ ಹೊಂದುಗಡೆಯಾಗುವದಿಲ್ಲ.

ಹೀಗಿರುವಲ್ಲಿ ನಾವು ಶಿವಸ್ವರೂಪರೆಂದೂ ಅದರಲ್ಲಿ ಎಂದಿಗೂ ಇಲ್ಲದ ಜೀವತ್ವಜಡತ್ವಗಳನ್ನು ಆ ನಮ್ಮ ಸ್ವರೂಪದಲ್ಲಿಯೇ ಕಲ್ಪಿಸಿಕೊಂಡಿರುವೆವೆಂದೂ ನಂಬುವದು ಹೇಗೆ ?

## ಪ್ರಪಂಚವು ತಪ್ಪುತಿಳಿವಳಿಕೆಯಿಂದ ಆತ್ಮನಲ್ಲಿಯೇ ತೋರುತ್ತಿರುವದು

ಈ ಮೇಲೆ ಹೇಳಿದ ಆಕ್ಷೇಪಗಳಿಗೆ ಒಂದೊಂದಾಗಿ **ಪರಿಹಾರವನ್ನು** ಈಗ ಹೇಳುತ್ತೇವೆ :

೧) ಹಿಂದೆ ಎಂದಿಗೂ ನಮಗೆ ಆಗದೆ ಇದ್ದ ಸಂಸಾರಿತ್ವದ ಸಂಸ್ಕಾರ ವಾಗಲಿ ಅದರಿಂದಾದ ಭ್ರಮೆಯಾಗಲಿ ಉಂಟಾದದ್ದು ಹೇಗೆ ?– ಎಂಬುದು ಮೊದಲನೆಯ ಆಕ್ಷೇಪವಷ್ಟೆ. ಆದರೆ ಭ್ರಾಂತಿಗೆ ಸಮಾನರೂಪವಾದ ಅನುಭವವು ಹಿಂದೆ ಆಗಿರಲೇಬೇಕೆಂಬ ನಿಯಮವೇನೂ ಇರುವದಿಲ್ಲ. ದೃಷ್ಟಾಂತದ ಹಗ್ಗದಲ್ಲಿ 'ಇದು ಹಾವು' ಎಂದು ಯಾವಾಗಲೂ ಅನುಭವವಿರಲಿಲ್ಲ; ಆದರೂ 'ಇದು ಹಾವು' ಎಂಬ ಭ್ರಾಂತಿಯಾಗಿರುತ್ತದೆ. ಇದರಂತೆ ಸಂಸಾರಿತ್ವ ಭ್ರಾಂತಿಯೂ ಬಂದಿರುವದೆಂದು ನಂಬಬಹುದಾಗಿದೆ.

೨) ನಿಜವಾದ ಹಾವನ್ನು ನೋಡಿಯೇ ಹಾವಿನ ಭ್ರಮೆಯಾಗಿರುವದರಿಂದ ನಿಜವಾದ ಸಂಸಾರಿಯೊಬ್ಬನನ್ನು ನೋಡಿಯೇ ಸಂಸಾರಿತ್ವಭ್ರಮೆಯುಂಟಾಗಬೇಕಲ್ಲವೆ ?– ಎಂಬುದು ಎರಡನೆಯ ಆಕ್ಷೇಪ. ಆದರೆ ನಿಜವಾಗಿರುವ ವಸ್ತುವನ್ನು ಕಂಡೇ ಭ್ರಮೆಯಾಗಬೇಕೆಂಬ ನಿಯಮವೇನೂ ಇಲ್ಲ. ಹಾವನ್ನು ಹುಟ್ಟಿದಂದಿನಿಂದ ನೋಡದವನೊಬ್ಬ, ಅದನ್ನು ನೋಡಿರುವವನೊಬ್ಬ–ಹೀಗೆ ಇಬ್ಬರು ಹಗ್ಗವನ್ನು ದೂರದಿಂದ ನೋಡಿ ನಸುಗತ್ತಲೆಯಾದ್ದರಿಂದ ಅದನ್ನು ಹಗ್ಗವೆಂದು ಅರಿತುಕೊಳ್ಳಲಿಲ್ಲವೆಂದು ಇಟ್ಟುಕೊಳ್ಳಿರಿ. ಆಗ ಹಾವನ್ನು ನೋಡಿದ್ದವನು 'ಅಗೋ ಹಾವು' ಎಂದು ಹೇಳಿದರೆ ಇನ್ನೊಬ್ಬನಿಗೆ ಹಾವೆಂಬ ತಿಳಿವಳಿಕೆಯುಂಟಾಗುತ್ತದೆ. ಆ ಇನ್ನೊಬ್ಬನು ಹಾವೆಂಬ ಹೆಸರನ್ನು ಹೇಳಿದವನಿಂದ ಕಲಿತುಕೊಳ್ಳುತ್ತಾನಾದರೂ ಹಗ್ಗದ ರೂಪವಲ್ಲದ್ದನ್ನು ಹಗ್ಗದಲ್ಲಿ ಹುಟ್ಟಿಗಟ್ಟಿದ್ದೆಂಬುದು ಇಬ್ಬರಿಗೂ ಸಮಾನವಾಗಿರುತ್ತದೆ. ಇಷ್ಟಾದಮೇಲೆ ಅವನು ಈ ಹಾವಿನ ಸಂಸ್ಕಾರದಿಂದ ಮತ್ತೊಂದು ಹಗ್ಗವನ್ನೂ ಹಾವೆಂದೇ ಭಾವಿಸಿಕೊಳ್ಳಬಹುದಷ್ಟೆ ? ಈ ಸಂದರ್ಭದಲ್ಲಿ ಭ್ರಾಂತಿಗೆ ಮೂಲವಾದ ನಿಜವಾದ ಹಾವೇ ಇಲ್ಲವಾಗುವದು.

ಆಕ್ಷೇಪ : ಇದು ಸರಿಯಲ್ಲ. ಏಕೆಂದರೆ ದೃಷ್ಟಾಂತದಲ್ಲಿ ಇಬ್ಬರಲ್ಲಿ ಒಬ್ಬನಿಗೆ ನಿಜವಾದ ಹಾವಿನ ಅರಿವು ಇರುತ್ತದೆ. ಸಂಸಾರದಲ್ಲಿ ನಿಜವಾದ ಸಂಸಾರವು ಯಾರಿಗೂ ಇಲ್ಲ. ಮೊದಲು ಸಂಸಾರವು ಯಾರಿಗಾದರೂ ಒಬ್ಬರಿಗೆ ನಿಜವಾಗಿ ಆಗಿದ್ದರೆ ಮಿಕ್ಕವರಿಗೆ ಭ್ರಮೆಯಿಂದ ಆಗುವದೆಂಬುದಕ್ಕೆ ಈ ದೃಷ್ಟಾಂತವು ಸಲ್ಲುತ್ತಿತ್ತು. ಆದರೆ ಹಾಗಿಲ್ಲ. ಇದೂ ಅಲ್ಲದೆ ಹಗ್ಗದ ಸರಿಯಾದ ತಿಳಿವಳಿಕೆಯಾಗುವಾಗ 'ಇದು ಹಗ್ಗವೇ, ಸುಮ್ಮಸುಮ್ಮನೆ

ಹಾವೆಂದು ಭ್ರಮಿಸಿದೆನು' ಎಂದು ಅರಿವಾಗುವದು. ದಾರ್ಷ್ಟಾಂತಿಕದಲ್ಲಿ ಈ ಬಗೆಯ ಅನುಭವಕ್ಕೆ ಅವಕಾಶವಿಲ್ಲ. ಏಕೆಂದರೆ ದೃಷ್ಟಾಂತದಲ್ಲಿ ಹಗ್ಗ ವನ್ನು ಮೊದಲು ನೋಡಿದ್ದಂತೆ ಆತ್ಮನನ್ನು ಮೊದಲು ಯಾರೂ ನೋಡಿಲ್ಲ ; ನೋಡಿದ್ದರೆ ಮತ್ತೆ ಭ್ರಮೆ ಬರುವದಕ್ಕೂ ಕಾರಣವಿಲ್ಲ. ಅಥವಾ ಕಾರಣ ವಿದ್ದರೆ ವೇದಾಂತಜ್ಞಾನದಿಂದ ಆತ್ಮನನ್ನು ಕಂಡುಕೊಂಡರೂ ಮತ್ತೆ ಈ ಭ್ರಮೆ ಬರಬಹುದಾಗುವದು. ಹೀಗೆ ಸಂಸಾರವು ಭ್ರಮೆ ಎಂಬುದಕ್ಕೆ ಹಗ್ಗದ ಹಾವಿನ ದೃಷ್ಟಾಂತವು ಸ್ವಲ್ಪವೂ ಸರಿಹೋಗುವಂತೆ ಕಾಣುವದಿಲ್ಲ.

**ಸಮಾಧಾನ :** ದೃಷ್ಟಾಂತವು ದಾರ್ಷ್ಟಾಂತಿಕಕ್ಕೆ ಎಲ್ಲಾ ಬಗೆಯಿಂದ ಲೂ ಸಮನಾಗಿರಬೇಕಾದ ಅವಶ್ಯಕತೆಯಿಲ್ಲ. ಎರಡೂ ಎಲ್ಲಾ ವಿಷಯದಲ್ಲಿ ಯೂ ಒಂದೇ ಆಗಿದ್ದರೆ ಒಂದು ದೃಷ್ಟಾಂತವೆಂದೂ ಮತ್ತೊಂದು ದಾರ್ಷ್ಟಾಂ ತಿಕವೆಂದೂ ಹೇಳುವದಕ್ಕೇ ಆಗುವದಿಲ್ಲ. ಪ್ರಕೃತದಲ್ಲಿ ರಜ್ಜುಸರ್ಪದೃಷ್ಟಾಂತ ದಿಂದ ತಿಳಿಯಬೇಕಾದದ್ದೇನೆಂದರೆ: ರಜ್ಜುವನ್ನು ಸರ್ಪವೆಂದು ತಿಳಿಯುವಂತೆ ಆತ್ಮನನ್ನು ಅನಾತ್ಮವೆಂದು ತಿಳಿದಿರುತ್ತೇವೆಂಬುದು. ಆದ್ದರಿಂದ ಮೊದಲು ನಿಜವಾದ ಸಂಸಾರಿತ್ವವನ್ನು ಕಂಡವನಿಗೇ ಸಂಸಾರಿತ್ವಭ್ರಮೆಯಾಗಬೇಕೆಂಬ ನಿಯಮವಿಲ್ಲವೆಂದು ತೋರಿಸುವ ಮಟ್ಟಿಗೆ ಹೇಳಿದ ಮೇಲಿನ ದೃಷ್ಟಾಂತವು ಸರಿಯಾಗಿರುತ್ತದೆ.

## ಆತ್ಮನು ಸಚ್ಚಿದಾನಂದಸ್ವರೂಪನು

**ಆಕ್ಷೇಪ :** ಇದು ಹೋಗಲಿ. ಆತ್ಮನನ್ನಾದರೂ ನಾವು ಮೊದಲು ಅರಿತಿರಬೇಕೊ, ಬೇಡವೊ? ಹಗ್ಗವನ್ನು ಹಾವೆಂದು ತಿಳಿದುಕೊಂಡೆನು ಎಂಬ ಅನುಭವವು ಹಗ್ಗದ ಸ್ವರೂಪವನ್ನೇ ಅರಿಯದವನಿಗೆ ಆಗಲಾರದಷ್ಟೆ ? ಇದು ನಿಜವಾದರೆ, ಆತ್ಮನನ್ನೇ ಅರಿಯದ ನಮಗೆ ಅನಾತ್ಮಭ್ರಮೆಯು ಹೇಗುಂಟಾಯಿತೆಂದು ಕೇಳಬಹುದಲ್ಲವೆ ?

**ಸಮಾಧಾನ :** ಆತ್ಮನನ್ನು ಅರಿಯದವರೇ ಇಲ್ಲ. 'ನಾನು, ನಾನು' ಎಂದು ಎಲ್ಲರೂ ತಮ್ಮ ಆತ್ಮನನ್ನು ಅರಿತಿದ್ದಾರೆ.

**ಆಕ್ಷೇಪ :** ಹಾಗಾದರೆ 'ನಾನು' ಎಂಬುದೇ ಆತ್ಮನೆಂದು ಎಲ್ಲರಿಗೂ ತಿಳಿದಿದೆಯೆಂದಾಯಿತು. ಇನ್ನು ಆತ್ಮನನ್ನು ಅರಿಯುವದಕ್ಕೆ ವೇದಾಂತ

ಶಾಸ್ತ್ರವೇತಕ್ಕೆ ಬೇಕು ? ಇನ್ನು ಆತ್ಮನನ್ನು ಅರಿತವರಿಗೂ ಭ್ರಮೆ ಬರುವ ದಾದರೆ ಆತ್ಮಜ್ಞಾನದಿಂದ ಪ್ರಯೋಜನವಾದರೂ ಏನು ?

**ಸಮಾಧಾನ :** ಆತ್ಮನನ್ನು 'ನಾನು' ಎಂದು ಸಾಮಾನ್ಯರೂಪದಿಂದ ತಿಳಿದಿರುತ್ತೇವೆ; ಆದರೆ 'ಸತ್ಯಜ್ಞಾನಾನಂದರೂಪನಾದ ಶಿವನೇ ನಾನು' ಎಂಬ ರೂಪದಿಂದ ತಿಳಿದಿರುವದಿಲ್ಲ. ಹಗ್ಗವನ್ನು ಹಾವೆಂದು ತಿಳಿಯುವಾಗ ಇದು ಎಂದು ಸಾಮಾನ್ಯರೂಪದಿಂದ ತಿಳಿದುಕೊಂಡಿದ್ದು ಹಗ್ಗವೆಂದು ವಿಶೇಷ ರೂಪದಿಂದ ತಿಳಿಯದೆ ಇರುವದರಿಂದಲ್ಲವೆ, ಅದನ್ನು ಹಾವೆಂದೋ ನೆಲದ ಬಿರುಕೆಂದೋ ಭ್ರಮೆಗೊಳ್ಳುವದು? ಅದರಂತೆಯೇ ಇಲ್ಲಿಯೂ ತಿಳಿಯಬೇಕು. ನಮ್ಮ ಆತ್ಮನು **ಸತ್ಯನು** ಎಂದರೆ ಯಾವಾಗಲೂ ಇದ್ದಂತೆಯೇ ಇರುವವನು; **ಜ್ಞಾನ**ಸ್ವರೂಪನು ಎಂದರೆ ಅರಿವಿನ ರೂಪವಾಗಿರುವವನು ; ಆನಂದ ಸ್ವರೂಪನು ಎಂದರೆ ಸುಖಸ್ವರೂಪನಾಗಿರುವವನು. ಇದನ್ನು ನಾವು ಅರಿತು ಕೊಳ್ಳಬೇಕಾಗಿದೆ. ಇದನ್ನು ವೇದಾಂತಶಾಸ್ತ್ರವು ನಮಗೆ ತಿಳಿಸಿಕೊಡುತ್ತದೆ.

**ಆಕ್ಷೇಪ :** ಸತ್ಯವೆಂದರೆ ಇದ್ದಂತೆಯೇ ಇರುವದೆಂದಾದರೆ ಕಲ್ಲು, ಮರ–ಮುಂತಾದವೂ ಇದ್ದಂತೆಯೇ ಇರುವವಲ್ಲ ! ಅವು ಆ ರೂಪಿನಿಂದ ಆತ್ಮನಾದರೆ ನಮಗೆ ಸತ್ಯಸ್ವರೂಪವು ತಿಳಿದೇ ಇರುವದೆಂದಾಗುವದಿಲ್ಲವೆ ?

**ಸಮಾಧಾನ :** ಹಾಗಲ್ಲ. ಯಾವ ಪದಾರ್ಥವೂ ನಿಜವಾಗಿ ತಾನಿದ್ದಂತೆಯೇ ಇರುವದಿಲ್ಲ. ಕಲ್ಲುಬಂಡೆಗಳು ಕೂಡ ಕಾಲಾನುಕಾಲಕ್ಕೆ ಹೇರಳವಾಗಿ ಮಾರ್ಪಾಡುಗಳನ್ನು ಪಡೆಯುವವು. ಅವು ಒಡೆದುಕೊಂಡು ಚೂರು ಚೂರಾಗುವವು, ಕೊನೆಗೆ ಮರಳಾಗಿಯೂ ಪರಿಣಮಿಸಬಹುದು. ಬಂಡೆಗಳು ಇದ್ದಂತೆಯೇ ಇರುತ್ತಿದ್ದರೆ ಇಷ್ಟೊಂದು ಮಾರ್ಪಾಡುಗಳು ಹೇಗೆ ಆದವು ? ಆದ್ದರಿಂದ ಕ್ರಮಕ್ರಮವಾಗಿ ಅವು ಬೇರ್ಪಡುತ್ತಿರುವವೆಂದೇ ಹೇಳಬೇಕಾಗುವದು. ಆದರೂ ವ್ಯವಹಾರದಲ್ಲಿ ಸ್ಥೂಲದೃಷ್ಟಿಗೆ ಕೆಲಕೆಲವು ಪದಾರ್ಥಗಳು ಇದ್ದಂತೆಯೇ ತೋರುತ್ತಿರುವವು ; ಉದಾಹರಣೆಗೆ ಮಣ್ಣಿನಿಂದ ಮಡಕೆ, ಕುಡಿಕೆ, ಗುಡಾಣ, ಹರವಿ, ಶ್ರಾವೆ– ಮುಂತಾದವುಗಳನ್ನು ಮಾಡಿದರೂ ಮಣ್ಣು ಮಣ್ಣೇ ಆಗಿರುತ್ತದೆ. ಆದ್ದರಿಂದ ಹೀಗೆ ಒಂದು ದೃಷ್ಟಿಯಿಂದ ನೋಡಿದರೆ ಇಂಥ ವಸ್ತುಗಳನ್ನೂ ಸತ್ಯವೆಂದು ಹೇಳಬಹುದು. ಆದರೆ

ನಮ್ಮ ಆತ್ಮನು ಸತ್ಯವೆಂದರೆ ಹೀಗೆ ವ್ಯವಹಾರದಲ್ಲಿ ಸತ್ಯವಾಗಿರುವವನೆಂದು ಅರ್ಥವಲ್ಲ; ಅವನು ನಿಜವಾಗಿಯೂ ಸತ್ಯವಾಗಿರುವವನು.

ಇದೂ ಅಲ್ಲದೆ ವ್ಯಾವಹಾರಿಕವಾಗಿ ಸತ್ಯವಾಗಿರುವ ವಸ್ತುಗಳಿಗೆ ಜ್ಞಾನವಿರಬೇಕೆಂಬ ನಿಯಮವಿಲ್ಲ. ಉದಾಹರಣೆಗೆ ಕಲ್ಲು, ಮಣ್ಣು - ಮುಂತಾದವುಗಳಿಗೆ ಜ್ಞಾನವಿರುವದಿಲ್ಲ. ಆದ್ದರಿಂದ ಅವಕ್ಕೆ **ಜಡವಸ್ತು**ಗಳೆಂದು ಹೆಸರು. ಆದರೆ ನಮ್ಮ ಆತ್ಮನು ಜ್ಞಾನಸ್ವರೂಪನಾಗಿರುತ್ತಾನೆ, 'ನಾನು ಇದನ್ನು ಅರಿಯುತ್ತೇನೆ' ಎಂಬ ರೂಪದಲ್ಲಿ ನಮಗೆ ಜ್ಞಾನದ ಅನುಭವವಿದೆಯಷ್ಟೆ; ಆತ್ಮನ ಜ್ಞಾನವು ಇಂಥದ್ದಲ್ಲ. ನಮಗೆ ಈ ಕಾಣುವ ಅರಿವು ಆಯಾ ವಿಷಯವನ್ನು ಹೊಂದಿಕೊಂಡು ಹುಟ್ಟುತ್ತಲೂ ಹೋಗುತ್ತಲೂ ಇರುತ್ತದೆ; ಆದ್ದರಿಂದ ಅದು ಮೇಲೆ ಹೇಳಿದಂತೆ ಪರಮಾರ್ಥವಾಗಿ ಸತ್ಯವಲ್ಲ. ಆತ್ಮನು ಸತ್ಯವೂ ಜ್ಞಾನವೂ ಆಗಿರುತ್ತಾನೆ; ಆದ್ದರಿಂದ ಆತ್ಮನ ಸ್ವರೂಪವಾದ ಜ್ಞಾನವು ಈ ಹುಟ್ಟಿಹೊಂದುವ ಅರಿವಲ್ಲ, ಅವನು ಯಾವ ವಿಕಾರವೂ ಇಲ್ಲದ ಕೂಟಸ್ಥವಾದ ಜ್ಞಾನದ ರೂಪದಲ್ಲಿರುತ್ತಾನೆ.

ಮತ್ತೊಂದು ವಿಷಯ. ನಮಗೆ ಜ್ಞಾನವಾಗಬೇಕಾದರೆ ನಮ್ಮ ಬುದ್ಧಿಯನ್ನು ಕ್ಲೇಶಪಡಿಸಿಕೊಳ್ಳಬೇಕು, ಏಕಾಗ್ರತೆಯಿಂದ ಆಲೋಚನೆ ಮಾಡಿಯೇ ಈ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಆದರೆ ಆತ್ಮನ ಸ್ವರೂಪದಲ್ಲಿ ಯಾವ ಕ್ಲೇಶವೂ ಇಲ್ಲ, ಯಾವ ದುಃಖವೂ ಇರುವದಿಲ್ಲ. ಅವನು **ಆನಂದ**ಸ್ವರೂಪನಾಗಿರುತ್ತಾನೆ. ಆದ್ದರಿಂದಲೂ ಈ ನಮ್ಮ ಜ್ಞಾನವು ಆತ್ಮನಲ್ಲ. ನಮಗೆ ವಿಷಯಗಳ ಭೋಗವಾಗುವಾಗ ಒಂದು ಬಗೆಯ ಸುಖವಾಗುವದಷ್ಟೆ; ಆತ್ಮನು ಆನಂದವೆಂದರೆ ಹಾಗಲ್ಲ. ವಿಷಯ ಭೋಗದ ಸುಖವು ಹುಟ್ಟಿಹೋಗುವದಾಗಿರುವದು, ಪರಾವಲಂಬನೆಯದೂ ಆಗಿರುವದು; ಆದರೆ ಆತ್ಮನು ಯಾವಾಗಲೂ ಒಂದೇ ರೂಪವಾಗಿರುವ ನಿರಪೇಕ್ಷವಾದ ಆನಂದವಾಗಿರುತ್ತಾನೆ.

ಹೀಗೆ ಲೋಕದಲ್ಲಿರುವ ಕೆಲಕೆಲವು ಪದಾರ್ಥಗಳನ್ನು ಸ್ಥೂಲದೃಷ್ಟಿಯಿಂದ ನೋಡಿದಾಗ ಸತ್ಯ, ಜ್ಞಾನ, ಆನಂದ - ಎಂಬ ಮಾತುಗಳಿಗೆ ತಕ್ಕವೆಂದು ತೋರುವದಾದರೂ ಚೆನ್ನಾಗಿ ಪರೀಕ್ಷೆಮಾಡಿದರೆ ಆತ್ಮನಲ್ಲದ ಯಾವ ಪದಾರ್ಥವೂ ನಿಜವಾದ ಅರ್ಥದಲ್ಲಿ ಸತ್ಯಜ್ಞಾನಾನಂದಸ್ವರೂಪ

ವಾಗಿರುವದಿಲ್ಲ. ಈ ಸ್ವರೂಪವನ್ನು ಅರಿತುಕೊಂಡರೆ ಅದರಲ್ಲಿ ಕಲ್ಪಿತವಾದ ಜೀವಜಗದ್ರೂಪವು ಬಾಧಿತವಾಗುತ್ತದೆ.

(೩-೪) ಇನ್ನು ಮೂರುನಾಲ್ಕನೆಯ ಆಕ್ಷೇಪಗಳನ್ನು ವಿಮರ್ಶಿಸೋಣ. ತನಗಿಂತ ಬೇರೆಯಾದ ವಿಷಯವಾದ ಹಗ್ಗದಲ್ಲಿ ವಿಷಯವಾದ ಹಾವನ್ನು ಹುಟ್ಟುಗಟ್ಟುವದುಂಟು, ಆದರೆ ತನ್ನನ್ನೇ ಬೇರೊಂದು ರೂಪದವನೆಂದು ಭ್ರಾಂತಿಪಡುವದುಂಟೆ? ಅದ್ವಿತೀಯವಾದ ಶಿವಸ್ವರೂಪದಲ್ಲಿ ಅನೇಕವಾದ ಜೀವರನ್ನೂ ಜಡವಸ್ತುಗಳನ್ನೂ ಕಲ್ಪಿಸಿರುವೆವೆಂದು ಹೇಗೆ ನಂಬುವದು? ಆತ್ಮನಿಗಿಂತ ಬೇರೆಯಾಗಿ ಅವನ ಮುಂದೆ ಅನಾತ್ಮರೂಪವಾದ ಪ್ರಪಂಚವೊಂದು ಕಲ್ಪಿತವಾಗಿದೆಯೆಂದು ನಂಬುವದು ಹೇಗೆ? ಇದೊಂದೂ ಹಗ್ಗದ ಹಾವಿನ ದೃಷ್ಟಾಂತಕ್ಕೆ ಹೊಂದುವಂತಿಲ್ಲವಲ್ಲ!- ಎಂಬುದೇ ಆ ಎರಡು ಆಕ್ಷೇಪಗಳ ಸಾರವು. ಆತ್ಮನು ಸತ್ಯಜ್ಞಾನಾನಂದಸ್ವರೂಪನಾದರೆ ಅವನಲ್ಲಿ ಅಸತ್ಯಜಡದುಃಖರೂಪವಾದ ಪ್ರಪಂಚವು ಹೇಗೆ ಕಲ್ಪಿತವಾಯಿತು? -ಎಂಬುದೂ ಆಕ್ಷೇಪಕನ ಶಂಕೆಯಲ್ಲಿ ಅಡಗಿರುತ್ತದೆ.

## ಪ್ರಪಂಚದ ತೋರಿಕೆಯು ಕನಸಿನಂತೆ

ಈ ಆಕ್ಷೇಪಗಳಿಗೆ ಪರಿಹಾರವನ್ನು ಹೇಳುವ ಮುಂಚೆ ಒಂದು ಮಾತನ್ನು ಹೇಳಬೇಕಾಗಿದೆ. ಅದೇನೆಂದರೆ ಆಕ್ಷೇಪಕನು ಹಗ್ಗದಹಾವಿನ ದೃಷ್ಟಾಂತವನ್ನು ಪಟ್ಟಾಗಿ ಹಿಡಿದುಕೊಂಡು ಒಬ್ಬ ಮನುಷ್ಯನು ಹಗ್ಗದಲ್ಲಿ ಹಾವನ್ನು ಒಂದಾನೊಂದು ಕಾಲದಲ್ಲಿ ಕಲ್ಪಿಸಿರುವಂತೆ ಆತ್ಮನು ತನ್ನಲ್ಲಿ ಒಂದಾನೊಂದು ಕಾಲದಲ್ಲಿ ಪ್ರಪಂಚವನ್ನು ಕಲ್ಪಿಸಿಕೊಂಡಿರುತ್ತಾನೆಂದು ಭಾವಿಸಿರುತ್ತಾನೆ. ಆದ್ದರಿಂದ ಅವನ ವಿಚಾರಕ್ರಮದಲ್ಲಿ ಇಷ್ಟೊಂದು ತೊಡಕುಗಳಾಗಿರುತ್ತವೆ. ಆದರೆ ನಿಜವಾಗಿ ನೋಡಿದರೆ ಪರಮಾರ್ಥದ ಶಿವಸ್ವರೂಪದಲ್ಲಿ ದೃಷ್ಟಾಂತದಲ್ಲಿರುವಂತೆ ಯಾರೊಬ್ಬರೂ ಒಂದಾನೊಂದು ಕಾಲದಲ್ಲಿ ಸಂಸಾರಿತ್ವವನ್ನೂ ಪ್ರಪಂಚವನ್ನೂ ಕಲ್ಪಿಸಿರುವದಿಲ್ಲ. ಒಂದು ದೃಷ್ಟಿಯಿಂದ ನೋಡಿದರೆ "ನಾನು ಜೀವನು, ನನ್ನಂತೆ ಅನೇಕ ಜೀವರನ್ನೂ ನನಗಿಂತ ವಿಲಕ್ಷಣವಾದ ಜಡವಸ್ತುಗಳನ್ನೂ ಒಳಗೊಂಡಿರುವ ಪ್ರಪಂಚದಲ್ಲಿ ನಾನಿರುವೆನು" ಎಂಬ ಭಾವನೆ ಬರುವದು; ಮತ್ತೊಂದು ದೃಷ್ಟಿಯಿಂದ ನೋಡಿದರೆ "ನಾನು

ಯಾವ ಜೀವತ್ವವೂ ಇಲ್ಲದ ಸತ್ಯಜ್ಞಾನಾನಂದಸ್ವರೂಪನಾದ ಅದ್ವಿತೀಯಾತ್ಮನು" ಎಂಬ ಭಾವನೆಯು ಬರುವದು. ಈ ಎರಡು ಭಾವನೆಗಳಲ್ಲಿ ಎರಡನೆಯದು ಸರಿ; ಏಕೆಂದರೆ ಆ ಭಾವನೆಯು ಬಂದಕೂಡಲೆ ಸಂಸಾರಿತ್ವವೂ ಜಗತ್ತೂ ಅಸತ್ಯವೆಂದು ತೋರಿಬಿಡುವದು-ಎಂಬುದನ್ನು ತಿಳಿಸುವದಕ್ಕಾಗಿ ಹಗ್ಗದ ಹಾವಿನ ದೃಷ್ಟಾಂತವನ್ನು ಕೊಟ್ಟಿದೆಯೋ ಹೊರತು ಆ ದೃಷ್ಟಾಂತದಲ್ಲಿರುವದೆಲ್ಲ ದಾರ್ಷ್ಟಾಂತಿಕಕ್ಕೂ ಹೊಂದುವದೆಂಬ ಅಭಿಪ್ರಾಯದಿಂದೇನೂ ಅದನ್ನು ಕೊಟ್ಟಿರುವದಿಲ್ಲ. ಆದ್ದರಿಂದ ಈಗ ಮೂರನೆಯ ನಾಲ್ಕನೆಯ ಆಕ್ಷೇಪಗಳನ್ನು ಪರಿಹರಿಸುವದಕ್ಕೆ ತಕ್ಕ ಮತ್ತೊಂದು ದೃಷ್ಟಾಂತವನ್ನು ತೆಗೆದುಕೊಳ್ಳಬಹುದು. ಹೇಗೆಂದರೆ ನಿದ್ರೆಯ ಮಬ್ಬಿನಿಂದ ಕನಸಾದರೆ ಮನುಷ್ಯನಿಗೆ ಎಂಥೆಂಥ ದೃಶ್ಯಗಳು ತೋರುವವು, ನೋಡಿರಿ! ತನ್ನ ಸ್ವರೂಪವನ್ನೇ ಪೂರ ಮರೆತುಬಿಟ್ಟು ಮತ್ತೊಂದು ರೂಪದವನಾಗಿರುವಂತೆ ಕಾಣುವನು, ತಾನು ಒಬ್ಬನೇ ಇದ್ದರೂ ತನ್ನ ಮುಂದೆ ಎಷ್ಟೋ ಜನರೂ ಪ್ರಾಣಿಗಳೂ ಮರಗಿಡಗಳೂ ಕಲ್ಲು ಮಣ್ಣು ಮುಂತಾದ ಜಡವಸ್ತುಗಳೂ ಸೇರಿರುವ ಜಗತ್ತಿರುವಂತೆಯೂ ಆ ಜಗತ್ತಿನಲ್ಲಿ ತಾನೊಬ್ಬನೆಂತಲೂ ಕಂಡುಕೊಳ್ಳುವನು ಆದರೂ ಪರಮಾರ್ಥವೇನು ? ಆ ಕನಸಿನ ಜಗತ್ತೂ ಅಲ್ಲಿ ತೋರುವ ತನ್ನ ರೂಪವೂ ತೀರ ಅಸತ್ಯವಾಗಿರುತ್ತವೆ, ತಾನು ಎಚ್ಚತ್ತ ಮಾತ್ರದಿಂದ ಮಾಯವಾಗುವದರಿಂದ ಆ ದೃಶ್ಯವೆಲ್ಲವೂ ತನ್ನ ಅಧೀನದಲ್ಲಿರುವ ಇರವುಳ್ಳದಾಗಿರುತ್ತದೆ. ಈ ದೃಷ್ಟಾಂತದಲ್ಲಿ ಕನಸನ್ನು ನಾವು ಯಾರೂ ಬೇಕೆಂತ ಕಲ್ಪಿಸಿಕೊಂಡಿರುವದಿಲ್ಲ, ಅದೇ ತೋರುತ್ತದೆ ; ಆದರೆ ಅದು ನಿಜವಲ್ಲ. ಇದರಂತೆಯೇ ಆಕ್ಷೇಪಕನು ಕೇಳುವ ಸ್ವರೂಪದ ಜೀವತ್ವವೂ ಜಗತ್ತೂ ಸತ್ಯಜ್ಞಾನಾನಂದರೂಪನಾದ ನಮ್ಮ ಆತ್ಮಸ್ವರೂಪದಲ್ಲಿ ಕಲ್ಪಿತವಾಗಿರುತ್ತವೆ ಎಂದು ಹೇಳುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ.

## ಪ್ರಪಂಚವು ಸತ್ಯವಲ್ಲ

ಆಕ್ಷೇಪ : ಹಗ್ಗದಲ್ಲಿ ಹಾವನ್ನು ಹುಟ್ಟುಗೆಟ್ಟುವದುಂಟು, ಕನಸಿನಲ್ಲಿ ಇಲ್ಲದ ಪ್ರಪಂಚವನ್ನು ಕಾಣುವದುಂಟು- ಎಂದ ಮಾತ್ರಕ್ಕೆ ಈಗಿರುವ ಪ್ರಪಂಚವೂ ಇದರಲ್ಲಿರುವ ಸಂಸಾರವೂ ಕಲ್ಪಿತವಾದದ್ದೆಂದು ಹೇಳಬಹುದೆ ? ಪ್ರಪಂಚವು ಬರಿಯ ತೋರಿಕೆ ಎಂಬುದು ಒಂದೆರಡು ದೃಷ್ಟಾಂತಗಳನ್ನು

ಕೊಟ್ಟ ಮಾತ್ರದಿಂದ ಸಿದ್ಧವಾಗುವದಲ್ಲ. ''ಕತ್ತೆಯನ್ನು ನೋಡು, ಎಷ್ಟು ಕರ್ಕಶವಾಗಿ ಅರಚುತ್ತದೆ ! ಅವನೂ ಅದರಂತೆಯೇ'' ಎಂದ ಮಾತ್ರದಿಂದ ಸಂಗೀತಗಾರನ ಸ್ವರವು ಗರ್ದಭಸ್ವರವೆಂದು ನಿರ್ಣಯಿಸಿದಂತಾಗುವದಿಲ್ಲ ; ''ಆಹಾ, ಏನು ಕೋಕಿಲಸ್ವರ !'' ಎಂದು ಉತ್ತಮವಾದ ಹೋಲಿಕೆಯನ್ನು ಕೊಟ್ಟಮಾತ್ರದಿಂದ ಗಂಟಲುಕಟ್ಟಿಕೊಂಡು ವಿಕಸ್ವರವಾಗಿ ಮಾತನಾಡುತ್ತಿರುವ ಹೆಂಗಸಿಗೆ ಮೃದುಮಧುರವಾದ ಸುಸ್ವರವಿರುವದೆಂದು ನಿರ್ಣಯಿಸಿದಂತಾಗುವದೂ ಇಲ್ಲ. ಹಗ್ಗದ ಹಾವು ತೋರಿಕೆಯಾಗಲಿ, ಕನಸೂ ತೋರಿಕೆಯಾಗಲಿ, ಅಷ್ಟುಮಾತ್ರದಿಂದ ಪ್ರಪಂಚಕ್ಕೇನು ಬಂತು ?

**ಸಮಾಧಾನ :** ತೋರಿಕೆಯ ವಸ್ತುಗಳು ಹೇಗೆ ತೋರುವವೋ ಪ್ರಪಂಚವೂ ಹಾಗೆಯೇ ತೋರುವದು; ಅವು ಸತ್ಯವಾದವುಗಳೆಂಬ ಬುದ್ಧಿಯು ಹೇಗೆ ಸರಿಯಾದ ತಿಳಿವಳಿಕೆಯಿಂದ ಬಾಧಿತವಾಗುವದೋ ಹಾಗೆಯೇ ಪ್ರಪಂಚಸತ್ಯತ್ವಬುದ್ಧಿಯೂ ಸರಿಯಾದ ತಿಳಿವಳಿಕೆಯಿಂದ ಬಾಧಿತವಾಗುತ್ತದೆ. ಆದ್ದರಿಂದ ಆ ತೋರಿಕೆಯ ವಸ್ತುಗಳಿಗೂ ಈ ಪ್ರಪಂಚಕ್ಕೂ ಯಾವ ಹೆಚ್ಚುಕಡಿಮೆಯೂ ಇರುವದಿಲ್ಲ. ಉದಾಹರಣೆಗೆ ಕನಸಿನಲ್ಲಿ ತೋರುವ ಪ್ರಪಂಚವನ್ನು ನೋಡಿರಿ. ಎಚ್ಚರದಲ್ಲಿರುವಂತೆಯೇ ಕನಸಿನ ಆ ಪ್ರಪಂಚವೂ ನಮ್ಮ ಮುಂದೆ ಹರಡಿಕೊಂಡಿರುವಂತೆ ತೋರುವದು ; ಎಚ್ಚರದ ಪ್ರಪಂಚದಂತೆಯೇ ಅದೂ ಸತ್ಯವೆಂದು ಆಗ್ಗೆ ತೋರಿಕೊಳ್ಳುವದು ; ಎಚ್ಚರದ ಪ್ರಪಂಚದಲ್ಲಿರುವಂತೆಯೇ ಆ ಪ್ರಪಂಚದಲ್ಲಿಯೂ ಅನೇಕ ಜನರೂ ಪಶುಪಕ್ಷಿಮೃಗಾದಿಗಳೂ ಇರುವಂತೆ ತೋರುತ್ತಿರುವವು, ಎಚ್ಚರದ ಪ್ರಪಂಚದಲ್ಲಿ ಜೀವರುಗಳು ಹುಟ್ಟಿ ಕೆಲಕಾಲ ವ್ಯವಹಾರಮಾಡಿ, ಕೊನೆಗೆ ಸಾಯುವಂತೆಯೇ ಅಲ್ಲಿಯೂ ಜೀವರುಗಳು ಹುಟ್ಟಿ ವ್ಯವಹಾರಮಾಡಿ ಸಾಯುತ್ತಿರುವರೆಂದು ನಮಗೆ ಭಾವನೆಯುಂಟಾಗುವದು ; ಎಚ್ಚರದ ಪ್ರಪಂಚದಲ್ಲಿ ಹೇಗೆ ನಮಗೆ ಮಿಕ್ಕ ಜೀವರೊಡನೆ ಮತ್ತು ಜಡವಸ್ತುಗಳೊಡನೆ ಸಂಬಂಧವ್ಯವಹಾರಗಳಿರುವವೋ ಅಲ್ಲಿಯೂ ಹಾಗೆಯೇ ಇರುವವೆಂಬ ಗಟ್ಟಿಯಾದ ಭಾವನೆಯುಂಟಾಗುತ್ತದೆ. ಹೆಚ್ಚೇಕೆ ? ಕನಸೆಂಬುದು ಆ ಕಾಲಕ್ಕೆ ಎಲ್ಲಾ ವಿಧದಿಂದಲೂ ಎಚ್ಚರವೆಂದೇ ನಮಗೆ ಭಾವನೆಯಾಗಿರುತ್ತದೆ. ಹೀಗೆ ನಾವು ಎಚ್ಚರವೆಂದು ಕರೆಯುತ್ತಿರುವ ಅವಸ್ಥೆಯು ಕನಸಲ್ಲವೆಂದು ತೋರಿಸುವದಕ್ಕೆ

ಇದರಲ್ಲಿ ಯಾವ ಹೆಚ್ಚಿನ ಹೆಗ್ಗುರುತೂ ಇಲ್ಲದಿರುವಾಗ ಇದರಲ್ಲಿರುವ ಪ್ರಪಂಚವು ಸತ್ಯವೆನ್ನುವದಕ್ಕೆ ಯಾವ ಪ್ರಮಾಣವೂ ಇರುವದಿಲ್ಲ. ಆದ್ದರಿಂದ ಕನಸಿನ ದೃಷ್ಟಾಂತವು ಬರಿಯ ದೃಷ್ಟಾಂತವಲ್ಲ, ಪ್ರಪಂಚವು ಸುಳ್ಳೆಂಬುದಕ್ಕೂ ಅದು ಆತ್ಮನಲ್ಲಿ ಕಲ್ಪಿತವಾಗಿದೆಯೆಂಬುದಕ್ಕೂ ಸಾಕಾದ ಅನುಭವವೂ ಆಗಿರುತ್ತದೆ.

**ಆಕ್ಷೇಪ :** ಇದು ಸರಿಯಾಗಿ ತೋರುವದಿಲ್ಲ. ಏಕೆಂದರೆ ಕನಸು ಹೋದಮೇಲೆ ಎಚ್ಚರವು ಬಂದು ಕನಸು ಸುಳ್ಳೆಂದು ತೋರುತ್ತದೆ. ಆದರೆ ಎಚ್ಚರವು ಹೋದಮೇಲೆ ನಿಜವಾದ ಯಾವ ಅವಸ್ಥೆ ಬಂದು ಇದು ಸುಳ್ಳಾಗುವದು ? ಎಚ್ಚರದಲ್ಲಿದ್ದುಕೊಂಡೇ ಎಚ್ಚರವನ್ನೂ ಅದರ ಪ್ರಪಂಚವನ್ನೂ ಸುಳ್ಳೆನ್ನುವದಕ್ಕಾಗದೀತೆ ?

**ಸಮಾಧಾನ :** ಕನಸಿನಿಂದ ಎಚ್ಚರಕ್ಕೆ ಬಂದಮೇಲೆ ಕನಸು ಸುಳ್ಳೆಂದು ತಿಳಿವಳಿಕೆಯಾಗುವದೆಂಬುದು ಮುಖ್ಯವಾದದ್ದಲ್ಲ; ಕನಸು ಸುಳ್ಳೆಂಬ ಆ ತಿಳಿವಳಿಕೆಯು ಸರಿಯಾದದ್ದೆ, ಅಲ್ಲವೆ ?– ಎಂಬುದೀಗ ವಿಚಾರಮಾಡಬೇಕಾದದ್ದು. ಅದು ಸರಿಯಾದದ್ದೇ ; ಏಕೆಂದರೆ ಎಚ್ಚರದಲ್ಲಿ ಕನಸಿನ ಪ್ರಪಂಚವು ಎಲ್ಲಿಯೂ ಇರುವದಿಲ್ಲ. ಕನಸಿನ ಪ್ರಪಂಚವು ಸತ್ಯವಾಗಿದ್ದರೆ ಅದು ಈಗಲೂ ಎಲ್ಲಿಯಾದರೂ ಇರಬಹುದೆಂದು ನಾವು ಊಹಿಸುವದಕ್ಕೆ ಬರುತ್ತಿತ್ತು ; ಆದರೆ ಅನುಭವದಲ್ಲಿ ಹಾಗಿಲ್ಲ. ಕನಸಿನ ಪ್ರಪಂಚವು ಕನಸಿನ ಕಾಲದಲ್ಲಿಯಾಗಲಿ ಈಗಲಾಗಲಿ ಎಲ್ಲಿಯೂ ಇರುವದೇ ಇಲ್ಲವೆಂದೇ ನಾವೆಲ್ಲರೂ ನಿಶ್ಚಯಿಸಿರುತ್ತೇವೆ. ಆದ್ದರಿಂದ ಕನಸೂ ಅದರ ಪ್ರಪಂಚವೂ ಸುಳ್ಳೇ, ಎಂದರೆ ಆಗಿನ ಮಟ್ಟಿಗೆ ಕಾಣಿಸಿಕೊಂಡ ಬರಿಯ ತೋರಿಕೆಯೇ ಎಂದಾಯಿತು. ಇದರಂತೆ ನಮಗೆ ಕನಸಾಗುವಾಗ ಎಚ್ಚರದ ಪ್ರಪಂಚವು ಎಲ್ಲಿರುತ್ತದೆ? ಅದು ಆಗ ಎಲ್ಲಿಯೂ ಇರುವದಿಲ್ಲ. ಅದು ಎಲ್ಲಿಯಾದರೂ ಇರುವದೆಂಬ ಭಾವನೆಯೇ ನಮಗೆ ಕನಸಿನಲ್ಲಿರುವದಿಲ್ಲ. ನಾವು ಕನಸು ಕಾಣುವಾಗ ನಮ್ಮ ಎಚ್ಚರದ ಪ್ರಪಂಚವು– ಎಂದರೆ ನಾವು ಎಚ್ಚರವಾಗಿದ್ದಾಗ ಮಾತ್ರ ತೋರಿಕೊಳ್ಳಬಲ್ಲ ಪ್ರಪಂಚವು- ಇದೆ ಎನ್ನುವದಾದರೆ ನಮಗೆ ಕನಸೂ ಎಚ್ಚರವೂ ಒಂದೇ ಕಾಲದಲ್ಲಿ ಆಗುತ್ತವೆಯೆಂದು ಹೇಳಿದಂತೆ ಆಗುತ್ತದೆ. ಇದು ತನಗೆ ತಾನೇ ವಿರುದ್ಧವಾದ ಮಾತಾಗಿರುತ್ತದೆ. ಆದ್ದರಿಂದ ಎಚ್ಚರದ ಪ್ರಪಂಚವೂ ಕನಸಿನ

ಪ್ರಪಂಚದಂತೆ ಅಸತ್ಯವೆಂದೇ ಹೇಳಬೇಕಾಯಿತು. ಅಂತೂ ಕನಸಿನಿಂದ ಮತ್ತೊಂದು ಅವಸ್ಥೆಗೆ ಬಂದದ್ದರಿಂದ ಕನಸು ಸುಳ್ಳೆಂದು ನಾವು ನಿರ್ಣಯಿಸಿರುವದಿಲ್ಲ. ಅದರ ಸ್ವರೂಪವನ್ನು ವಿಚಾರಮಾಡಿಯೇ ಅದು ಸತ್ಯವಲ್ಲವೆಂದು ನಾವು ಗೊತ್ತುಪಡಿಸಿರುತ್ತೇವೆ. ಅದರಂತೆಯೇ ಎಚ್ಚರದ ಸ್ವರೂಪವನ್ನು ವಿಚಾರಮಾಡಿದರೆ ಅದೂ ಸತ್ಯವಲ್ಲವೆಂದು ಗೊತ್ತಾಗುತ್ತವೆ ಈ ನಿರ್ಣಯಕ್ಕೆ ಮತ್ತೆ ಯಾವ ಅವಸ್ಥೆಗೂ ಹೋಗಬೇಕಾದದ್ದಿರುವದಿಲ್ಲ.

**ಆಕ್ಷೇಪ :** ಕನಸಿನ ಪ್ರಪಂಚದಂತೆ ಎಚ್ಚರದ ಪ್ರಪಂಚವೂ ಬರಿಯ ತೋರಿಕೆಯೆಂದು ಸಿದ್ಧವಾಯಿತೆಂದು ಇಟ್ಟುಕೊಳ್ಳೋಣ. ಆದರೆ ಈ ತೋರಿಕೆಯು ಸತ್ಯಜ್ಞಾನಾನಂದರೂಪನಾದ ಆತ್ಮನಲ್ಲಿ ಕಲ್ಪಿತವಾಗಿದೆ ಎಂಬುದಕ್ಕೆ ಆಧಾರವೇನು ? ನಮ್ಮ ಆತ್ಮನು ಸತ್ಯಜ್ಞಾನಾನಂದಸ್ವರೂಪ ನೆನ್ನುವದಕ್ಕೆ ಆಧಾರವಾದ ಅನುಭವವು ನಮಗೆಲ್ಲಿದೆ ?

**ಸಮಾಧಾನ :** ಇದಕ್ಕೆ ನಿದ್ರೆಯ ಅನುಭವವನ್ನು ನೋಡಿರಿ. ಎಚ್ಚರದಲ್ಲಿಯೂ ಕನಸಿನಲ್ಲಿಯೂ ನಮ್ಮಲ್ಲಿ ಜೀವತ್ವವೂ ಜಗತ್ತೂ ತೋರುತ್ತಿದ್ದರೂ ತನಿನಿದ್ರೆಯಲ್ಲಿ ನಾವೊಬ್ಬರೇ ಇರುತ್ತೇವೆ. ಹೀಗೆ ಎಚ್ಚರಕನಸುನಿದ್ರೆಗಳಲ್ಲಿ ನಮ್ಮ ಆತ್ಮಸ್ವರೂಪವು ಇದ್ದೇ ಇರುವದರಿಂದಲೂ ಅದು ಇಲ್ಲವೆಂಬುದನ್ನು ಕಲ್ಪಿಸುವದಕ್ಕೆ ಕೂಡ ಬರುವದಿಲ್ಲವಾದ್ದರಿಂದಲೂ ಆತ್ಮನು **ಸತ್ಸ್ವರೂಪ**ನೆಂದು ಏರ್ಪಡುತ್ತದೆ ; ಎಚ್ಚರಕನಸುಗಳಲ್ಲಿ ತೋರುವ ಜೀವಜಡ ಪ್ರಪಂಚವೆಲ್ಲವನ್ನೂ ಸಾಕ್ಷಿರೂಪದಿಂದ ಅರಿಯುತ್ತಿರುವದರಿಂದಲೂ ಯಾವ ಪ್ರಪಂಚವೂ ಇಲ್ಲದ ತನಿನಿದ್ರೆಯನ್ನೂ ಅದೇ ರೂಪದಿಂದ ಅನುಭವಿಸುತ್ತಿರುವದರಿಂದಲೂ ಆತ್ಮನು **ಜ್ಞಾನಸ್ವರೂಪ**ನೆಂತಲೂ ಏರ್ಪಡುತ್ತದೆ ; ಎಚ್ಚರ ಕನಸುಗಳಲ್ಲಿ ತೋರುವ ಯಾವ ವಸ್ತುವಾದರೂ ತನಗಾಗಿಯೇ ಬೇಕೆನಿಸುವದರಿಂದಲೂ ನಿದ್ರೆಯಲ್ಲಿ ಯಾವ ಹೊರಗಿನ ವಿಷಯವಿಲ್ಲದಿದ್ದರೂ ತನ್ನ ಇರವಿನಿಂದಲೇ ಸುಖದನುಭವವನ್ನು ಕೊಡುತ್ತಿರುವದರಿಂದಲೂ **ಆನಂದಸ್ವರೂಪ**ನೆಂತಲೂ ಏರ್ಪಡುತ್ತದೆ. ಹೀಗೆ ಯಾವಾಗಲೂ ಇರುತ್ತಿರುವ ಸತ್ಯಜ್ಞಾನಾನಂದ ಸ್ವರೂಪದಲ್ಲಿ ಎಚ್ಚರಕನಸುಗಳಲ್ಲಿ ಮಾತ್ರವೇ ತೋರುವ ಪ್ರಪಂಚವು ಕಲ್ಪಿತವಾಗಿರುತ್ತದೆ, ಎಂದರೆ ಆ ಆತ್ಮನನ್ನು ಬಿಟ್ಟು ಬೇರೆಯಾಗಿ ಸ್ವತಂತ್ರವಾಗಿ ಇರುವದಿಲ್ಲ– ಎಂಬುದೂ ಈ ವಿಚಾರದಿಂದಲೇ ಏರ್ಪಡುತ್ತದೆ

# ನಾನು ಶುದ್ಧನು, ಪೂರ್ಣನು, ನಿತ್ಯನು, ಏಕನು

ಇಲ್ಲಿಯವರೆಗಿನ ವಿಚಾರದಿಂದ ಒಟ್ಟಿನಿಂದ ಏನು ಸಿದ್ಧವಾಯಿತೆಂದರೆ ನಮ್ಮ ಆತ್ಮನು **ಶುದ್ಧನು,** ಅವನಲ್ಲಿ ಸಂಸಾರದ ಅಶುದ್ಧಿಯಾಗಲಿ ಜಡ ಪ್ರಪಂಚದ ಅಶುದ್ಧಿಯಾಗಲಿ ಒಂದಿಷ್ಟೂ ಇರುವದೇ ಇಲ್ಲ. ಅವನು ಎಚ್ಚರ ಕನಸು ನಿದ್ರೆಗಳೆಂಬ ಅವಸ್ಥೆಗಳಿಗೆ ಕಟ್ಟುಬಿದ್ದಿರುವನೆಂದಾಗಲಿ, ಅವುಗಳ ಸಂಬಂಧವು ಅವನಿಗೆ ಅಂಟಿಕೊಂಡಿರುವದೆಂದಾಗಲಿ, ಹೇಳುವದಕ್ಕೆ ಯಾವ ಆಧಾರವೂ ಇರುವದಿಲ್ಲ ; ಏಕೆಂದರೆ ಅವಸ್ಥೆಗಳು ಬಂದುಹೋಗುತ್ತಿದ್ದರೂ ಈ ಆತ್ಮನು ತಾನು ಇದ್ದಂತೆಯೇ ಇರುವನು. ಅವನು **ಪೂರ್ಣನು,** ಅವನು ಪ್ರಪಂಚದಲ್ಲಿ ಎಲ್ಲಿಯೋ ಒಂದು ಕಡೆ ಇದ್ದುಕೊಂಡು ಕಾಲದೇಶಗಳ ಕಟ್ಟಿಗೆ ಸಿಕ್ಕಿಕೊಂಡು ನರಳುತ್ತಿರುವನೆಂಬುದು ಕುಕಲ್ಪನೆಯು. ನಿಜವಾಗಿ ಈ ಆತ್ಮನು ಇಲ್ಲದ ಸ್ಥಳವೇ ಇಲ್ಲ ; ಸ್ಥಳವೆಂಬುದೂ ಈ ಆತ್ಮನಲ್ಲಿ ಕಲ್ಪಿತವಾಗಿ ತೋರುತ್ತಿರುವದರಿಂದ ಅವನಿಗೆ ಸ್ಥಳದ ಕಲ್ಪನೆಯು ಒಂದಿಷ್ಟೂ ಒಪ್ಪುವದಿಲ್ಲ. ಇದರಂತೆ ಕಾಲದ ಅಳತೆಯೂ ಅವನಿಗೆ ಇರುವದಿಲ್ಲ ; ಏಕೆಂದರೆ ಕಾಲವೂ ಈ ಆತ್ಮನಲ್ಲಿ ಕಲ್ಪಿತವಾಗಿರುತ್ತದೆ. ಯಾವದು ದೇಶಕಾಲದಿಂದ ಕಟ್ಟುಬಿದ್ದಿರುವದೋ ಅದು ಅವಯವಗಳ ನಾಶದಿಂದಲೋ ಅಗಲುವಿಕೆಯಿಂದಲೋ ಒಂದಾನೊಂದು ಕಾಲದಲ್ಲಿ ಸ್ವರೂಪನಾಶವನ್ನು ಹೊಂದುವದು ; ಆತ್ಮನು ಹಾಗೆ ದೇಶಕಾಲಗಳ ಅಳತೆಗೆ ಸಿಕ್ಕುವವನಲ್ಲವಾದ್ದರಿಂದ ಅವನು **ನಿತ್ಯ**ನಾಗಿರುತ್ತಾನೆ. ಈ ಎಲ್ಲಾ ಕಾರಣಗಳಿಂದ ಅವನು **ಏಕನು,** ಎಂದರೆ ತನಗೆ ಎರಡನೆಯದೆನಿಸಬಹುದಾದ ಜೀವನಾಗಲಿ ಜಡವಾಗಲಿ ಇಲ್ಲದವನು. ಜೀವ ಜಡಗಳು ತೋರುವ ಕಾಲದಲ್ಲಿಯೂ ಬರಿಯ ತೋರಿಕೆಯೇ ಆಗಿರುವವೆಂಬುದನ್ನು ಆಗಲೇ ತೋರಿಸಿದ್ದಾಗಿದೆ ; ತನಿನಿದ್ರೆಯಲ್ಲಂತೂ ಅವುಗಳ ಸೆಲೆಯೇ ಇರುವದಿಲ್ಲ. ಕನಸು ಹೋದರೆ ಕನಸನ್ನು ಕಂಡವನೊಬ್ಬನೇ ಉಳಿದುಕೊಳ್ಳುವಂತೆಯೂ ಭ್ರಾಂತಿಯ ತೋರಿಕೆಯು ಹೋದರೆ ಭ್ರಾಂತಿಗೆ ಆಧಾರವಾಗಿದ್ದ ಹಗ್ಗವೇ ಮುಂತಾದದ್ದು ಒಂದೇ ಉಳಿದುಕೊಳ್ಳುವಂತೆಯೂ ತನಿನಿದ್ರೆಯಲ್ಲಿ ಎಚ್ಚರಕನಸುಗಳ ತೋರಿಕೆ ಯಾವದೂ ಇಲ್ಲದೆ ಈ ಆತ್ಮನೊಬ್ಬನೇ ಉಳಿದುಕೊಳ್ಳುತ್ತಾನೆ; ಆದ್ದರಿಂದ ಆತ್ಮನೇ ಅವುಗಳಿಗೆ ತಿರುಳಾಗಿರುತ್ತಾನೆ. ಆದ್ದ

ರಿಂದ ಅವನು ಸರ್ವಪ್ರಕಾರದಿಂದಲೂ ಏಕನು ಅಥವಾ ಅದ್ವಿತೀಯನಾಗಿರು ತ್ತಾನೆ.

## ನಾನು ಶಿವನು

ಆದ್ದರಿಂದ ನಾನು ಶಿವನು ಎಂಬುದು ಪರಮಾರ್ಥವೆಂದು ನಿಶ್ಚಯ ವಾಯಿತು. ಹೇಗೆ ಪರಮೇಶ್ವರನು ಜಗಜ್ಜನ್ಮಾದಿಕಾರಣನೆಂದು ಶಾಸ್ತ್ರದಲ್ಲಿ ಹೇಳಿದೆಯೋ ಹಾಗೆಯೇ ನಮ್ಮ ಆತ್ಮಸ್ವರೂಪವು ಸಕಲಜಗತ್ತೂ ಹುಟ್ಟಿ ತೋರಿಕೊಂಡು ಅಡಗುತ್ತಿರುವದಕ್ಕೆ ಕಾರಣವಾಗಿರುತ್ತದೆ. ಹೇಗೆ ಪ ಮೇಶ್ವರನೇ ಎಲ್ಲವೂ ಆಗಿರುವನೆಂದು ಶಾಸ್ತ್ರದಲ್ಲಿ ಹೇಳಿದೆಯೋ ಹಾಗೆಯೆ ನಮ್ಮ ಆತ್ಮಸ್ವರೂಪವು ಎಲ್ಲವೂ ಆಗಿರುವದು. ಹೇಗೆ ಪರಮೇಶ್ವರನು ನಿತ್ಯ ಶುದ್ಧಬುದ್ಧಮುಕ್ತಸ್ವಭಾವದವನಾಗಿರುವನೆಂದು ಶಾಸ್ತ್ರದಲ್ಲಿ ವರ್ಣಿತವಾ ದೆಯೋ ಹಾಗೆಯೇ ನಮ್ಮ ಆತ್ಮಸ್ವರೂಪವೂ ಇರುವದೆಂದು ಅನುಭವ ಬೆಂಬಲವುಳ್ಳ ಯುಕ್ತಿಯಿಂದ ಸಿದ್ಧವಾಗಿದೆ. ಆದ್ದರಿಂದ ನಮ್ಮಗಳೆಲ್ಲ ಆತ್ಮನು ಶಾಸ್ತ್ರದಲ್ಲಿ ಹೇಳಿರುವ ಶಿವನೇ ಎಂದು ಸಿದ್ಧವಾಯಿತು.

# ೪. ದ್ವೈತಸ್ಥಿರತ್ವಭ್ರಾಂತಿಯ ಪರಿಹಾರ

ಹಿಂದೆ ಹೇಳಿದ ಹಗ್ಗದಹಾವು, ಕನಸು- ಎಂಬ ದೃಷ್ಟಾಂತಗಳು ಜೀವ ಜಡಭ್ರಾಂತಿಗೆ ಪೂರ್ಣವಾಗಿಯೂ ಸರಿಯಾದ ಉದಾಹರಣೆಯಲ್ಲ. ಏಕೆಂದರೆ ಆತ್ಮನ ಜ್ಞಾನವಾದಮೇಲೂ ಜಗತ್ತು ಮತ್ತೆ ತೋರುತ್ತಲೇ ಇರುವದು. ಆದರೆ ಹಗ್ಗದಹಾವು ಹಗ್ಗದ ತತ್ತ್ವವು ತಿಳಿದಮೇಲೆ ಕಾಣದೆಹೋಗಿಬಿಡುತ್ತದೆ ; ಕನಸಿನ ಪ್ರಪಂಚವು ಎಚ್ಚರವಾಗುತ್ತಲೂ ಹೋಗಿಬಿಡುತ್ತದೆ. ಆತ್ಮಜ್ಞಾನವಾದಮೇಲೆ ಪ್ರಪಂಚವು ನಿಜವಾಗಿಯೂ ಹೋಗಿಯೇ ಬಿಡುವದೆಂದು ವೇದಾಂತಿಗಳು ಹೇಳಿದರೆ ಅದು ಸರಿಯಾಗಲಾರದು. ಏಕೆಂದರೆ ಆಗ ಯಾವನಿಗೆ ಆತ್ಮಜ್ಞಾನವಾಗಿರುವದೋ ಅವನ ದೃಷ್ಟಿಯಲ್ಲಿ ಮತ್ತೆ ಯಾರೂ ಇಲ್ಲವೇ ಇಲ್ಲವಾದ್ದರಿಂದ ಅವನು ಮತ್ತೊಬ್ಬನಿಗೆ ತತ್ತ್ವವನ್ನು ಬೋಧಿಸುವದಕ್ಕೆ ಆಗಲಾರದು. ಆಗ ಗುರುಶಿಷ್ಯಭಾವವೇ ಇಲ್ಲದಂತೆ ಆಗಿಬಿಡುತ್ತದೆ- ಎಂದು ಕೆಲವರಿಗೆ ತೋರಬಹುದು. ಈ ಶಂಕೆಯನ್ನು ಬಗೆಹರಿಸುವದಕ್ಕಾಗಿ ಮುಂದಿನ ಶ್ಲೋಕವು ಹುಟ್ಟಿರುತ್ತದೆ :

**ಮತ್ತೋ ನಾನ್ಯತ್ಕಿಂಚಿದತ್ರಾಸ್ತಿ ವಿಶ್ವಂ**
**ಸತ್ಯಂ ಬಾಹ್ಯಂ ವಸ್ತು ಮಾಯೋಪಕ್ಲೃಪ್ತಮ್ ।**
**ಆದರ್ಶಾನ್ತರ್ಭಾಸಮಾನೇನ ತುಲ್ಯಂ**
**ಮಯ್ಯದ್ವೈತೇ ಭಾತಿ ತಸ್ಮಾಚ್ಛಿವೋಽಹಮ್ ॥ ೪ ॥**

ಪ್ರತಿಪದಾರ್ಥ : ಅತ್ರ-ಇಲ್ಲಿ, ಮತ್ತಃ-ನನಗಿಂತ, ಅನ್ಯತ್-ಬೇರೆಯಾದ, ಸತ್ಯಂ-ನಿಜವಾಗಿರುವ, ವಿಶ್ವಂ-ಪ್ರಪಂಚವು, ಕಿಂಚಿತ್-ಯಾವದೂ, ನಾಸ್ತಿ-ಇರುವದಿಲ್ಲ, ಬಾಹ್ಯಂ-ಹೊರಗಿರುವ, ವಸ್ತು-ಪದಾರ್ಥವು, ಮಾಯೋಪಕ್ಲೃಪ್ತಂ-ಮಾಯೆಯಿಂದ ಕಲ್ಪಿತವಾಗಿ, ಆದರ್ಶಾನ್ತಃ-ಕನ್ನಡಿಯೊಳಗೆ, ಭಾಸಮಾನೇನ-ತೋರುವ ಪ್ರತಿಬಿಂಬಕ್ಕೆ, ತುಲ್ಯಂ-ಸಮವಾದದ್ದಾಗಿ, ಅದ್ವೈತೇ-ಎರಡನೆಯದಿಲ್ಲದವನಾದ, ಮಯಿ-ನನ್ನಲ್ಲಿ, ಭಾತಿ-ತೋರುತ್ತಿರುವದು. ತಸ್ಮಾತ್-ಆದ್ದರಿಂದ, ಅಹಂ-ನಾನು, ಶಿವಃ-ಶಿವನು.

೪. ನನಗಿಂತ ಬೇರೆಯಾಗಿರುವ ಸತ್ಯವಾದ ಪ್ರಪಂಚವೇ ಇಲ್ಲಿರುವದಿಲ್ಲ. ಹೊರಗಿರುವ ವಸ್ತುವೆಲ್ಲವೂ ಮಾಯೆಯಿಂದ ಕಲ್ಪಿತ

ವಾಗಿರುತ್ತದೆ ; ಇದು ಅ ದ್ವಿ ತೀ ಯ ನಾ ದ ನನ್ನಲ್ಲಿ ಕನ್ನಡಿಯಲ್ಲಿ ತೋರುವ ಪ್ರತಿಬಿಂಬಕ್ಕೆ ಸಮಾನವಾಗಿರುವದು. ಆದ್ದರಿಂದ ನಾನು ಶಿವನು.

## ವಿವರಣೆ

### ನನಗಿಂತ ಬೇರೆಯಾಗಿರುವ ಪ್ರಪಂಚವಿಲ್ಲ

ಆತ್ಮನು ಅದ್ವಿತೀಯನೆಂಬುದಕ್ಕೆ ಮುಖ್ಯವಾಗಿ ಒಂದು **ಆಕ್ಷೇಪ**ವಿದೆ: ಪ್ರಪಂಚವು ಎದುರಿಗೆ ಸ್ಪಷ್ಟವಾಗಿ ಕಾಣುತ್ತಿರುವಾಗ ಅದು ಇಲ್ಲವೆನ್ನಬಹುದೆ? ಅದು ಇರುವದಾದರೆ ಆತನು ಅದ್ವಿತೀಯನು, ಎಂದರೆ ತನಗೆ ಎರಡನೆಯದಿಲ್ಲ ದವನು, ಎಂಬುದು ಹೇಗೆ ?

**ಸಮಾಧಾನ :** ಆತ್ಮನ ಜೊತೆಗೆ ಒಂದು ಪ್ರಪಂಚವಿದೆಯೆಂದು ಭಾವಿಸುವದು ತಪ್ಪು. ಏಕೆಂದರೆ ಆತ್ಮನಿಗಿಂತ ಬೇರೆಯಾಗಿ ಸ್ವತಂತ್ರವಾಗಿ ಪ್ರಪಂಚವಿರುವದಿಲ್ಲ. ಆತ್ಮನೊಬ್ಬನು, ಪ್ರಪಂಚವೊಂದು– ಹೀಗೆ ಎರಡು ವಸ್ತುಗಳೆಂದು ಎಣಿಸುವದಕ್ಕೆ ಇಲ್ಲ. ಏಕೆಂದರೆ ಆತ್ಮ, ಪ್ರಪಂಚ– ಇವುಗಳು ಯಾವದಾದರೂ ಒಂದೇ ಜಾತಿಗೆ ಸೇರಿದ ಎರಡು ವ್ಯಕ್ತಿಗಳಲ್ಲ. ಒಂದೇ ಜಾತಿಗೆ ಸೇರಿದಹೊರತು 'ಎರಡು ಎಂದು ಸಂಖ್ಯೆಯನ್ನುಪಯೋಗಿಸುವದ ಕ್ಕಿಲ್ಲ ಒಂದು ಕುರ್ಚಿಯ ಜೊತೆಗೆ ಇನ್ನೊಂದು ಕುರ್ಚಿಯನ್ನು ಸೇರಿಸಿದರೆ ಎರಡು ಕುರ್ಚಿಗಳಾಗುವವು, ಒಂದು ಕುರ್ಚಿಯ ಜೊತೆಗೆ ಒಂದು ಬೆಂಚು ಸೇರಿದರೆ ಎರಡು ಮರದ ಸಾಮಾನುಗಳಾಗುವವು. ಅದರೆ ಆತ್ಮನ ಜೊತೆಗೆ ಪ್ರಪಂಚವು ಸೇರಿದರೆ ಎರಡು ಏನಾಗುವದು ?– ಎಂಬ ಪ್ರಶ್ನೆಗೆ ಉತ್ತರ ವಿರುವದಿಲ್ಲ.

**ಆಕ್ಷೇಪ :** ಏಕಿಲ್ಲ ? ಆತ್ಮನೂ ಪ್ರಪಂಚವೂ ಸೇರಿ ಎರಡು ಪದಾರ್ಥ ಗಳೆಂದು ಹೇಳಬಹುದಲ್ಲ !

**ಸಮಾಧಾನ :** ಕೂಡದು. ಏಕೆಂದರೆ ಆ ತ್ಮ ನು ಪದಾರ್ಥವಲ್ಲ. ಪದಾರ್ಥವೆಂದರೆ ಪದಕ್ಕೆ ಅರ್ಥವಾದದ್ದು ; ಯಾವದನ್ನು ಮನಸ್ಸಿನಿಂದ ಗ್ರಹಿಸಬಹುದೋ ಅದನ್ನು ಪದದಿಂದ ಗುರುತಿಸಬಹುದು, ಅದು ಆ ಪದಕ್ಕೆ

ಅರ್ಥವೆನಿಸುತ್ತದೆ. ಆದರೆ ಆತ್ಮನನ್ನು ಮನಸ್ಸಿನಿಂದ ಗ್ರಹಿಸುವದಕ್ಕೆ ಬರುವದಿಲ್ಲ. ಆತ್ಮನೇ ಮನಸ್ಸನ್ನು ಬೆಳಗುತ್ತಾನೆ. ಆದ್ದರಿಂದ ಆತ್ಮನು ಪದಾರ್ಥವಲ್ಲ. ಆದ್ದರಿಂದಲೇ ಆತ್ಮನು ಶಿವನು- ಎಂದು ಮುಂತಾಗಿ ವೇದಾಂತಿಗಳು ಉಪಯೋಗಿಸುವ ಪದಗಳಿಂದ ಮಿಕ್ಕವರಿಗೆ ಯಾವ ಅರ್ಥವೂ ತೋರುವದಿಲ್ಲ. ಪದದ ಅರ್ಥವಲ್ಲದ ಮಾತ್ರಕ್ಕೆ ಆತ್ಮನೇ ಇಲ್ಲವೆಂದು ಹೇಳುವದಕ್ಕಿಲ್ಲ. ಏಕೆಂದರೆ ಅನುಭವದಲ್ಲಿ ಆತ್ಮನು ತೋರಿಕೊಳ್ಳುತ್ತಾನೆ, ಮತ್ತು ಆತ್ಮನ ಅನುಭವದ ಆಧಾರದಿಂದಲೇ ಮನಸ್ಸನ್ನೂ ಮನಸ್ಸಿಗೆ ಗೋಚರವಾಗುವ ಮಿಕ್ಕ ಪ್ರಪಂಚವನ್ನೂ—ನಾವು ಗೊತ್ತುಪಡಿಸುತ್ತೇವೆ.

**ಆಕ್ಷೇಪ :** ಆತ್ಮನು ಪದಾರ್ಥವಲ್ಲದೆ ಇದ್ದರೆ ಹೋಗಲಿ; ಆತ್ಮನು, ಪ್ರಪಂಚ- ಎಂಬ ಅನುಭವದಿಂದಲೇ ಎರಡು ಇವೆಯೆಂದು ನಿರ್ಣಯವಾಗುವದಿಲ್ಲವೆ ?

**ಸಮಾಧಾನ :** ಆಗುವದಿಲ್ಲ. ಏಕೆಂದರೆ ಒಂದು, ಎರಡು- ಎಂದು ಲೆಕ್ಕಹಾಕಬೇಕಾದರೆ ಒಂದೇ ದೇಶದಲ್ಲಿರುವ ಅಥವಾ ಒಂದೇ ಕಾಲದಲ್ಲಿರುವ ಪದಾರ್ಥಗಳಾಗಬೇಕು. ಕಾಲದಲ್ಲಿಲ್ಲದೆ, ದೇಶದಲ್ಲಿಲ್ಲದೆ, ಪದಾರ್ಥಗಳೂ ಅಲ್ಲದೆ- ಇರುವಾಗ ಆತ್ಮಪ್ರಪಂಚಗಳಿಗೆ ಎರಡು ಎಂಬ ಸಂಖ್ಯೆಯು ಹೇಗೆ ಹೊಂದೀತು ?

**ಆಕ್ಷೇಪ :** ಎರಡಿಲ್ಲದಿದ್ದರೆ ಎರಡು ಬೇರೆಬೇರೆ ಮಾತುಗಳ ಪ್ರಯೋಗವಾಗಿರುವದು ಹೇಗೆ ? ಆತ್ಮನೂ ಪ್ರಪಂಚವೂ ಎರಡೂ ಒಂದೇ ಎಂದು ಹೇಳುವದಕ್ಕಾದೀತೆ ?

**ಸಮಾಧಾನ :** ಒಂದೇ ತತ್ತ್ವವನ್ನು ಎರಡು ಬಗೆಯಿಂದ ನೋಡಬಹುದಾಗಿರುವದರಿಂದ ಎರಡು ಮಾತುಗಳನ್ನು ನಾವು ಬಳಸುತ್ತಿದೇವೆ; ಜ್ಞಾನಿಗಳ ದೃಷ್ಟಿಯಿಂದ ಆತ್ಮನಾಗಿರುವದು, ಅಜ್ಞಾನಿಗಳ ದೃಷ್ಟಿಯಿಂದ ಪ್ರಪಂಚವಾಗಿರುವದು. ಅಜ್ಞಾನಿಗಳು ಪ್ರಪಂಚವೆಂದು ಕರೆಯುತ್ತಿರುವದು ನಿಜವಾಗಿ ಆತ್ಮನೇ.

**ಆಕ್ಷೇಪ :** ಒಬ್ಬ ಆತ್ಮನೇ ಎರಡು ಬಗೆಯಿಂದ ತೋರುವದಾದರೆ ಎರಡೂ ಸತ್ಯವೆಂದೇ ಏತಕ್ಕೆ ಹೇಳಬಾರದು ?

**ಸಮಾಧಾನ:** ಇದಕ್ಕೆ ಆಗಲೆ ಉತ್ತರವನ್ನು ಹೇಳಿದ್ದಾಗಿದೆ. ಪ್ರಪಂಚವು ಪರಮಾರ್ಥವಾಗಿರುವದಿಲ್ಲ, ಅದು ಅಸತ್ಯವಾಗಿ ಅಜ್ಞರು ಆತ್ಮನಲ್ಲಿ ಹುಟ್ಟುಗಟ್ಟಿಕೊಂಡದ್ದಾಗಿರುತ್ತದೆ.

**ಆಕ್ಷೇಪ:** ಪ್ರಪಂಚವು ಅಸತ್ಯವಾದರೆ ಆತ್ಮನನ್ನು ತಿಳಿದವರಿಗೆಕೂಡ ಅದು ತೋರುವದೇಕೆ? ಎಚ್ಚರವಾಗುತ್ತಲೂ ಕನಸಿನ ಪ್ರಪಂಚವು ಮಾಯವಾಗುವಂತೆ ಜ್ಞಾನವುಂಟಾಗುತ್ತಲೂ ಅದೇಕೆ ಮಾಯವಾಗುವದಿಲ್ಲ?

**ಸಮಾಧಾನ:** ಸರಿಯಾಗಿ ನೋಡಿದರೆ ಮಾಯವಾಗಿಯೇ ಆಗುತ್ತದೆ. ಅಥವಾ ಜ್ಞಾನವಾದಮೇಲೆ ಮಾಯವಾಗುವದೆಂದು ಹೇಳುವದಕ್ಕಿಂತ ಅದು ಯಾವಾಗಲೂ ಇರಲಿಲ್ಲವೆಂದು ಹೇಳುವದೇ ಸರಿಯಾದದ್ದು. ಆದ್ದರಿಂದ ಹೋಗಬೇಕಾದ ಪ್ರಪಂಚವೇ ಇಲ್ಲ.

**ಆಕ್ಷೇಪ:** ಹಾಗಿದ್ದರೆ ಪ್ರಪಂಚವು ತೋರುವದೇತಕ್ಕೆ?

**ಸಮಾಧಾನ:** ಅದು ತೋರುವದೇತಕ್ಕೆಂಬ ಕಾರಣವನ್ನು ಕೊಡಬೇಕಾಗಿಲ್ಲ. ಅದು ಸತ್ಯವಲ್ಲ, ಬರಿಯ ತೋರಿಕೆ– ಎಂಬುದನ್ನು ತಿಳಿದುಕೊಂಡರೆ ಸಾಕು.

**ಆಕ್ಷೇಪ:** ತೋರಿಕೆಯೇ ಆಗಲಿ, ತೋರಿಕೆಯಾದರೂ ನಿಜವನ್ನು ಅರಿತಮೇಲೆ ಕನಸಿನಂತೆ ಏತಕ್ಕೆ ಹೋಗಬಾರದು?

**ಸಮಾಧಾನ:** ತೋರಿಕೆಗಳೆಲ್ಲ ನಿಜವನ್ನು ಅರಿತರೆ ತೋರದಂತಾಗುವವೆಂಬ ನಿಯಮವಿಲ್ಲ. ಇದು ನಿಜವಾಗಿ ಇಂಥ ವಸ್ತುವಲ್ಲ, ವಸ್ತುವಿನಂತೆ ತೋರಿತು–ಎಂಬ ಅರಿವಾದಮೇಲೆ ನಾವು ಭ್ರಾಂತಿಯಿಂದ ಅದಕ್ಕೆ ಕೊಟ್ಟಿದ್ದ ಸತ್ಯತ್ವವು ಮಾತ್ರ ಹಾರಿಹೋಗುವದು. ತೋರಿಕೆಗಳಿಗೆಲ್ಲ ಈ ನಿಯಮವಿದೆ.

**ಆಕ್ಷೇಪ:** ಆತ್ಮ, ಪ್ರಪಂಚ– ಎರಡೂ ತೋರುತ್ತಿರಲು ಪ್ರಪಂಚವು ಮಾತ್ರ ತೋರಿಕೆ, ಆತ್ಮನು ತೋರಿಕೆಯಲ್ಲ–ಎಂಬ ನಿಯಮಕ್ಕೆ ಕಾರಣವೇನು?

**ಸಮಾಧಾನ:** ಪ್ರಪಂಚವು ಆತ್ಮನನ್ನು ಬಿಟ್ಟು ಬೇರೆಯಾಗಿ ತೋರುವದಿಲ್ಲ; ಆತ್ಮನು ಮಾತ್ರ ಪ್ರಪಂಚಕ್ಕೆ ಕಟ್ಟುಬೀಳದೆ ಸ್ವತಂತ್ರನಾಗಿರುತ್ತಾನೆ. ಉದಾಹರಣೆಗೆ ಆತ್ಮನು ಗಾಢನಿದ್ರೆಯಲ್ಲಿ ಇದ್ದೇ ಇರುವನು, ಆಗ ಪ್ರಪಂಚವು

ಇರುವದೇ ಇಲ್ಲ. ಆದ್ದರಿಂದ ಪ್ರಪಂಚವು ಆತ್ಮನನ್ನು ಬಿಟ್ಟು ತಾನೊಂದೇ ಸತ್ಯವಾಗಿರುವದಿಲ್ಲ, ಪ್ರಪಂಚದ ಇರುವಿಕೆಯು ಆತ್ಮನ ಇರವಿನಿಂದಲೇ- ಎಂದು ನಿರ್ಣಯವಾಗುತ್ತದೆ. ಪ್ರಪಂಚದ ಇರವು ಬಾಧಿತವಾಗುವಂತೆ ಆತ್ಮನ ಇರವು ಎಲ್ಲಿಯೂ ಬಾಧಿತವಾಗುವದಿಲ್ಲ, ಆಗುವದು ಸಾಧ್ಯವೂ ಇಲ್ಲ. ಆದ್ದರಿಂದ ಆತ್ಮನು ಸತ್ಯನೇ, ಪ್ರಪಂಚವು ತೋರಿಕೆಯೇ.

**ಆಕ್ಷೇಪ :** ಪ್ರಪಂಚವು ನಿದ್ರೆಯಿಂದ ನಾವು ಎಚ್ಚತ್ತ ಕೂಡಲೆ ಬುದಕ್ಕನೆ ತೋರಿಕೊಳ್ಳುವದು. ನಿದ್ರೆಯಲ್ಲಿಲ್ಲದ ಪ್ರಪಂಚವು ಮತ್ತೆ ತೋರಿ ಕೊಳ್ಳಲಾರದಾದ್ದರಿಂದ ಅದು ನಿದ್ರೆಯಲ್ಲಿಯೂ ಎಲ್ಲಿಯೋ ಒಂದು ಕಡೆ ಇದ್ದೇ ಇರಬೇಕಲ್ಲವೆ ?

**ಸಮಾಧಾನ :** ಇದು ಸರಿಯಲ್ಲ. ನಿದ್ರೆಯಲ್ಲಿ ಪ್ರಪಂಚವು ಎಲ್ಲಿದೆ? ನಮ್ಮ ನಿದ್ರೆಯೊಳಗಂತೂ ಅದು ಇರುವದಿಲ್ಲ, ಇದ್ದರೆ ಅದು ಆಗಲೂ ತೋರ ಬೇಕಾಗಿತ್ತು; ನಿದ್ರೆಯ ಹೊರಗೆ ಇರಬಾರದೆ ?- ಎಂದರೆ ನಮ್ಮ ನಿದ್ರೆಯ ಹೊರಗೆ ಎಂಬ ಮಾತಿಗೆ ಅರ್ಥವೇ ಇಲ್ಲ.

**ಆಕ್ಷೇಪ :** ಏಕೆ ಅರ್ಥವಿಲ್ಲ ? ಇನ್ನೊಬ್ಬರು ನಿದ್ರಿಸುತ್ತಿರುವಾಗ ಎಲ್ಲಾ ಪ್ರಪಂಚವೂ ಅವರ ಹೊರಗಿರುವದನ್ನು ನಾವು ಕಾಣುವದಿಲ್ಲವೆ ? ಇದರಂತೆಯೇ ನಾವು ನಿದ್ರೆಮಾಡುತ್ತಿರುವಾಗಲೂ ಯಾರಾದರೊಬ್ಬರು ಪ್ರಪಂಚವನ್ನು ನೋಡುತ್ತಾ ಇರಕೂಡದೇಕೆ ? ಹೀಗೆ ನೋಡಿದರೆ ನಮಗೆ ತೋರದಿದ್ದರೂ ಪ್ರಪಂಚವು ನಮ್ಮ ನಿದ್ರೆಯಲ್ಲಿಯೂ ತನ್ನ ಪಾಡಿಗೆ ತಾನು ಇದ್ದುಕೊಂಡಿರಬಹುದೆಂದೇ ತೋರುವದಲ್ಲ !

**ಸಮಾಧಾನ :** ಮತ್ತೊಬ್ಬರು ನಿದ್ರಿಸುತ್ತಿದಾರೆಂದು ನಿಶ್ಚಯಿಸುವ ದಕ್ಕೆ ನಮಗೆ ಆಧಾರವಾದ ಅನುಭವವಿಲ್ಲ. ಮತ್ತೊಬ್ಬರ ಸುಖದುಃಖಗಳು ಹೇಗೆ ನೇರಾಗಿ ನಮ್ಮ ಅನುಭವಕ್ಕೆ ಬಾರವೋ ಹಾಗೆಯೇ ಮತ್ತೊಬ್ಬರ ನಿದ್ರೆಯೆಂಬುದೂ ನಮ್ಮ ಅನುಭವಕ್ಕೆ ಮೀರಿದ್ದಾಗಿರುತ್ತದೆ.ನಮ್ಮ ಕನಸಿನಲ್ಲಿ ಎಷ್ಟೋ ಜನರು ನಿದ್ರಿಸುತ್ತಿರುವಂತೆ ನಮಗೆ ಕಾಣಬಹುದು ; ಆದರೆ ಅವರು ನಿಜವಾಗಿಯೂ ನಿದ್ರಿಸುತ್ತಿರುವರೆಂದೇನೂ ನಾವು ಈಗ ನಿಶ್ಚಯಿಸುವದಿಲ್ಲ. ಎಚ್ಚರದಲ್ಲಿಯೂ ಮತ್ತೊಬ್ಬರ ನಿದ್ರೆಯು ಹೀಗೆಯೇ, ಅದು ಕೇವಲ ಊಹೆ ಯಿಂದ ನಿಶ್ಚಯಿಸಬೇಕಾದದ್ದು. ಆದ್ದರಿಂದ ನಿದ್ರೆಯು ನೇರಾದ ಅನುಭವವು

ನಮ್ಮ ನಿದ್ರೆಯಲ್ಲಿಯೇ ಆಗಬೇಕು. ನಮಗೆ ಎಚ್ಚರದಲ್ಲಿ ತೋರುವ ಇತರರ ನಿದ್ರೆಯೂ ಆ ಇತರರೂ ನಮ್ಮ ಎಚ್ಚರದ ಪ್ರಪಂಚದಲ್ಲಿಯೇ ಅಡಕವಾಗಿರುವದರಿಂದ, ಆ ಇತರರು ನಮ್ಮ ಎಚ್ಚರವನ್ನು ಮೀರಿ ಇರಬಲ್ಲರೆಂದು ತಿಳಿಯುವದು, ಅಯುಕ್ತವಾಗುವದು. ಆದ್ದರಿಂದ ನಾವು ನಿದ್ರೆಯಲ್ಲಿರುತ್ತೇವೆ ಎಂದರೆ ನಮ್ಮ ಎಚ್ಚರದ ಪ್ರಪಂಚವು ಆಗ ಇಲ್ಲವೆಂದೇ ಅರ್ಥ; ಏಕೆಂದರೆ ನಮ್ಮ ಎಚ್ಚರದ ಪ್ರಪಂಚವೂ ನಮ್ಮ ನಿದ್ರೆಯಲ್ಲಿದೆಯೆನ್ನುವದು ಒಂದೇ ಕಾಲದಲ್ಲಿ ನಾವು ನಿದ್ರೆಮಾಡುತ್ತಲೂ ಇರುವೆವು, ಎಚ್ಚತ್ತೂ ಇರುವೆವು-ಎಂದು ಹೇಳಿದಂತೆ ಆಗುವದು. ಇದು ಹಾಸ್ಯಾಸ್ಪದವಾದ ಮಾತು. ಆದ್ದರಿಂದ ನಮ್ಮ ನಿದ್ರೆಯಲ್ಲಿ ಎಚ್ಚರದ ಪ್ರಪಂಚವು ಇರುವದಿಲ್ಲವೆಂಬುದೇ ಸರಿ.

## ಹೊರಗಿನ ವಸ್ತು ಮಾಯಿಕ

**ಆಕ್ಷೇಪ :** ಹಾಗಾದರೆ ಹೊರಗೆ ತೋರುತ್ತಿರುವ ಪ್ರಪಂಚವು ಹೇಗಾಯಿತು ? ನಿದ್ರೆಯಿಂದ ಎಚ್ಚತ್ತಕೂಡಲೆ ಇದು ನಿಯಮವಾಗಿ ತೋರಿಕೊಳ್ಳುವದರಿಂದಲೂ ಎಚ್ಚರದಲ್ಲಿಯೂ ಕನಸಿನಲ್ಲಿಯೂ ಇದ್ದುಕೊಂಡೇ ಇರುವದರಿಂದಲೂ ಅದರಲ್ಲಿ ಯಾವದೋ ಒಂದು ತಿರುಳು ಇರಬೇಕಷ್ಟೆ ? ಅದು ಯಾವದು ?

**ಸಮಾಧಾನ:** ಪ್ರಪಂಚವು ಹೇಗೆ ಆಯಿತೆಂಬ ಪ್ರಶ್ನೆಯು ಸರಿಯಾದದ್ದಲ್ಲ; ಏಕೆಂದರೆ ಪ್ರಪಂಚವು ಸತ್ಯವಲ್ಲವೆಂತಲೂ ಅದು ಬರಿಯ ತೋರಿಕೆಯೆಂತಲೂ ಹೇಳಿದಮೇಲೂ ಅದಕ್ಕೆ ಕಾರಣವನ್ನು ಕೇಳುವದು ಅಯುಕ್ತವು. ಆತ್ಮನನ್ನು ಬಿಟ್ಟು ಅದು ತೋರಲಾರದೆ ಇರುವದರಿಂದಲೂ ಆತ್ಮನು ಅದನ್ನು ಬಿಟ್ಟು ಇರಬಲ್ಲನಾದ್ದರಿಂದಲೂ ಆ ತೋರಿಕೆಗೆ ನಿಜವಾದ ಆಧಾರವು ಆತ್ಮನೇ, ಆತ್ಮನೇ ಅದರ ತಿರುಳು ಎಂತಲೂ ಸಿದ್ಧವಾಗುತ್ತದೆ. ಆತ್ಮನಲ್ಲಿಲ್ಲದ ವಿಲಕ್ಷಣವಾದ ಪ್ರಪಂಚರೂಪವು ನಡುವೆ ಹೇಗೆ ಆಯಿತೆಂದರೆ ಅದು **ಮಾಯೆ**ಯಿಂದಾದದ್ದು– ಎಂದು ಹೇಳುತ್ತೇವೆ.

**ಆಕ್ಷೇಪ :** ಮಾಯೆಯೆಂದರೇನು ? ಹೇಗೆ ಆಯಿತೆಂದು ಕೇಳಿದರೆ ಮಾಯೆಯೆಂಬ ಹೊಸ ಹೆಸರನ್ನು ಹೇಳಿದ ಮಾತ್ರಕ್ಕೆ ಏನು ಹೇಳಿದಂತೆ ಆಯಿತು ?

**ಪರಿಹಾರ :** ಮಾಯೆಯೆಂದರೆ ತನ್ನ ತೋರಿಕೆಗೆ ಯಾವ ಯುಕ್ತಿಯೂ ಇಲ್ಲದೆ, ತಪ್ಪುತಿಳಿವಳಿಕೆಗೆ ಮಾತ್ರ ವಿಷಯವಾಗಿರುವ ತೋರಿಕೆ ; ನಾವು ಹೇಳಿರುವದು ಬರಿಯ ಹೆಸರನ್ನಲ್ಲ. ಪ್ರಪಂಚವು ಮಾಯೆಯಿಂದಾಗಿದೆ, ಎಂದರೆ ಆತ್ಮನಲ್ಲಿ ತಪ್ಪುತಿಳಿವಳಿಕೆಯಿಂದ ಕಾಣುವ ತೋರಿಕೆಯಾಗಿದೆ, ಅದು ಹೇಗಾಯಿತೆಂಬುದನ್ನು ಯುಕ್ತಿಗೆ ಹೊಂದಿಸಿ ತಿಳಿಸುವದಕ್ಕೆ ಯಾರಿಂದಲೂ ಆಗಲಾರದು- ಎಂಬುದು ನಮ್ಮ ಅಭಿಪ್ರಾಯ. ಅದ್ವಿತೀಯನಾದ ಆತ್ಮನು ನಾನಾತ್ವದಿಂದ ಕೂಡಿದ ಪ್ರಪಂಚವಾಗಿರುವದು, ಶುದ್ಧವಾದ ಆತ್ಮನಲ್ಲಿ ಅಶುದ್ಧವಾದ ಪ್ರಪಂಚವು ತೋರುತ್ತಿರುವದು, ಕೂಟಸ್ಥನಾದ ಆತ್ಮನಿಂದ ಪರಿಣಾಮಿಯಾದ ಪ್ರಪಂಚವು ಆಗಿರುವದು, ಪೂರ್ಣನಾದ ಆತ್ಮನಿಂದ ಪರಿಚ್ಛಿನ್ನವಸ್ತುಗಳಿಂದೊಡಗೂಡಿ ಒಂದವಸ್ಥೆಗೆ ಕಟ್ಟುಬಿದ್ದಿರುವ ಪ್ರಪಂಚವಾಗಿರುವದು- ಇದೆಲ್ಲ ಮಾಯೆಯು, ಎಂದರೆ ಯುಕ್ತಿಗೆ ವಿರುದ್ಧವಾಗಿರುತ್ತದೆ. ಇದನ್ನು ಯಾರೂ ಯುಕ್ತಿಗೆ ಹೊಂದಿಸಲಾರರು.

**ಆಕ್ಷೇಪ :** ಆತ್ಮನಿಂದ ಪ್ರಪಂಚವಾಗಿರುವದೆಂಬುದು ಯುಕ್ತಿಗೆ ವಿರುದ್ಧವಾಗಿರುವದರಿಂದ ಪ್ರಪಂಚವು ಆತ್ಮನಿಂದಾದದ್ದಲ್ಲವೆಂತಲೂ ಅದು ಹಾಗೆಯೇ ಇರುವದೆಂತಲೂ ಏತಕ್ಕೆ ಹೇಳಬಾರದು ?

**ಸಮಾಧಾನ :** ಅವಸ್ಥಾತ್ರಯಪರೀಕ್ಷೆಯನ್ನು ಮಾಡಿ ಆತ್ಮನು ನಿಷ್ಪ್ರಪಂಚನೆಂದೂ ಅವನಲ್ಲಿಯೇ ಈ ಎಚ್ಚರದ ಪ್ರಪಂಚವು ತೋರಿಕೊಳ್ಳುತ್ತಿರುವದೆಂದೂ ಅನುಭವದ ಬಲದಿಂದ ತೋರಿಸಿದ್ದಾಗಿರುತ್ತದೆ. ಅನುಭವಕ್ಕೆ ವಿರುದ್ಧವಾದ ಯಾವ ಯುಕ್ತಿಯೂ ಪ್ರಬಲಯುಕ್ತಿಯೆನಿಸಲಾರದು; ಆದ್ದರಿಂದ ಈ ಯುಕ್ತಿಯು ಎಚ್ಚರದಲ್ಲಿ ಮಾತ್ರ ತೋರಿಕೊಳ್ಳುವ ಅಂತಃಕರಣದ ವ್ಯಾಪಾರವಾದ್ದರಿಂದ ಅವಸ್ಥೆಗಳನ್ನೆಲ್ಲ ಮೀರಿದ ಆತ್ಮನಿಗೆ ಅನ್ವಯಿಸಲಾರದೆಂದು ಸಮಾಧಾನಮಾಡಿಕೊಳ್ಳಬೇಕೇ ಹೊರತು ಈ ಪಕ್ಷವು ಯುಕ್ತಿಗೆ ವಿರುದ್ಧವಾಗಿದೆಯೆಂದು ಅನುಭವವನ್ನಾಗಲಿ ಅನುಭವಾನುಸಾರಿಯಾದ ಯುಕ್ತಿಯನ್ನಾಗಲಿ ತಳ್ಳಿಹಾಕುವದಕ್ಕೆ ಆಗುವದಿಲ್ಲ.

**ಆಕ್ಷೇಪ :** ಪ್ರಪಂಚಕ್ಕೆ ಆತ್ಮನಷ್ಟು ಇರವು ಬೇಡ ; ಅದು ಆತ್ಮನ ಜೊತೆಯಲ್ಲಿ ಯಾವಾಗಲೂ ಇಲ್ಲದಿದ್ದರೂ ತನ್ನ ಕಾಲದಲ್ಲಿಯಾದರೂ ಅದು

ತೋರಿಕೊಳ್ಳುವದೊ, ಇಲ್ಲವೊ ? ಅಷ್ಟರಮಟ್ಟಿಗೆ ಅದು ಸತ್ಯವೆನ್ನಬೇಕೊ, ಬಾರದೊ ?

**ಸಮಾಧಾನ :** ಪರಮಾರ್ಥದೃಷ್ಟಿಯಿಂದ ನೋಡಿದರೆ ಅದು ಸತ್ಯವೆಂದು ಹೇಳುವದಕ್ಕೆ ಬರುವದೇ ಇಲ್ಲ ; ಅದು ಆತ್ಮನನ್ನು ಬಿಟ್ಟು ಸ್ವತಂತ್ರವಾಗಿ ಇರುವದೇ ಇಲ್ಲ ; ಹೀಗಿರುವಲ್ಲಿ ಅದಕ್ಕೆ ಬೇರೆ ಇರವು ಎಲ್ಲಿಂದ ಬಂತು? ಆತ್ಮನಧೀನವಾಗಿರುವ ಇರವನ್ನು ಬೇರೆ ಇರವೆನ್ನುವದಾದರೆ ಸಕ್ಕರೆಯ ಸಿಹಿ ಬೇರೆ, ಸಕ್ಕರೆ ಬೆರೆಯಿಸಿದ ಪಾಯಸದಲ್ಲಿರುವ ಸಿಹಿ ಬೇರೆ– ಎಂದೆಣಿಸಿದಂತಾಗುವದು. ನಿಜವಾಗಿ ನೋಡಿದರೆ ಪಾಯಸದ ಸಿಹಿಯೆಂದರೆ ಸಕ್ಕರೆಗೆ ಅಧೀನವಾಗಿ ಪಾಯಸದಲ್ಲಿ ತೋರಿಕೊಳ್ಳುವ ಸಿಹಿ, ಅದು ಸಕ್ಕರೆಯ ಸಿಹಿಯೇ ಹೊರತು ಬೇರೊಂದು ಸಿಹಿಯಲ್ಲವೆಂಬುದು ನಮಗೆಲ್ಲರಿಗೂ ತಿಳಿದಿರುವ ವಿಷಯವು. ಇದರಂತೆ ಆತ್ಮನ ಅಧೀನವಾಗಿರುವ ಪ್ರಪಂಚದ ಇರವೂ ಆತ್ಮನ ಇರವೇ ಹೊರತು ಬೇರೆಯಲ್ಲವೆಂಬುದು ಯುಕ್ತವಾಗಿದೆ. ಆತ್ಮನ ಇರವನ್ನೇ ಇರವೆಂದು ನಾವು ಕರೆದರೆ ಅದಕ್ಕಿಂತ ಕಡಿಮೆಯಾದದ್ದನ್ನು ಇರವೆನ್ನುವದಕ್ಕಾಗಲಾರದು ; ಏಕೆಂದರೆ ಇರವು ಮುಕ್ಕಾದರೆ ಇಲ್ಲವಾಗಬೇಕೇ ಹೊರತು ಅರ್ಧ ಇರವು, ಕಾಲು ಇರವು– ಎಂದು ಇರವಿನಲ್ಲಿ ಭಿನ್ನಾಂಶವನ್ನು ಗೊತ್ತುಪಡಿಸುವದಕ್ಕೆ ಆಗುವದಿಲ್ಲ.

**ಆಕ್ಷೇಪ :** ಹಾಗಾದರೆ ಜನರು ವ್ಯವಹಾರದಲ್ಲಿ ಮನೆಯಿದೆ, ಮಠವಿದೆ– ಎನ್ನುತ್ತಾರಲ್ಲವೆ ? ಪ್ರಪಂಚಕ್ಕೆ ಯಾವ ಇರವೂ ಇಲ್ಲದಿದ್ದರೆ ಈ ವಸ್ತುಗಳಲ್ಲಿ ಇರವೆಂಬುದು ಜನರಿಗೆ ತೋರಿಕೊಂಡದ್ದು ಹೇಗೆ ?

**ಸಮಾಧಾನ :** ಇದಕ್ಕೆ ಉತ್ತರವನ್ನು ಈ ಮೊದಲೆ ಹೇಳಿರುತ್ತೇವೆ. 'ಮನೆಯಿದೆ,' ಎಂಬಲ್ಲಿ 'ಮನೆ' ಎಂಬುದು ಮಾಯೆಯಿಂದಾಗಿರುವ ಜಗತ್ತಿನ ಅಂಶ, 'ಇದೆ' ಎಂಬುದು ಪರಮಾರ್ಥಸತ್ಯವಾದ ಆತ್ಮನ ಅಂಶ. ಈ ಎರಡನ್ನೂ ಬೆರೆಯಿಸಿಯೇ ಜನರು ವ್ಯವಹಾರದಲ್ಲಿ ಮನೆಯಿದೆ ಎಂದು ಹೇಳುತ್ತಿರುವರು. ಅವರಿಗೆ ಆತ್ಮಸ್ವರೂಪವು ತಿಳಿಯದಿರುವದರಿಂದ ಪ್ರಪಂಚದ ಇರವೇ ಅವರ ಪಾಲಿಗೆ ನಿಜವಾದ ಇರವಾಗಿರುವದು. ಜ್ಞಾನಿಗಳ ದೃಷ್ಟಿಯಿಂದ ಪ್ರಪಂಚದ ಇರವು ಇರವೇ ಅಲ್ಲವಾದರೂ ಇರವಿನ ನಿಜವಾದ ಸ್ಥಾನವನ್ನು

ತಿಳಿಯುವವರೆಗೂ ಇರವೆಂದು ಬಳಕೆಯಾಗಿರುವ ಪ್ರಪಂಚದ ಈ ಇರವನ್ನು **"ವ್ಯಾವಹಾರಿಕಸತ್ತೆ"** ಎಂದು ಅವರು ಕರೆದಿರುತ್ತಾರೆ.

**ಆಕ್ಷೇಪ :** ವ್ಯವಹಾರದಲ್ಲಿ ತೋರುವ ಇಡಿಯ ಪ್ರಪಂಚವೇ ಅಸತ್ಯ ವಾದರೆ ಅದರಲ್ಲಿರುವ ಕೆಲವು ವಸ್ತುಗಳನ್ನು ಸತ್ಯವೆಂದೂ ಮತ್ತೆ ಕೆಲವು ತೋರಿಕೆಗಳನ್ನು ಅಸತ್ಯವೆಂದೂ ಜನರು ಭಾವಿಸುವ್ದದಕ್ಕೆ ಕಾರಣವೇನು ?

**ಸಮಾಧಾನ :** ಇದೂ ತಪ್ಪು ತಿಳಿಕೆಯಿಂದಲೇ, ಚ ದು ರ ಂ ಗ ದ ಕಾಯಿಗಳಲ್ಲಿ ಕೆಲವನ್ನು ಆನೆಯೆಂತಲೂ ಕೆಲವನ್ನು ಕುದುರೆಯೆಂತಲೂ ಸಂಕೇತಮಾಡಿಕೊಂಡಿದ್ದರೂ ಎಲ್ಲಾ ಕಾಯಿಗಳೂ ಮರದವುಗಳೇ ಆಗಿರುವ ವಲ್ಲವೆ ? ಅದರಂತೆ ಕೆಲವು ವಸ್ತುಗಳನ್ನು ಜನರು ನಿಜವೆಂತ ವ್ಯವಹರಿಸು ತ್ತಿರುವರು ; ಅವುಗಳ ಇರವಿಗೆ ಮೇಲೆ ಹೇಳಿರುವಂತೆ **ವ್ಯಾವಹಾರಿಕಸತ್ತೆ** ಎಂದು ಹೆಸರು. ಮತ್ತೆ ಕೆಲವನ್ನು ಅಸತ್ಯ ಬರಿಯ ತೋರಿಕೆ ಎಂದು ವ್ಯವಹರಿಸುತ್ತಿರುವರು ; ಅವುಗಳ ಇರವಿಗೆ **'ಪ್ರಾತಿಭಾಸಿಕಸತ್ತೆ'** ಎಂದು ಹೆಸರು. ಹಗ್ಗದ ಹಾವಿನ ದೃಷ್ಟಾಂತದಲ್ಲಿ ಬರಿಯ ತೋರಿಕೆಯೆಂದು ನಾವು ಎಣಿಸಿರುವ ಹಾವು ಪ್ರಾತಿಭಾಸಿಕಸತ್ತೆಯುಳ್ಳದ್ದು, ಆ ತೋರಿಕೆಗೆ ಆಧಾರ ವಾಗಿರುವ ಹಗ್ಗವು ವ್ಯಾವಹಾರಿಕಸತ್ತೆಯುಳ್ಳದ್ದು. ಆದರೆ ಸರಿಯಾಗಿ ನೋಡಿದರೆ ಇವೆರಡೂ ಒಂದೇ ಎರಡಕ್ಕೂ ಆತ್ಮನ ರೂಪಿನಿಂದ ಇರವು ಉಂಟು, ಎ ರ ಡ ಕ್ಕೂ ತನ್ನತನ್ನ ರೂಪಿನಿಂದ ಇರವು ಇಲ್ಲ. ಎ ರ ಡೂ ಮಾಯೆಯಿಂದಾದವೇ.

**ಆಕ್ಷೇಪ :** ಲೋಕದಲ್ಲಿ ನಿಜ, ಸುಳ್ಳು- ಎಂಬ ವಿಭಾಗವು ಪರಮಾರ್ಥ ವಾಗಿರುವದೆನ್ನಬೇಕೇ ಹೊರತು ಅದನ್ನು ಜನರು ಸುಮ್ಮಸುಮ್ಮನೆ ಕಲ್ಪನೆ ಮಾಡಿಕೊಂಡಿದಾರೆಂದು ಹೇಳುವದು ಸರಿಯಾಗಿ ಕಾಣುವದಿಲ್ಲ. ಹಾಗೆ ಕಲ್ಪನೆ ಮಾಡಿಕೊಂಡಿರುವದೇ ನಿಜವಾಗಿದ್ದರೆ ಒಬ್ಬನಿಗೆ ನಿಜವಾದ ವಸ್ತು ಎಲ್ಲರಿಗೂ ನಿಜವಾಗಿಯೂ ಒಬ್ಬನಿಗೆ ಸುಳ್ಳಾದದ್ದು ಎಲ್ಲರಿಗೂ ಸುಳ್ಳಾಗಿಯೂ ತೋರು ವದಕ್ಕೆ ಆಗುತ್ತಿರಲಿಲ್ಲ.

**ಸಮಾಧಾನ :** ಬಹು ಜನರಿಂದ ಕೂಡಿರುವ ಈ ಪ್ರ ಪ ಂ ಚ ವು ಸತ್ಯವೋ, ಅಸತ್ಯವೋ- ಎಂಬ ವಿಚಾರವು ನಡೆದಿರುವಾಗ ಈ ಆಕ್ಷೇಪಣೆಗೆ ಅವಕಾಶವಿರುವದಿಲ್ಲ. ಇದಕ್ಕೆ ಕನಸಿನ ದೃಷ್ಟಾಂತವನ್ನು ಕೊಡಬಹುದು. ಕನಸಿನಲ್ಲಿ ಒಂದು ವಸ್ತುವನ್ನು ಎಷ್ಟೋ ಜನರು ನಿಜವೆಂದು ಭಾವಿಸುವಂತೆ

ತೋರುವದು ; ಆದರೆ ನಿಜವಾಗಿ ಆ ಬಹುಜನರೂ ಆ ವಸ್ತುವೂ ಅವರ ಭಾವನೆಯೂ ಎಲ್ಲವೂ ಮಾಯೆಯಿಂದಾದದ್ದೇ ಆಗಿರುವದು. ಇಷ್ಟೇ ಅಲ್ಲ. ಕನಸಿನಲ್ಲಿ ಕೆಲವು ವಸ್ತುಗಳನ್ನು ನಿಜವೆಂದೂ ಮತ್ತೆ ಕೆಲವನ್ನು ಹುಸಿಯೆಂದೂ ನಾವು ಎಣಿಸಿರಬಹುದು. ಆದರೆ ಎಚ್ಚರವಾಗುತ್ತಲೂ ಅವೆಲ್ಲವೂ ಹುಸಿಯೇ ಎಂದಾಗಿಬಿಡುವದಲ್ಲವೆ ? ಇದರಂತೆಯೇ ಎಚ್ಚರದ ಸತ್ಯಾಮಿಥ್ಯಾವಿಭಾಗ ವನ್ನೂ ಅರಿಯಬೇಕು.

## ಪ್ರಪಂಚವು ಕನ್ನಡಿಯ ಪ್ರತಿಬಿಂಬದಂತೆ ಅದ್ವೈತಾತ್ಮನಲ್ಲಿ ತೋರುತ್ತಿರುವದು

**ಆಕ್ಷೇಪ :** ಪ್ರಪಂಚದ ಅರಿವು ಕೇವಲ ಮಾಯಿಕವಾಗಿದ್ದರೆ ಆತ್ಮನ ಅರಿವು ಉಂಟಾದಮೇಲೆ ರಜ್ಜುಸರ್ಪಾದಿಗಳಂತೆ ತೋರದೆ ಹೋಗಬೇಕಲ್ಲವೆ ?

**ಸಮಾಧಾನ :** ಇದಕ್ಕೆ ಆಗಲೆ ಪರಮಾರ್ಥದೃಷ್ಟಿಯಿಂದ ಸಮಾಧಾನ ವನ್ನು ಹೇಳಿದ್ದಾಗಿದೆ. ಪ್ರಪಂಚವು ನಿಜವಾಗಿ ಇದ್ದುಕೊಂಡು ತೋರುವ ದೆಂದೂ ಅದು ವ್ಯಾವಹಾರಿಕವೆಂದೂ ಇಟ್ಟುಕೊಂಡು ಈಗ ಮತ್ತೊಂದು ಸಮಾಧಾನವನ್ನು ಹೇಳುವೆವು. ನಿಜವಾಗಿ ಇರವಿಲ್ಲದ ತೋರಿಕೆಯು ಪರ ಮಾರ್ಥದ ಅರಿವಾದಮೇಲೂ ತೋರುತ್ತಿರಬಹುದು. ಉದಾಹರಣೆಗೆ ಕನ್ನಡಿ ಯಲ್ಲಿ ತೋರುತ್ತಿರುವ ಮನುಷ್ಯನ ಪ್ರತಿಬಿಂಬವನ್ನು ನೋಡಿರಿ. ಮಕ್ಕಳು ಕನ್ನಡಿಯಲ್ಲಿ ಕಾಣುವ ತಮ್ಮತಮ್ಮ ಪ್ರತಿಬಿಂಬವನ್ನು ಮತ್ತೊಂದು ಮಗು ವೆಂದೇ ಭಾವಿಸುವವು ; ಕೆಲವು ದಿನವಾದಮೇಲೆ ಇದು ಪ್ರತಿಬಿಂಬವು, ನಿಜವಾಗಿ ಕನ್ನಡಿಯಲ್ಲಿ ಮಗುವಿಲ್ಲ– ಎಂದು ಅರಿತುಕೊಳ್ಳುವವು. ಈ ಅರಿವಾದಮೇಲೂ ಪ್ರತಿಬಿಂಬವು ತೋರುತ್ತಲೇ ಇರುವದಲ್ಲವೆ ? ಇದರಂತೆ ಪ್ರಪಂಚಕ್ಕೆ ಬೇರೆ ಇರವು ಇಲ್ಲ, ಅದರ ಇರವು ಆತ್ಮನ ಇರವೇ– ಎಂದು ತಿಳಿದುಕೊಂಡಮೇಲೂ ಪ್ರಪಂಚವು ಕಾಣುತ್ತಿರಬಹುದಾಗಿದೆ.

**ಆಕ್ಷೇಪ :** ಕನ್ನಡಿಯು ಎದುರಿಗೆ ಇರುವಾಗ ಪ್ರತಿಬಿಂಬವು ಕಾಣಿಸು ವದು, ಇಲ್ಲದಿದ್ದಾಗ ಕಾಣಿಸುವದಿಲ್ಲ ; ಹಾಗೆ ಆತ್ಮನಲ್ಲಿ ಪ್ರಪಂಚವು ಕಾಣಿಸು ವದು, ಕಾಣಿಸದಿರುವದು– ಎರಡೂ ಉಂಟೋ ?

**ಸಮಾಧಾನ :** ಉಂಟು. ಜಾಗ್ರತ್ಸ್ವಪ್ನಗಳಲ್ಲಿ ಅದು ಕಾಣಿಸಿಕೊಳ್ಳುವದು. ತನಿನಿದ್ರೆಯಲ್ಲಿ ಕಾಣಿಸುವದಿಲ್ಲ. ಆದರೆ ಪ್ರತಿಬಿಂಬವು ಕಾಣಿಸಿದರೂ ಕಾಣಿಸದಿದ್ದರೂ ಹೇಗೆ ಕನ್ನಡಿಯು ಇದ್ದಂತೆಯೇ ಇರುವದೋ ಹಾಗೆ ಆತ್ಮನು ಒಬ್ಬನೇ, ಅದ್ವಿತೀಯನೇ ಆಗಿರುವನು. ಕನ್ನಡಿಯಲ್ಲಿ ಪ್ರತಿಬಿಂಬವು ತೋರಿಕೊಳ್ಳುವಾಗಲೂ ತೋರಿಕೊಳ್ಳದಿರುವಾಗಲೂ ಅದು ತನ್ನ ಸ್ವಚ್ಛ ರೂಪದಿಂದಲೇ ಇರುವಂತೆ ಆತ್ಮನೂ ಪ್ರಪಂಚವು ತೋರಿಕೊಳ್ಳುವದು, ತೋರಿಕೊಳ್ಳದಿರುವದು– ಇವುಗಳಿಂದ ಮಾರ್ಪಡದೆ ಯಾವಾಗಲೂ ಅದ್ವೈತರೂಪನಾಗಿಯೇ ಇರುವನು.

**ಆಕ್ಷೇಪ :** ವಿಷಯಗಳು, ಶರೀರ, ಇಂದ್ರಿಯಗಳು, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ– ಎಂಬ ಭೇದಗಳಿರುವಾಗಲೂ ವಿಷಯಗಳನ್ನು ಇಂದ್ರಿಯಗಳಿಂದ ಅರಿತು ಸುಖದುಃಖವನ್ನು ಅನುಭವಿಸುವಾಗಲೂ ಅವನು ಅದ್ವೈತನೆ ?

**ಸಮಾಧಾನ :** ಮೇಲೆ ವರ್ಣಿಸಿದ ವಿಭಾಗಗಳೆಲ್ಲವೂ ಕನ್ನಡಿಯಲ್ಲಿ ತೋರುವ ಪ್ರತಿಬಿಂಬದಂತೆ. ಆದ್ದರಿಂದ ಅವನು ಅದ್ವೈತನೇ. ಕನಸಿನಲ್ಲಿ ನಾವು ಒಂದನ್ನು ಅರಿಯುವಂತೆಯೂ, ಒಂದು ಕೆಲಸವನ್ನು ಮಾಡುವಂತೆಯೂ, ಸುಖದುಃಖವನ್ನು ಅನುಭವಿಸುವಂತೆಯೂ ತೋರಿದರೂ ಹೇಗೆ ನಿಜವಾಗಿ ನಮ್ಮಲ್ಲಿ ಯಾವ ಮಾರ್ಪಾಡೂ ಆಗಿರುವದೇ ಇಲ್ಲವೋ ಅದರಂತೆಯೇ ಜ್ಞಾತೃ (ಅರಿಯುವವನು), ಜ್ಞೇಯ (ಅರಿಯಲ್ಪಡತಕ್ಕದ್ದು), ಜ್ಞಾನ (ಅರಿವು) ; ಭೋಕ್ತೃ (ಅನುಭವಿಸುವವನು), ಭೋಗ್ಯ (ಅನುಭವಿಸಲ್ಪಡತಕ್ಕದ್ದು), ಭೋಗ (ಅನುಭವ)– ಎಂಬ **ತ್ರಿಪುಟಿಗಳು** ನಮ್ಮಲ್ಲಿ ತೋರುತ್ತಿರುವಾಗಲೂ ಪರಮಾರ್ಥವಾಗಿ ಈ ಮುಕ್ಕಪ್ಪೆಗಳ ದ್ವೈತವು ನಮ್ಮ ಆತ್ಮನಲ್ಲಿರುವದಿಲ್ಲ ; ಅವನು ಅದ್ವೈತನೇ ಆಗಿರುತ್ತಾನೆ.

**ಆಕ್ಷೇಪ :** ಒಂದು ಅವಸ್ಥೆಯಲ್ಲಿ ಮಾಯಿಕವಾದ ದ್ವೈತವನ್ನು ನೋಡುವದು, ಒಂದವಸ್ಥೆಯಲ್ಲಿ ನೋಡದಿರುವದು– ಎಂಬಷ್ಟು ಮಾರ್ಪಾಡಾದರೂ ಆತ್ಮನಲ್ಲಿರುವದೊ, ಇಲ್ಲವೊ? ಅವನು ಇಷ್ಟುಮಟ್ಟಿಗೆ ತನ್ನೊಳಗೇ ತಾನು ದ್ವೈತರೂಪವುಳ್ಳವನೆಂದಾದರೂ ಆಗುವದಿಲ್ಲವೆ ?

**ಸಮಾಧಾನ:** ಇಲ್ಲ. ಆತ್ಮನಿಗೆ ಅವಸ್ಥೆಗಳುಂಟೆಂಬುದೂ ವ್ಯವಹಾರದೃಷ್ಟಿಯಿಂದಲೇ. ಪರಮಾರ್ಥದಲ್ಲಿ ಸಾಕ್ಷಿಚೈತನ್ಯಸ್ವರೂಪನಾದ ಆತ್ಮನನ್ನು ಬಿಟ್ಟು ಸ್ವತಂತ್ರವಾದ ಯಾವ ಅವಸ್ಥೆಯೂ ಇರುವದೇ ಇಲ್ಲ; ಅವಸ್ಥೆಗಳೆಂಬವೂ ಪರಮಾರ್ಥವಾಗಿ ಆತ್ಮನೇ ಆಗಿರುವವು.

**ಆಕ್ಷೇಪ:** ನೀವು ಹೇಳಿದ ದೃಷ್ಟಾಂತದಲ್ಲಿ ಕನ್ನಡಿಯೆಂಬುದು ನಮಗಿಂತ ಬೇರೆಯಾಗಿ ಅದರಲ್ಲಿ ನಮ್ಮ ಪ್ರತಿಬಿಂಬವು ಬಿದ್ದಿರುತ್ತದೆ; ಯಾವ ಎರಡನೆಯ ವಸ್ತುವೂ ಇಲ್ಲದ ಆತ್ಮನಿಗೆ ಏತರಲ್ಲಿ ಪ್ರತಿಬಿಂಬವು ಬೀಳಬೇಕು ?

**ಸಮಾಧಾನ:** ದಾರ್ಷ್ಟಾಂತಿಕದ ಕನ್ನಡಿಯು ಬೇರೊಂದು ವಸ್ತು ಆತ್ಮನೇ ಇಲ್ಲಿ ಕನ್ನಡಿ. ಆತ್ಮನಲ್ಲಿಯೇ ಪ್ರಪಂಚವೆಂಬ ಪ್ರತಿಬಿಂಬವು ಬಿದ್ದಿರುತ್ತದೆ.

**ಆಕ್ಷೇಪ:** ಹಾಗಾದರೆ ಆತ್ಮನು ನಿತ್ಯನಾಗಿರುವದರಿಂದ ಪ್ರಪಂಚಭ್ರಾಂತಿಯು ನಿತ್ಯವೇ ಆಗುವದಿಲ್ಲವೆ? ಅಥವಾ ಇದು ಯಾವಾಗಲೂ ಇರುವದರಿಂದ ಇದು ಭ್ರಾಂತಿಯೇ ಅಲ್ಲವೆಂದು ಏತಕ್ಕೆ ಹೇಳಬಾರದು ?

**ಸಮಾಧಾನ:** ಹಾಗಲ್ಲ. ಆತ್ಮನಲ್ಲಿ ಯಾವಾಗಲೂ ಪ್ರಪಂಚವು ತೋರುತ್ತಿರುವದೆಂಬುದು ಎಚ್ಚರದಲ್ಲಿ ಮಾತ್ರ ಇರುವ ವ್ಯವಹಾರದ ದೃಷ್ಟಿಯಿಂದ. ಅವಸ್ಥಾತ್ರಯವನ್ನು ಮೀರಿರುವ ದೃಷ್ಟಿಯಿಂದ ನೋಡಿದರೆ ಯಾವ ಪ್ರಪಂಚದ ಪ್ರತಿಬಿಂಬವೂ ಇರುವದೇ ಇಲ್ಲ. ಇದಲ್ಲದೆ ಕನ್ನಡಿಯ ದೃಷ್ಟಾಂತದಲ್ಲಿ ಪ್ರತಿಬಿಂಬಕ್ಕೆ ಅನುರೂಪವಾದ ಮುಖವೇ ಮುಂತಾದ ನಿಜವಾದ ವಸ್ತುವೊಂದು ಹೊರಗೆ ಇದ್ದುಕೊಂಡಿರುತ್ತದೆ. ಆದರೆ ಇಲ್ಲಿ ಪ್ರಪಂಚವೆಂಬ ಪ್ರತಿಬಿಂಬಕ್ಕೆ ಅನುಗುಣವಾಗಿ ಯಾವ ನಿಜವಾದ ಬಿಂಬವೂ ಇರುವದೇ ಇಲ್ಲ. ಹುಸಿಯಾದ ಪ್ರತಿಬಿಂಬವು ಕನ್ನಡಿಯಲ್ಲಿ ಕಾಣುತ್ತಿರುವಂತೆ ಆತ್ಮನಲ್ಲಿ ಪ್ರಪಂಚವು ಕಾಣುತ್ತಿರುವದು; ಮಕ್ಕಳು ಕನ್ನಡಿಯಲ್ಲಿ ತೋರುವ ಪ್ರತಿಬಿಂಬವನ್ನು ನಿಜವಾದ ವಸ್ತುವೆಂದು ಎಣಿಸುವವರಾದರೂ ದೊಡ್ಡವರು ಅದನ್ನು ಬರಿಯ ತೋರಿಕೆಯೆಂದೇ ನಿಶ್ಚಯಿಸುವರು. ಇದರಂತೆ ಅಜ್ಞರಿಗೆ ಸತ್ಯವೆಂದು ತೋರುತ್ತಿರುವ ಈ ಪ್ರಪಂಚವು ಜ್ಞಾನಿಗಳಿಗೂ

ತೋರಿದರೂ ಅವರು ಅದು ಹುರುಳಿಲ್ಲದ ತೋರಿಕೆಯೆಂದೇ ನಿಶ್ಚಯಿಸುವರು. ಇಷ್ಟು ವಿಷಯಗಳಲ್ಲಿ ಪ್ರತಿಬಿಂಬಕ್ಕೂ ಪ್ರಪಂಚಕ್ಕೂ ಹೋಲಿಕೆಯಿದೆ ಎಂಬುದು ಮಾತ್ರವೇ ನಮ್ಮ ಅಭಿಪ್ರಾಯವು.

## ಆದ್ದರಿಂದ ನಾನು ಶಿವನು

ಆದ್ದರಿಂದ ಏನು ಸಿದ್ಧಾಂತವಾಯಿತೆಂದರೆ ಮೇಲೆ ಹೇಳಿದ ಜ್ಞಾನದ ದೃಷ್ಟಿಯಿಂದ ನೋಡಿದರೆ ನಾವು ಪರಮಾರ್ಥವಾಗಿ ಯಾವಾಗಲೂ ನಿತ್ಯ ಶುದ್ಧಪೂರ್ಣಸ್ವರೂಪರಾದ ಅದ್ವಿತೀಯಚೈತನ್ಯಸ್ವರೂಪರೇ ಆಗಿರುವೆವು. ಈ ನಮ್ಮ ಸ್ವರೂಪದಲ್ಲಿ ಜೀವತ್ವವೂ ಜಗತ್ತೂ ವ್ಯಾವಹಾರಿಕದೃಷ್ಟಿಯಿಂದ ತೋರಿದರೂ ಅದು ಪರಮಾರ್ಥವಲ್ಲ.

**ಆಕ್ಷೇಪ:** ತಾನು ಇಂಥ ಅದ್ವೈತಸ್ವರೂಪನೆಂದು ತಿಳಿದುಕೊಂಡವನು ತಾನೆ ಮತ್ತೊಬ್ಬರಿಗೆ ಅದ್ವೈತತತ್ತ್ವವನ್ನು ಬೋಧಿಸಬೇಕು ? ಆದರೆ ಅದ್ವೈತನಾದವನಿಗೆ ದ್ವೈತದಲ್ಲಿ ಸತ್ಯತ್ವಬುದ್ಧಿಯೇ ಇರುವದಿಲ್ಲವಾದ್ದರಿಂದ ಅವನು ಮತ್ತೊಬ್ಬರಿಗೆ ಬೋಧೆಮಾಡುವದು ಹೇಗೆ ? ಅವನಿಂದ ಬೋಧೆಯನ್ನು ಮಾಡುವದಕ್ಕೆ ಆಗದಿದ್ದರೆ ಅದ್ವೈತಶಾಸ್ತ್ರಕ್ಕೆ ಗುರುಶಿಷ್ಯಪರಂಪರೆಯು ಹೇಗೆ ನಡೆಯಬೇಕು ?

**ಸಮಾಧಾನ:** ಈ ಸಂದೇಹವು ಮೇಲೆ ಹೇಳಿದ ವ್ಯಾವಹಾರಿಕ ಪಾರಮಾರ್ಥಿಕದೃಷ್ಟಿಗಳ ವಿವೇಕವಿಲ್ಲದವರಿಗೆ ಉಂಟಾಗುತ್ತದೆ. ಏಕೆಂದರೆ ಹಗ್ಗವು ಹಾವಲ್ಲವೆಂದು ತಿಳಿದಮೇಲೂ 'ಹಗ್ಗವು ಹಾವಿನಂತೆ ತೋರುತ್ತಿದೆ' ಎಂಬ ಅರಿವು ಇರಬಹುದು ; ಎಚ್ಚರವಾದ ಮೇಲೂ 'ನನಗೆ ಆಗ ಕನಸು ಎಚ್ಚರದಂತೆ ತೋರುತ್ತಿತ್ತು' ಎಂಬ ಅರಿವು ಇರಬಹುದು ; ಕನ್ನಡಿಯಲ್ಲಿ ತೋರುವ ಪ್ರತಿಬಿಂಬವು ಸತ್ಯವೇ ಎಂಬ ಅರಿವು ಹೋದಮೇಲೂ 'ನಾನು ಮಗುವಾಗಿದ್ದಾಗ ಪ್ರತಿಬಿಂಬವೇ ಸತ್ಯವೆಂದು ಭಾವಿಸಿದ್ದೆನು' ಎಂಬ ಅರಿವು ಉಳಿದುಕೊಳ್ಳಬಹುದು. ಇದರಂತೆಯೇ ಅದ್ವೈತಜ್ಞಾನವಾದ ಮೇಲೂ 'ಜನರಿಗೆ ಪ್ರಪಂಚವು ಸತ್ಯವೆಂದು ತೋರುತ್ತದೆ' ಎಂಬ ಅರಿವು ಉಳಿದುಕೊಳ್ಳಬಹುದು. 'ಇದು ಹಗ್ಗವು, ಹಾವಲ್ಲ', 'ಕನಸು ಎಚ್ಚರದಂತೆ ತೋರಿದರೂ ಹುರುಳಿಲ್ಲದ್ದು', 'ಕನ್ನಡಿಯಲ್ಲಿ ತೋರುವದು ಬರಿಯ ಪ್ರತಿಬಿಂಬವೇ

ಹೊರತು ನಿಜವಾದ ವಸ್ತುವಲ್ಲ' ಎಂದು ದೃಷ್ಟಾಂತದಲ್ಲಿ ಆಯಾ ವಸ್ತು ಸ್ವರೂಪವನ್ನು ಅರಿತವನು ಮಿಕ್ಕವರಿಗೆ ಹೇಗೆ ಅದನ್ನು ಹೇಳಿಕೊಡಬಹುವದೋ ಅದರಂತೆಯೇ ಇಲ್ಲಿಯೂ 'ನೀವು ಸತ್ಯಜ್ಞಾನಾನಂದಸ್ವರೂಪರು, ಜೀವತ್ವ ವಾಗಲಿ ಜಗತ್ತಾಗಲಿ ನಿಮ್ಮಲ್ಲಿ ಇರುವದಿಲ್ಲ' ಎಂದು ಬೋಧಿಸಲೂಬಹುದು. ಆದರೆ ಇದೆಲ್ಲವೂ ವ್ಯಾವಹಾರಿಕದೃಷ್ಟಿಯಿಂದಲೇ ಹೇಳಿದ್ದು. ವ್ಯಾವಹಾರಿಕ ದೃಷ್ಟಿಯಿಂದ ಶಾಸ್ತ್ರ, ಶಿಷ್ಯ, ಗುರು– ಎಂಬ ಭೇದವು ಇದ್ದೇ ಇರುತ್ತದೆ. ಗುರುಶಿಷ್ಯಭಾವವು ಸತ್ಯವಾಗಿರುವದೆನ್ನುವದು ಆ ದೃಷ್ಟಿಯಿಂದಲೇ ಹೊರತು ಪರಮಾರ್ಥದೃಷ್ಟಿಯಿಂದಲ್ಲ. ಪರಮಾರ್ಥದೃಷ್ಟಿಯಿಂದ ನೋಡಿದರೆ ಜೀವತ್ವ ವಾಗಲಿ ಜಗತ್ತಾಗಲಿ ಇಲ್ಲದಿರುವದರಿಂದ ಆ ಜಗತ್ತಿನೊಳಗಿರುವ ಶಾಸ್ತ್ರ, ಶಿಷ್ಯ, ಗುರು, ಭೇದ– ಎಂಬಿವೂ ಇರುವದೇ ಇಲ್ಲ; 'ಮೊಲದ ಕೊಂಬು' ಎಂದು ಹೇಳಿದರೆ ಯಾವ ವಸ್ತುವೂ ಇಲ್ಲದ ಬರಿಯ ಮಾತಿನ ವಿಕಲ್ಪವೇ ಹೇಗೆ ಆಗುವದೋ ಹಾಗೆ ಪರಮಾರ್ಥದೃಷ್ಟಿಯಿಂದ ಗುರುಶಿಷ್ಯಾದಿಭೇದವೂ ಬರಿಯ **ವಿಕಲ್ಪ**ವಾಗಿರುವದ. ಪರಮಾರ್ಥದೃಷ್ಟಿಯಲ್ಲಿ ಅದ್ವಿತೀಯಾತ್ಮ ನೊಬ್ಬನೇ ಸತ್ಯನಾಗಿರುವನು.

**ಆಕ್ಷೇಪ :** ನಮಗೆ ದ್ವೈತವು ಸತ್ಯವಾಗಿರುವದರಿಂದ ನಾವು ನಿಮ್ಮ ಮೇಲೆ ಆಕ್ಷೇಪವನ್ನು ಹಾಕಬಹುದು ; ಆದರೆ ನಿಮಗೆ ದ್ವೈತವು ಅಸತ್ಯ ವಾಗಿರುವದರಿಂದ ನೀವು ಪರಿಹಾರವನ್ನು ಯಾರಿಗೆ ಹೇಳುತ್ತೀರಿ ?– ಎಂದು ದ್ವೈತಿಗಳು ಅದ್ವೈತಿಗಳನ್ನು ಆಕ್ಷೇಪಿಸಬಹುದಲ್ಲವೆ ?

**ಸಮಾಧಾನ :** ಆಕ್ಷೇಪಿಸಲಿ. ಅದರಿಂದ ಅದ್ವೈತಿಗೆ ಯಾವ ಹಾನಿ ಯೂ ಇಲ್ಲ. ದ್ವೈತದೃಷ್ಟಿಯಿಂದ ಆಕ್ಷೇಪಸಮಾಧಾನಾದಿಗಳು ಸತ್ಯವೆಂತಲೂ ಅದ್ವೈತದೃಷ್ಟಿಯಿಂದ ಅಸತ್ಯವೆಂತಲೂ ಆ ಕುತಾರ್ಕಿಕರಾದ ಆಕ್ಷೇಪಕರೇ ಒಪ್ಪಿಕೊಂಡಂತೆ ಆಗುತ್ತದೆ. ಅದ್ವೈತವನ್ನು ಒಪ್ಪಿಕೊಂಡಮೇಲೆ ಯಾವ ಆಕ್ಷೇಪವನ್ನೂ ಯಾರಿಂದಲೂ ಮಾಡುವದಕ್ಕೆ ಆಗುವದಿಲ್ಲವೆಂಬುದು ಸ್ಪಷ್ಟವೇ ಆಗಿದೆ. ಆದ್ದರಿಂದ ತತ್ತ್ವಪಕ್ಷಪಾತಿಯಾದ ಜಿಜ್ಞಾಸುವು 'ಸತ್ಯಜ್ಞಾನಾ ನಂದಸ್ವರೂಪನಾದ ಶಿವನೇ ನಾನು' ಎಂದು ನಿಶ್ಶಂಕೆಯಿಂದ ನಿಶ್ಚಯಿಸ ಬಹುದು.

# ೫. ವೇದಾಂತಜ್ಞಾನದ ಪ್ರಯೋಜನ

ವೇದಾಂತಜ್ಞಾನವು ಯುಕ್ತಿಯುಕ್ತವಾಗಿರಬಹುದು, ಆದರೆ ಅದರ ಜ್ಞಾನದಿಂದ ನಮಗೆ ಯಾವ ಪ್ರಯೋಜನವೂ ಆಗುವಂತಿಲ್ಲವೆಂದು ಕೆಲವರಿಗೆ ತೋರಬಹುದು. ಅಂಥವರ ಸಮಾಧಾನಕ್ಕಾಗಿ ಈ ಮುಂದಿನ ಶ್ಲೋಕವು ಬಂದಿರುತ್ತದೆ :

**ನಾಹಂ ಜಾತೋ ನ ಪ್ರವೃದ್ಧೋ ನ ನಷ್ಟೋ**
**ದೇಹಸ್ಯೋಕ್ತಾಃ ಪ್ರಾಕೃತಾಃ ಸರ್ವಧರ್ಮಾಃ ।**
**ಕರ್ತೃತ್ವಾದಿಶ್ಚಿನ್ಮಯಸ್ಯಾಸ್ತಿ ನಾಹಂಕಾರಸ್ಯೈವ**
**ಹ್ಯಾತ್ಮನೋ ಮೇ ಶಿವೋಽಹಮ್ ॥ ೫ ॥**

**ಪ್ರತಿಪದಾರ್ಥ :** ಅಹಂ—ನಾನು, ನ ಜಾತಃ—ಹುಟ್ಟಿದವನಲ್ಲ ; ನ ಪ್ರವೃದ್ಧಃ ಬೆಳೆದವನಲ್ಲ; ನ ನಷ್ಟಃ-ನಾಶಹೊಂದಿದವನಲ್ಲ. ಉಕ್ತಾಃ-ಮೇಲೆ ಹೇಳಿದ, ಪ್ರಾಕೃತಾಃ-ಪ್ರಕೃತಿಗೆ ಸಂಬಂಧವಾದ, ಸರ್ವಧರ್ಮಾಃ—ಎಲ್ಲಾ ಧರ್ಮಗಳೂ, ದೇಹಸ್ಯ-ದೇಹದವು. ಕರ್ತೃತ್ವಾದಿಃ – ಕರ್ತೃತ್ವವೇ ಮುಂತಾದದ್ದು, ಅಹಂಕಾರಸ್ಯೈವ – ಅಹಂಕಾರದ್ದೇ, ಹಿ—ನಿಶ್ಚಯವು. ಚಿನ್ಮಯಸ್ಯ-ಚಿದ್ರೂಪನಾದ, ಆತ್ಮನಃ-ಆತ್ಮನಾದ, ಮೇ-ನನಗೆ, ನಾಸ್ತಿ-ಇರುವದಿಲ್ಲ. ಅಹಂ-ನಾನು, ಶಿವಃ—ಶಿವನು.

೫. ನಾನು ಹುಟ್ಟಿದ್ದೂ ಬೆಳೆದದ್ದೂ ಸತ್ತದ್ದೂ ಇಲ್ಲ. ನನ್ನಲ್ಲಿದೆಯೆಂದು ತೋರುವ ಈ ಪ್ರಕೃತಿಧರ್ಮಗಳೆಲ್ಲವೂ ದೇಹಕ್ಕೆ ಸೇರಿದವುಗಳು. ಕರ್ತೃತ್ವವೇ ಮುಂತಾದದ್ದು ಅಹಂಕಾರಕ್ಕೆ ಸೇರಿದ್ದೇ ಹೊರತು ಚಿನ್ಮಯನಾದ ನನಗೆ ಸೇರಿರುವದಿಲ್ಲ. ನಾನು ಶಿವ ಸ್ವರೂಪನೇ.

## ವಿವರಣೆ

ವೇದಾಂತಜ್ಞಾನದ ಪ್ರಯೋಜನವೇನೆಂದು ಕೇಳುವವರು ಮೊದಲು ತಮಗೆ ಅದರಿಂದ ಏನಾಗಬೇಕೆಂದು ಇಟ್ಟುಕೊಂಡಿರುವರೋ ಅದನ್ನು ವಿಚಾರಮಾಡಿಕೊಳ್ಳಬೇಕು. ಹೊಟ್ಟೆ, ಬಟ್ಟೆ, ಹಣಕಾಸು— ಮುಂತಾದವು ಗಳನ್ನು ಬಯಸುವವರು ಅದಕ್ಕೆ ತಕ್ಕ ವ್ಯವಸಾಯವನ್ನು ಮಾಡದಿದ್ದರೂ

ವೇದಾಂತದಿಂದ ಅವು ದೊರೆತಾವೆಂದು ಎಂದಿಗೂ ಭಾವಿಸಬಾರದು. ಸತ್ರಾಜಿತನ ಸ್ಯಮಂತಕಮಣಿಯಂತೆ ಪೂಜಿಸಿದಮಾತ್ರದಿಂದಲೇ ವೇದಾಂತಜ್ಞಾನವೇನೂ ದಿನಕ್ಕೆಂಟುಭಾರದ ಚಿನ್ನವನ್ನು ಕೊಡುವಹಾಗಿಲ್ಲ. ಆದರೂ ಮತ್ತೊಂದು ದೃಷ್ಟಿಯಿಂದ ನೋಡಿದರೆ ವೇದಾಂತಜ್ಞಾನವು ಒಂದು ಬಗೆಯ ಚಿಂತಾಮಣಿಯಾಗಿಯೇ ಇರುವದೆಂದು ಹೇಳಬಹುದಾಗಿದೆ. ಏಕೆಂದರೆ ಇದನ್ನು ಸಂಪಾದಿಸಿಕೊಳ್ಳದೆ ಇರುವವರೆಗಿದ್ದ ಅನರ್ಥಗಳೆಲ್ಲವೂ ಈ ಜ್ಞಾನದಿಂದ ಮಾಯವಾಗುವವು. ಲೋಕದಲ್ಲಿ ನಾನು ಹುಟ್ಟಿದೆನು, ಬೆಳೆದೆನು, ಹಿಂದಿನ ಜನ್ಮದಲ್ಲಿ ಸತ್ತು ಈಗ ಹುಟ್ಟಿರುವೆನು, ಇನ್ನು ಮುಂದೆಯೂ ಆಯುಸ್ಸು ಕಳೆದ ಬಳಿಕ ಮತ್ತೆ ಸಾಯುವೆನು– ಎಂದು ಸಾಮಾನ್ಯಜನರು ಭಾವಿಸಿರುವರು. ಈ ಭಾವನೆಯಿಂದ ಕೂಡಿರುವವರೆಗೂ ಹುಟ್ಟುವದರಲ್ಲಿರುವ ದುಃಖವೂ ಬೆಳೆಯುವದರಲ್ಲಿರುವ ದುಃಖವೂ ಸಾಯುವದರಲ್ಲಿರುವ ದುಃಖವೂ ತಮಗೆ ಉಂಟೆಂದು ಅವರು ಕ್ಲೇಶವನ್ನು ಅನುಭವಿಸುವರು. ಗರ್ಭದಲ್ಲಿ ವಾಸಮಾಡಿ ಸ್ತ್ರೀಶರೀರದ ಅಸಹ್ಯಭಾಗದಿಂದ ಹೊರಕ್ಕೆಬರುವ ದುಃಖದ ಹುಟ್ಟೂ, ಶರೀರ, ಇಂದ್ರಿಯ, ಮನಸ್ಸು, ಬುದ್ಧಿ-ಇವುಗಳ ಶಕ್ತಿಯನ್ನು ಬೆಳೆಸಿಕೊಂಡು ಕಾಪಾಡಿಕೊಳ್ಳುವ ಕ್ಲೇಶವುಳ್ಳ ಬೆಳೆವಣಿಗೆಯೂ, ಎಲ್ಲಾ ಶಕ್ತಿಗಳೂ ಹಿಂಗಿ ಸೊರಗುವ ಸಾವೂ, ನಮಗೆ ಹೇಗೆ ತಪ್ಪೀತೆಂದು ಯೋಚಿಸಿ ಬಗೆಬಗೆಯ ಉಪಾಯಗಳನ್ನು ಹುಡುಕುವರು. ಉಪಾಯಗಳು ಗೆದ್ದಾಗ ಹಿಗ್ಗುವದು, ಸೋತಾಗ ತಗ್ಗುವದು ಹೀಗಿರುವವರು ಕೆಲವರು ; ಇವು ನಮ್ಮ ಹಣೆಯಬರಹವಾದ್ದರಿಂದ ತಪ್ಪಿಸಿಕೊಳ್ಳುವದಕ್ಕಾಗದವೆಂದು ಭಾವಿಸುವವರು ಕೆಲವರು; ಇಂಥ ಮನುಷ್ಯಜನ್ಮಕ್ಕೆ ದೇವರು ನಮ್ಮನ್ನು ಏತಕ್ಕೆ ಹಾಕಿದನೆಂದು ಈಶ್ವರನನ್ನು ಹಳಿಯುವ ಮೂರ್ಖರು ಕೆಲವರು ; ಇರುವ ದೋಷವಿರಲಿ, ಮಿಕ್ಕ ಗುಣಗಳು ಮನುಷ್ಯಜನ್ಮದಲ್ಲಿರುವದರಿಂದ ನಾವೇ ಧನ್ಯರು– ಎಂದು ಕ್ಷಣಭಂಗುರವಾದ ಈ ಬಾಳಿನ ವಿಷಮಿಶ್ರವಾದ ಅಮೃತದ ತೊಟ್ಟುಗಳಂತಿರುವ ವಿಷಯಭೋಗಗಳಿಗೆ ಮನಸ್ಸನ್ನು ಜೋಲುಬಿಟ್ಟು ಮುಂದಿನ ಯೋಚನೆಯಿಲ್ಲದೆ ಮನಸ್ಸುಬಂದಂತೆ ನಡೆಯುವ ಅವಿವೇಕಿಗಳು ಕೆಲವರು, ಅಂತೂ ಹುಟ್ಟುಬೆಳವಣಿಗೆಹೊಂದುಗಳು ತಮಗೆ ಇರುವವೆಂದೂ ಇವು ದುಃಖವೆಂದೂ ಎಣಿಸದವರು ಯಾರೂ ಇಲ್ಲವಷ್ಟೆ ? ಇವರೆಲ್ಲರಿಗೂ ವೇದಾಂತ

ಜ್ಞಾನದಿಂದ ಆಗುವ ಮಹಾಪ್ರಯೋಜನವೇನೆಂದರೆ ತಮ್ಮ ಆತ್ಮನಿಗೆ ಹುಟ್ಟು, ಬೆಳೆವಣಿಗೆ, ಸಾವು- ಇವು ಯಾವವೂ ಇಲ್ಲವೆಂದು ಗಟ್ಟಿಯಾದ ತಿಳಿವಳಿಕೆಯುಂಟಾಗುವದು.

## ಪ್ರಾಕೃತವಾದ ಧರ್ಮಗಳೆಲ್ಲ ದೇಹದವು

ಹಿಂದೆ ಹೇಳಿರುವ ರೀತಿಯಲ್ಲಿ ಹುಟ್ಟು, ಬೆಳವಣಿಗೆ, ಸಾವು- ಇವು ಮೂರೂ ದೇಹದಲ್ಲಿ ಕಂಡಿವೆಯೇ ಹೊರತು ಆತ್ಮನಲ್ಲಿ ಕಂಡುಬಂದದ್ದಿಲ್ಲ. ನಾವು ಹುಟ್ಟಿದ್ದನ್ನಾಗಲಿ, ಬೆಳೆದದ್ದನ್ನಾಗಲಿ, ಸತ್ತದ್ದನ್ನಾಗಲಿ, ನಾವು ಕಂಡದ್ದಿಲ್ಲ ; ಮತ್ತೊಬ್ಬರು ಹುಟ್ಟಿದ್ದು, ಬೆಳೆದದ್ದು, ಸತ್ತದ್ದು- ಎಂಬುದೆಲ್ಲವೂ ದೇಹಗಳು ಹುಟ್ಟಿ ಬೆಳೆದು ಸತ್ತದ್ದು. ಮಿಕ್ಕವರು ನಮ್ಮ ಹುಟ್ಟುಸಾವುಗಳನ್ನು ನೋಡುವರೆಂಬುದೂ ಹೀಗೆಯೇ. ಆದ್ದರಿಂದ ಈ ಧರ್ಮಗಳೆಲ್ಲ ದೇಹಕ್ಕೆ ಸೇರಿದವುಗಳಾಗಿವೆ, ನಮಗೆ ಸೇರಿದವಲ್ಲ.

**ಆಕ್ಷೇಪ :** ದೇಹವೂ ನಮ್ಮದೇ ಆದ್ದರಿಂದ ಇದರ ಹುಟ್ಟುಹೊಂದು ಮುಂತಾದವು ನಮ್ಮವೇ ಆಗುವದಿಲ್ಲವೆ ?

**ಸಮಾಧಾನ** ಹಿಂದೆ ಮಾಡಿರುವ ವಿಚಾರವನ್ನು ಮನಸ್ಸಿಗೆ ತಂದುಕೊಂಡರೆ ಈ ಆಕ್ಷೇಪಕ್ಕೆ ಅವಕಾಶವಿರುವದಿಲ್ಲ. ಏಕೆಂದರೆ ದೇಹಕ್ಕೂ ನಮಗೂ ಯಾವ ಸಂಬಂಧವಿದೆಯೆಂಬುದನ್ನು ಅನುಭವದ ಆಧಾರದಿಂದ ನಿರ್ಧಾರಮಾಡುವದಕ್ಕಾಗುವದಿಲ್ಲ. ಇದಲ್ಲದೆ ಎಚ್ಚರದಲ್ಲಿ ಒಂದು ದೇಹವಿದ್ದರೆ ಕನಸುಗಳಲ್ಲಿ ನೂರಾರು ದೇಹಗಳು ಬರುತ್ತವೆ ; ಇವುಗಳಲ್ಲಿ ಯಾವ ದೇಹವು ನಮ್ಮದೆಂದು ಅಭಿಮಾನಪಡಬೇಕು ? ಕನಸಿನ ದೇಹಗಳು ಬೇರೆಬೇರೆಯಾಗುತ್ತಿರುವದರಿಂದ ಯಾವಾಗಲೂ ಇರುವ ಎಚ್ಚರದ ದೇಹವೇ ನಮ್ಮದೆಂದು ಇಟ್ಟುಕೊಳ್ಳೋಣವೆಂದರೆ ಅದಕ್ಕೂ ಅವಕಾಶವಿಲ್ಲ ; ಏಕೆಂದರೆ ಹಿಂದೆ ನಾವು ಸಿದ್ಧಪಡಿಸಿರುವ ಪ್ರಕಾರ ಕನಸಿಗೂ ಎಚ್ಚರಕ್ಕೂ ತಾರತಮ್ಯವೇ ಇಲ್ಲದ್ದರಿಂದ ಎಚ್ಚರದ ದೇಹವೆಂಬುದು ಯಾವದೆಂಬುದೇ ನಿರ್ಣಯವಾಗುವಂತಿಲ್ಲ. ಆದ್ದರಿಂದ ಹುಟ್ಟುವದು ಮುಂತಾದದ್ದು ತೋರಿಕೆಯ ದೇಹಗಳಲ್ಲಿ ಕಾಣಿಸುವವೆಂದೂ ಆ ದೇಹಕ್ಕೂ ನಮಗೂ ಯಾವ ಸಂಬಂಧವೂ ಇಲ್ಲವೆಂದೂ ನಿರ್ಣಯವಾಗುತ್ತದೆ.

ಆದ್ದರಿಂದ ಪ್ರಕೃತಿಯಿಂದಾಗಿರುವ ಧರ್ಮಗಳೆಲ್ಲ ದೇಹಕ್ಕೆ ಸೇರಿದವೇ ಎಂದಾಯಿತು. **ಪ್ರಕೃತಿ**ಯೆಂದರೆ ಅಜ್ಞಾನಸ್ವಭಾವದಿಂದ ತೋರುವ ಜಗತ್ತಿನ ಬೀಜವು. ಇದನ್ನೇ **ಮಾಯೆ**ಯೆಂದೂ ಹಿಂದೆ ಕರೆದಿರುತ್ತದೆ. ಅಜ್ಞಾನದಿಂದ ನಾವು ಯಾವಯಾವ ವಿಕಾರಗಳನ್ನು ನಮ್ಮಲ್ಲಿ ಹುಟ್ಟುಗಟ್ಟಿಕೊಂಡಿರುವೆವೋ ಅವೆಲ್ಲವೂ ಈ ಮಾಯಿಕದೇಹಕ್ಕೆ ಸೇರಿರುತ್ತವೆಯೇ ಹೊರತು ನಿಜವಾಗಿರುವದಿಲ್ಲ.

## ಕರ್ತೃತ್ವಾದಿಗಳು ಅಹಂಕಾರದ ಧರ್ಮಗಳು

**ಆಕ್ಷೇಪ :** ದೇಹಕ್ಕೂ ನಮಗೂ ಯಾವ ಸಂಬಂಧವೂ ಇಲ್ಲವೆಂದು ಹೇಳುವದು ಸರಿಯಾಗಿ ತೋರುವದಿಲ್ಲ; ಏಕೆಂದರೆ ದೇಹಕ್ಕೂ ನಮಗೂ ಸ್ವಸ್ವಾಮಿಭಾವಸಂಬಂಧವಿರುತ್ತದೆ. ದೇಹವು ನಮ್ಮದು, ನಾವು ಅದಕ್ಕೆ ಒಡೆಯರು. ನಾವು ದೇಹಾದಿಗಳಿಂದ ಕರ್ಮಗಳನ್ನು ಮಾಡಿ ಅವುಗಳ ಫಲವನ್ನು ಭೋಗಿಸುತ್ತೇವೆ. ಹಿಂದೆ ಮಾಡಿ ರಾಶಿಹಾಕಿದ ಕರ್ಮದ ಫಲವನ್ನು ಭೋಗಿಸುವದಕ್ಕೆಂದೇ ಈ ದೇಹವು ನಮಗೆ ಬಂದಿರುತ್ತದೆ; ಮುಂದೆಯೂ ಈ ರೀತಿ ಬರಬಹುದಾಗಿದೆಯಲ್ಲವೆ ?

**ಸಮಾಧಾನ :** ನಮಗೆ ಶರೀರ, ಇಂದ್ರಿಯ, ಮನಸ್ಸು– ಮುಂತಾದ ಸಾಧನಗಳಿವೆಯೆಂಬುದೂ ಇವುಗಳನ್ನು ನಾವು ಉಪಯೋಗಿಸಿಕೊಂಡು ಕರ್ಮವನ್ನು ಮಾಡಿ ಪುಣ್ಯಪಾಪಗಳನ್ನು ಪಡೆಯುತ್ತೇವೆಂಬುದೂ ಅವುಗಳಿಂದ ಮತ್ತೆ ದೇಹವುಂಟಾಗುವದೆಂಬುದೂ ವ್ಯಾವಹಾರಿಕದೃಷ್ಟಿಯಿಂದ ನಿಜವೇ. ಆದರೆ ಈಗ ನಾವು ಅವಲಂಬಿಸಿರುವದು ಪರಮಾರ್ಥದೃಷ್ಟಿ. ಆ ದೃಷ್ಟಿಯಿಂದ ನೋಡಿದರೆ ಜಗತ್ತಿನಂತೆ ಅದರಲ್ಲಿರುವ ದೇಹವೂ ಮಾಯಿಕವಾಗಿರುತ್ತದೆ; ತನಿನಿದ್ರೆಯೇ ಮುಂತಾದ ಅವಸ್ಥೆಗಳಲ್ಲಿ ದೇಹವಾಗಲಿ ಅದರ ಸಂಬಂಧವಾಗಲಿ ನಮಗೆ ಇರುವದಿಲ್ಲವಾದ್ದರಿಂದ ದೇಹಸಂಬಂಧವು ನಮಗೆ ಸ್ವಾಭಾವಿಕವೆಂತ ಹೇಳಲಾಗುವದಿಲ್ಲ. ಇದೇ ದೃಷ್ಟಿಯಿಂದ ನೋಡಿದರೆ ನಮಗೆ ಕರ್ತೃತ್ವವೂ ಇಲ್ಲ. ಏಕೆಂದರೆ ಅಹಂಕಾರದಿಂದೊಡಗೂಡಿರುವಾಗ ಮಾತ್ರ 'ನಾನು ಇದನ್ನು ಮಾಡುತ್ತೇನೆ'– ಎಂಬ ಅರಿವುಂಟಾಗುವದು. ವಿಷಯದಲ್ಲಿ ಆಶೆ, ಅದಕ್ಕಾಗಿ ಸಂಕಲ್ಪ, ನಿಶ್ಚಯ, ಕರ್ಮ– ಮುಂತಾದವುಗಳು ಈ ಅಹಂಕಾರವನ್ನಾಶ್ರಯಿ

ಸಿರುವವೇ ಹೊರತು ಬರಿಯ ನಮ್ಮ ಸ್ವರೂಪಕ್ಕೆ ಸೇರಿರುವದಿಲ್ಲ. ಗಾಢ ನಿದ್ರೆಯೇ ಮುಂತಾದ ಅವಸ್ಥೆಗಳಲ್ಲಿ ನಮಗೆ ಅಹಂಕಾರದ ಸಂಬಂಧವಿಲ್ಲದ್ದರಿಂದ ಕರ್ತೃತ್ವವೂ ಇರುವದಿಲ್ಲವೆನ್ನುವದು ಅನುಭವಸಿದ್ಧವಾಗಿರುತ್ತದೆ

**ಆಕ್ಷೇಪ :** ಹಾಗಾದರೆ ನಾವು ಮಾಡುವ ಕೆಲಸಕ್ಕೆ ನಾವು ಹೊಣೆಯಲ್ಲವೆಂದಾಗುವದು ; ಅಥವಾ ಕರ್ಮವನ್ನು ಮಾಡುವದು, ಪಾಪಪುಣ್ಯಗಳನ್ನು ಸಂಪಾದಿಸುವದು, ಅವುಗಳ ಫಲವನ್ನು ಅನುಭವಿಸುವದು- ಯಾವದೂ ಇಲ್ಲವೆಂದಾಗುವದು. ಆಗ ಇದನ್ನು ಮಾಡಬೇಕು, ಇದನ್ನು ಮಾಡಬಾರದು- ಎಂದು ಹೇಳುವ ಶಾಸ್ತ್ರವೂ ಅಪ್ರಮಾಣವಾಗುವದು. ಇಷ್ಟೇ ಏಕೆ ? ವೇದಾಂತಶಾಸ್ತ್ರದಿಂದ ಬರಬೇಕಾದ ಮುಕ್ತಿಯಾಗಲಿ ಆ ಮುಕ್ತಿಯಿಂದ ಹೋಗಬೇಕಾದ ಬಂಧವಾಗಲಿ ಯಾವದೊಂದೂ ಇಲ್ಲವೆಂದೇ ಆಗುವದು. ಇದೆಲ್ಲ ನಿಮಗೆ ಇಷ್ಟವೆ ?

**ಸಮಾಧಾನ :** ಈ ಆಕ್ಷೇಪಣೆಯೂ ವ್ಯವಹಾರ, ಪರಮಾರ್ಥ-ಎಂಬ ವಿಂಗಡವನ್ನು ಮಾಡಿಕೊಳ್ಳದ್ದರಿಂದ ಹುಟ್ಟಿರುತ್ತದೆ. ವ್ಯವಹಾರದೃಷ್ಟಿಯಲ್ಲಿ ನಮಗೆ ಅಹಂಕಾರಸಂಬಂಧವಿರುವದರಿಂದ ಅಹಂಕಾರದಲ್ಲಿರುವ ಕರ್ತೃತ್ವ ಭೋಕ್ತೃತ್ವಾದಿಗಳು ನಮ್ಮಲ್ಲಿ ತೋರಿಕೊಳ್ಳುತ್ತಿರುವವು. ಆ ದೃಷ್ಟಿಯಿಂದ ನೋಡಿದರೆ ಧರ್ಮಾಧರ್ಮಾದಿಗಳು ಇಲ್ಲವೆಂದು ಹೇಳುವದಕ್ಕೆ ಆಗುವದೇ ಇಲ್ಲ. ಶಾಸ್ತ್ರದಲ್ಲಿ ಈ ದೃಷ್ಟಿಯನ್ನು ಇಟ್ಟುಕೊಂಡೇ ವಿಧಿನಿಷೇಧಗಳನ್ನು ಏರ್ಪಡಿಸಿರುತ್ತದೆ ; ಆ ದೃಷ್ಟಿಯಿಂದ ಪುಣ್ಯ, ಪಾಪ, ಸ್ವರ್ಗ, ನರಕ- ಯಾವದೊಂದೂ ಸುಳ್ಳಲ್ಲ. ಆದರೆ ಪರಮಾರ್ಥದೃಷ್ಟಿಯಿಂದ ನೋಡಿದರೆ ನಮಗೆ ಅಹಂಕಾರಸಂಬಂಧವು ಇರುವವೇ ಇಲ್ಲ; ನಮ್ಮಲ್ಲಿ ಸ್ವತಃ ಯಾವ ಕರ್ತೃತ್ವವೂ ಇರುವದಿಲ್ಲ. ಕೊಡಲಿಯಿಂದ ಮರವನ್ನು ಕಡಿಯುವಾಗ ಕೊಡಲಿಯು ಇದ್ದ ಬಳಿ ಇರದೆ ಮೇಲಕ್ಕೂ ಕೆಳಕ್ಕೂ ಓಡಾಡುತ್ತಿರುವದು ; ಅದರಂತೆ ಕಡಿಯುವವನ ಕೈಯೂ ಮಾರ್ಪಾಡಾಗುತ್ತಿರುವದು. ಆದರೆ ಅಹಂಕಾರವನ್ನು ನಾವು ಕೊಡಲಿಯ ಹಾಗೆ ಕರ್ತೃತ್ವಪೂರ್ವಕವಾಗಿ ಉಪಯೋಗಿಸುವೆವೆಂದು ಹೇಳುವದಕ್ಕೆ ಆಗುವದಿಲ್ಲ; ಏಕೆಂದರೆ ಕೆಲಸಮಾಡುವಾಗ ಅಹಂಕಾರದಲ್ಲಿ ವಿಕಾರಗಳಾಗುವವಾದರೂ ನಮ್ಮ ಸ್ವರೂಪದಲ್ಲಿ ಯಾವ ವಿಕಾರಗಳೂ ಆಗು

ತ್ತಿರುವದಿಲ್ಲ. ನಾವು ಅಹಂಕಾರಕ್ಕೂ ಅದರ ವಿಕಾರಗಳಿಗೂ ಸಾಕ್ಷಿಯಾಗಿರುತ್ತೇವೆ. ಆದ್ದರಿಂದ ಅಹಂಕಾರದ ಕರ್ತೃತ್ವಭೋಕ್ತೃತ್ವಗಳು ನಮ್ಮಲ್ಲಿ ಭ್ರಾಂತಿಯಿಂದ ಆರೋಪಿತವಾಗಿರುವವೇ ಹೊರತು ನಿಜವಾಗಿ ನಮ್ಮ ಸ್ವರೂಪದಲ್ಲಿ ಅವು ಇರುವದಿಲ್ಲ. ಬಂಧಮೋಕ್ಷವ್ಯವಹಾರಕ್ಕೂ ಇದೇ ಕಾರಣವನ್ನು ಹೇಳಬಹುದೆಂಬುದು ಈಗ ಸ್ಪಷ್ಟವಾಗುತ್ತದೆ. ಅಹಂಕಾರಕ್ಕೂ ನಮಗೂ ಅಜ್ಞಾನದಿಂದಾಗಿರುವ ಸಂಬಂಧದಿಂದಲೇ ನಮಗೆ ಕ್ರಿಯಾಕಾರಕಫಲರೂಪವಾದ ಕರ್ಮಬಂಧವೂ ಜ್ಞಾತೃಜ್ಞಾನಜ್ಞೇಯರೂಪವಾದ ದ್ವೈತಜ್ಞಾನಬಂಧವೂ ಗಂಟುಬಿದ್ದಿರುವವು; ಆದ್ದರಿಂದ ವೇದಾಂತಶ್ರವಣಾದಿಗಳಿಂದ ಆ ಜ್ಞಾನವನ್ನು ಸಂಪಾದಿಸಿಕೊಳ್ಳುವದರ ಮೂಲಕ ಈ ಬಂಧದ ಬಿಡುಗಡೆಯಾಗಬೇಕಾಗಿದೆಯೆಂಬುದು ವ್ಯವಹಾರದೃಷ್ಟಿಯಿಂದ ಸರಿಯೇ ಆಯಿತು. ಆದರೆ ಪರಮಾರ್ಥದೃಷ್ಟಿಯಿಂದ ನೋಡುವಾಗ ಅಹಂಕಾರದ ಸಂಬಂಧವೇ ನಮಗಿಲ್ಲವಾದ್ದರಿಂದ ನಮ್ಮ ಸ್ವರೂಪಕ್ಕೆ ಬಂಧವಾಗಲಿ ಮೋಕ್ಷವಾಗಲಿ ಇರುವದೇ ಇಲ್ಲ. ಆದ್ದರಿಂದ ಬಂಧ, ಸಾಧಕ, ಸಾಧನ, ಮೋಕ್ಷ– ಮುಂತಾದ ಭೇದವೂ ಪರಮಾರ್ಥದೃಷ್ಟಿಯಿಂದ ಇಲ್ಲವೆಂಬುದೇ ಪರಮಸಿದ್ಧಾಂತವಾಗುವದು. ಇದು ಯಾರಿಗೂ ಅನಿಷ್ಟವಲ್ಲ, ಏಕೆಂದರೆ ಪರಮಾರ್ಥದೃಷ್ಟಿಯಲ್ಲಿ ಇಷ್ಟಾನಿಷ್ಟಗಳು ಯಾವವೂ ಇರುವದಿಲ್ಲ; ಇಷ್ಟಾನಿಷ್ಟಗಳ ಪ್ರಾಪ್ತಿಗಾಗಲಿ ಪರಿಹಾರಕ್ಕಾಗಲಿ ಪ್ರಯತ್ನಿಸುವವರು ಯಾರೂ ಇರುವದಿಲ್ಲ. ಪರಮಾತ್ಮನೊಬ್ಬನೇ ಇದ್ದುಕೊಂಡಿರುತ್ತಾನೆ.

**ಆಕ್ಷೇಪ :** ಅಹಂಕಾರದಲ್ಲಿರುವ ಕರ್ತೃತ್ವಭೋಕ್ತೃತ್ವಗಳು ಆತ್ಮನಲ್ಲಿ ಆರೋಪಿತವಾಗಿರುವವೆಂದು ಹೇಳಿದರೆ ಅಹಂಕಾರವು ಚೇತನವೆಂದಂತಾಗುವದಿಲ್ಲವೆ ?

**ಸಮಾಧಾನ :** ನಿಜವಾಗಿ ನೋಡಿದರೆ ಆತ್ಮನು ನಿತ್ಯಮುಕ್ತನಾಗಿರುವದರಿಂದ ಅವನಲ್ಲಿ ಹೇಗೆ ಕರ್ತೃತ್ವವಿಲ್ಲವೋ ಅದರಂತೆ ಅಹಂಕಾರವು ನಿತ್ಯಜಡವಾಗಿರುವದರಿಂದ ಅದಕ್ಕೂ ಕರ್ತೃತ್ವಾದಿಗಳಿರುವದಿಲ್ಲ. ಆದರೂ ವ್ಯವಹಾರದೃಷ್ಟಿಯಲ್ಲಿ ಕರ್ತೃತ್ವವು ತೋರುವಾಗ ಅಹಂಕಾರದಲ್ಲಿ ಮಾತ್ರ ಮಾರ್ಪಾಡುಗಳಾಗುತ್ತಿರುವದರಿಂದಲೂ ಆತ್ಮನಲ್ಲಿ ಯಾವ ಮಾರ್ಪಾಡೂ ಆಗುವದಿಲ್ಲವಾದ್ದರಿಂದಲೂ ಸ್ಥೂಲದೃಷ್ಟಿಯಿಂದ ಅಹಂಕಾರವನ್ನು ಕರ್ತೃವೆಂದು ಇಲ್ಲಿ ಹೇಳಿರುತ್ತದೆ.

**ಆಕ್ಷೇಪ :** ಆತ್ಮನು ಒಂದವಸ್ಥೆಯಿಂದ ಮತ್ತೊಂದವಸ್ಥೆಗೆ ಹೋಗುತ್ತಲೂ ತನಿನಿದ್ರೆಗೆ ಹೋಗುವಾಗ ಅಹಂಕಾರಾದಿಗಳನ್ನು ಬಿಡುತ್ತಲೂ ಎಚ್ಚರಕ್ಕೆ ಬರುವಾಗ ಮತ್ತೆ ತೆಗೆದುಕೊಳ್ಳುತ್ತಲೂ ಇರುವನಲ್ಲ ಅಷ್ಟುಮಟ್ಟಿನ ಕರ್ತೃತ್ವವನ್ನಾದರೂ ಅವನಲ್ಲಿ ಒಪ್ಪಬೇಕಲ್ಲವೆ ?

**ಸಮಾಧಾನ :** ಆತ್ಮನು ಎಲ್ಲಿಗೂ ಹೋಗುವದಿಲ್ಲ, ಎಲ್ಲಿಗೂ ಬರುವದಿಲ್ಲ; ಯಾವದನ್ನೂ ಹಿಡಿಯುವದಿಲ್ಲ, ಯಾವದನ್ನೂ ಬಿಡುವದಿಲ್ಲ. ಆಕಾಶದಲ್ಲಿ ಮೋಡಗಳು ಬಂದರೂ ಹೋದರೂ ಆಕಾಶವು ಹೇಗೆ ತನ್ನಸ್ವರೂಪದಿಂದಲೇ ಸ್ವಚ್ಛವಾಗಿರುತ್ತಿರುವದೋ ಆದರಂತೆಯೇ ಅಹಂಕಾರಾದಿಗಳು ಮಾಯೆಯಿಂದ ತೋರಿಕೊಂಡರೂ ಮೈಗರೆದರೂ ತನ್ನಲ್ಲಿ ಯಾವದೊಂದೂ ಮಾರ್ಪಾಡಿಲ್ಲದೆ ಅತ್ಯಂತ ಸ್ವಚ್ಛವಾದ ಚೈತನ್ಯಸ್ವರೂಪದಿಂದ ಇದ್ದುಕೊಂಡಿರುತ್ತಾನೆ. ಅವಸ್ಥೆಗಳೂ ಅವಸ್ಥೆಗಳಲ್ಲಿ ತೋರುವ ಅಹಂಕಾರಾದಿಗಳೂ ಪರಮಾರ್ಥವಲ್ಲವೆಂಬುದನ್ನು ಮತ್ತೆಮತ್ತೆ ಹೇಳಿರುತ್ತೇವೆ ; ಅದನ್ನು ಲಕ್ಷ್ಯದಲ್ಲಿಟ್ಟರೆ ಆತ್ಮನಲ್ಲಿ ಯಾವ ಕರ್ತೃತ್ವಾದಿಗಳೂ ಕಾಣಿಸುವದಿಲ್ಲ.

## ಆದ್ದರಿಂದ ನಾನು ಶಿವನು

ಹೀಗೆ ಹಗ್ಗದ ಹಾವಿನ ದೃಷ್ಟಾಂತ, ಕನಸಿನ ದೃಷ್ಟಾಂತ, ಕನ್ನಡಿಯ ಪ್ರತಿಬಿಂಬದ ದೃಷ್ಟಾಂತ–ಈ ಮೂರನ್ನೂ ಹೊಂದುಗೆಮಾಡಿಕೊಂಡು ಆತ್ಮನಿಗೆ ಅನ್ವಯಿಸಿಕೊಂಡು ನೋಡಿದರೆ ನಮ್ಮಲ್ಲಿ ಯಾವ ಜೀವತ್ವವಾಗಲಿ ಜಗತ್ತಾಗಲಿ ಇರುವದಿಲ್ಲವೆಂದು ಸ್ಪಷ್ಟವಾಗುತ್ತದೆ. ಈ ಅರಿವು ದೃಢವಾದಂತೆಲ್ಲ ನಿತ್ಯಶುದ್ಧಪರಿಪೂರ್ಣನೂ ಅದ್ವಿತೀಯನೂ ಸಚ್ಚಿದಾನಂದಸ್ವರೂಪನೂ ಆದ ಪರಮಶಿವನೇ ನಾನು ಎಂಬ ಅರಿವೂ ದೃಢವಾಗುವದು.

ಈ ಅರಿವಿನ ಬೆಂಬಲವಿದ್ದವರಿಗೆ ಅಂಜಿಕೆಯು ತೊಲಗುವದು, ಧೈರ್ಯವು ಉಕ್ಕುವದು ; ಸ್ವೇಚ್ಛಾಚಾರವು ತಪ್ಪುವದು, ವಿವೇಕವು ಇಮ್ಮಡಿಸುವದು ; ಅನ್ಯಾಯ, ಹಿಂಸೆ, ಕಳವು-ಮುಂತಾದವುಗಳು ಹೇಳಹೆಸರಿಲ್ಲದೆ ಹೋಗಿ ನ್ಯಾಯ, ಕರುಣೆ, ಸರ್ವಭೂತಹಿತರತಿ–ಮುಂತಾದವುಗಳು ಬೇರೂರಿಕೊಳ್ಳುವವು ; ಸೋಮಾರಿತನವು ಅತ್ತಸಾರುವದು, ಪರೋಪಕಾರಕ್ಕಾಗಿ

ದುಡಿಯುವ ಅಭ್ಯಾಸವು ನೆಲೆನಿಲ್ಲುವದು ; ಎಲ್ಲಿಯೂ ದುಃಖವು ಕಣ್ಣಿಗೆ ಬೀಳುವದಿಲ್ಲ, ಎಲ್ಲಿ ನೋಡಿದರಲ್ಲಿ ಸತ್ಯಜ್ಞಾನಾನಂದರೂಪವಾದ ಪರಬ್ರಹ್ಮದ ಲೀಲೆಯೇ ತೋರುತ್ತಿರುವದು. ಆದ್ದರಿಂದ "ನಾನು ಶಿವನು" ಎಂಬ ಈ ಶಿವಂಕರವಾದ ಜ್ಞಾನವನ್ನು ಎಲ್ಲರೂ ಸಂಪಾದಿಸಿಕೊಳ್ಳಬೇಕು ; ಅದು ಈ ಕೂಡಲೆ ದಕ್ಕದಿದ್ದರೂ ಅದಕ್ಕೆ ತಕ್ಕ ಯೋಗ್ಯತೆಯನ್ನುಂಟುಮಾಡಿಕೊಳ್ಳುವದಕ್ಕಾದರೂ ಪ್ರಯತ್ನಿಸಬೇಕು.

ಓಂ ತತ್ಸತ್

# ಶಬ್ದಾನುಕ್ರಮಣಿಕೆ

ಈ ಪ್ರಕರಣದಲ್ಲಿ ಬಂದಿರುವ ಪಾರಿಭಾಷಿಕಶಬ್ದಗಳನ್ನು ಇಲ್ಲಿ ಅಕಾರಾದಿಯಾಗಿ ಕೊಟ್ಟಿದೆ. ಇವುಗಳನ್ನು ಗ್ರಂಥದಲ್ಲಿ ಅಲ್ಲಲ್ಲಿಯೇ ವಿವರಿಸಿದೆಯಾದರೂ ವೇದಾಂತಗ್ರಂಥಗಳಲ್ಲಿ ಮತ್ತೆ ಮತ್ತೆ ಇವುಗಳನ್ನು ಬಳಸುತ್ತಿರುವದರಿಂದ ಜಿಜ್ಞಾಸುಗಳು ಇವನ್ನು ನೆನಪಿನಲ್ಲಿಟ್ಟುಕೊಂಡಿರುವದು ಒಳ್ಳೆಯದು. ವಿವರದಲ್ಲಿ ಕಪ್ಪಕ್ಷರದಲ್ಲಿರುವ ಮಾತುಗಳು ಅವನ್ನು ಈ ಅನುಕ್ರಮಣಿಕೆಯಲ್ಲಿ ವಿವರಿಸಿದೆಯೆಂಬುದನ್ನು ಸೂಚಿಸುವವು.

**ಅಂತಃಕರಣ :–** ನಮ್ಮೊಳಗೆ ಇರುವ ಅರಿವಿನ ಮತ್ತು ಸಂಕಲ್ಪದ ಕರಣ. ಅಂತಃಕರಣವನ್ನು ಬುದ್ಧಿ, ಮನಸ್ಸು, ಚಿತ್ತ, **ಅಹಂಕಾರ**– ಎಂಬ ಹೆಸರುಗಳಿಂದಲೂ ಕರೆಯುತ್ತಾರೆ.

**ಅಹಂಕಾರ :–** ನಾನು ಎಂಬ ವೃತ್ತಿಯ ರೂಪದಲ್ಲಿರುವ ಅಂತಃಕರಣ. ಇದರ ಸಂಬಂಧದಿಂದಲೇ ಆತ್ಮನಲ್ಲಿ ಕರ್ತೃತ್ವಭೋಕ್ತೃತ್ವಗಳನ್ನು ಜನರು ಹುಟ್ಟುಗಟ್ಟಿಕೊಂಡಿರುತ್ತಾರೆ.

**ಆತ್ಮಾನಾತ್ಮವಿವೇಕ :–** ತನ್ನ ಸ್ವರೂಪ, ತನ್ನ ಸ್ವರೂಪಕ್ಕೆ ಸೇರದೆ ತಾನೆಂದು ಹುಟ್ಟುಗಟ್ಟಿಕೊಂಡಿರುವ ತೋರಿಕೆ–ಇವುಗಳನ್ನು ವಿಂಗಡಿಸಿ ತಿಳಿದುಕೊಳ್ಳುವದು.

**ಆನಂದ :–** ಆತ್ಮನ ಸ್ವರೂಪವೇ ಆಗಿರುವ ಸುಖ; ವಿಷಯದಿಂದಾಗುವ ತೋರಿಕೆಯ ಸುಖವಲ್ಲ.

**ಆಪ್ತ :–** ತತ್ತ್ವವನ್ನು ಬಲ್ಲವರೂ ಜನರಿಗೆ ದಯೆಯಿಂದ ಬೋಧಿಸುವವರೂ ಆದ ಜ್ಞಾನಿಗಳು.

**ಇಂದ್ರಿಯಗೋಳಕಗಳು :–** ಹೊರಗಿನ ವಿಷಯಗಳನ್ನು ತಿಳಿಯುವದಕ್ಕೆ ಇರುವ ಕರಣಗಳಿಗೆ ಇಂದ್ರಿಯಗಳೆಂದು ಹೆಸರು. ಆ ಇಂದ್ರಿಯಗಳು ಇರುವ ಸ್ಥಾನಗಳಾದ ಕಣ್ಣು, ಕಿವಿ, ಮೂಗು– ಮುಂತಾದ ದೇಹಭಾಗಗಳಿಗೆ ಗೋಳಕಗಳು ಎಂಬ ಹೆಸರನ್ನು ಕೊಟ್ಟಿರುತ್ತಾರೆ.

**ಇಹಾಮುತ್ರಾರ್ಥಫಲಭೋಗವಿರಾಗ :–** ಈ ಲೋಕದಲ್ಲಿಯೋ ಪರಲೋಕದಲ್ಲಿಯೋ ಭೋಗಗಳನ್ನು ಅನುಭವಿಸಬೇಕೆಂಬುದರಲ್ಲಿ ವೈರಾಗ್ಯ. ವೇದಾಂತಕ್ಕೆ ತಕ್ಕವರೆನಿಸಿಕೊಳ್ಳುವವರಲ್ಲಿರಬೇಕಾದ ನಾಲ್ಕು ಸಾಧನಗಳಲ್ಲಿ ಒಂದು.

**ಏಕ :-** ತನಗೆರಡನೆಯದಿಲ್ಲದ ಆತ್ಮ ; ಅದ್ವಿತೀಯನೆಂಬ ಹೆಸರಿನಿಂದ ಹೇಳುವದೂ ಈ ಆತ್ಮನನ್ನೇ.

**ಕೂಟಸ್ಥನಿತ್ಯ :-** ಯಾವ ವಿಕಾರವೂ ಇಲ್ಲದೆ ತಾನು ಇದ್ದಂತೆ ಇರುವ ನಿತ್ಯನಾದ ಆತ್ಮ. ಆತ್ಮನು ಕಾಲದ ಕಟ್ಟಿಲ್ಲದವನಾದ್ದರಿಂದ ಕೂಟಸ್ಥನಿತ್ಯನಾಗಿರುತ್ತಾನೆ.

**ಚೇತನ :-** ಅರಿವಿರುವ ಪ್ರಾಣಿ.

**ಜಡ :-** ಅರಿವಿಲ್ಲದ ಕಲ್ಲುಮಣ್ಣು ಮುಂತಾದ ವಸ್ತುಗಳು.

**ಜ್ಞಾನ :-** ಅರಿವಿನ ತಿರುಳಾಗಿರುವ ಆತ್ಮ ; ಅರಿಯುವದೆಂಬ ಅಂತಃಕರಣವೃತ್ತಿಗೂ ಜ್ಞಾನವೆಂಬ ಹೆಸರಿದೆ.

**ತ್ರಿಪುಟಿ :-** ಜ್ಞಾತೃ, ಜ್ಞಾನ, ಜ್ಞೇಯ ; ಭೋಕ್ತೃ, ಭೋಗ, ಭೋಗ್ಯ- ಎಂಬಂತೆ ಮೂರು ಮೂರಾಗಿ ವಿಂಗಡಿಸಿಕೊಂಡಿರುವ ದ್ವೈತ.

**ನಿತ್ಯ :-** ಯಾವಾಗಲೂ ಇರುವ, ಕಾಲದಲ್ಲಿರುವ **ಪರಿಣಾಮಿನಿತ್ಯ,** ಕಾಲವನ್ನು ಮೀರಿರುವ **ಕೂಟಸ್ಥನಿತ್ಯ**- ಎಂದು ನಿತ್ಯದಲ್ಲಿ ಎರಡು ಬಗೆಗಳುಂಟು.

**ನಿತ್ಯಾನಿತ್ಯವಿವೇಕ :-** ಕಾಲವಶವಾಗಿರುವ ವಸ್ತುಗಳು ಯಾವವು, ಕಾಲವನ್ನು ಮೀರಿರುವ ವಸ್ತು ಯಾವದು ?- ಎಂಬಿದನ್ನು ವಿಂಗಡಿಸುವ ತಿಳಿವು.

**ನಿರ್ವಿಕಾರ :-** ಯಾವ ಮಾರ್ಪಾಡುಗಳಿಗೂ ಒಳಗಾಗದ. ಹುಟ್ಟು, ಇರವು, ಬೆಳೆವಣಿಗೆ, ಬದಲಿಸುವದು, ಸವೆಯುವದು, ನಾಶ- ಎಂಬೀ ಆರೂ ಭಾವವಿಕಾರಗಳು. ಇವು ಯಾವವೂ ಆತ್ಮನಿಗಿಲ್ಲವಾದ್ದರಿಂದ ಅವನು ನಿರ್ವಿಕಾರನು.

**ಪರಮಾತ್ಮ :-** ತಪ್ಪುತಿಳಿವಳಿಕೆಯಿಂದ ನಮ್ಮ ಸ್ವರೂಪವೆಂದು ತಿಳಿದಿರುವ ಆತ್ಮರುಗಳಿಗಿಂತ ಹೆಚ್ಚಿನ ನಿಜವಾದ ಆತ್ಮ.

**ಪರಮಾರ್ಥಸತ್ಯ :-** ನಿಜವಾಗಿಯೂ ಸತ್ಯವಾಗಿರುವದು. ಇದೇ ಪರಮಾತ್ಮ, ಅಥವಾ ಪರಬ್ರಹ್ಮ.

**ಪರಿಣಾಮಿನಿತ್ಯ :-** ಮಾರ್ಪಡುತ್ತಿದ್ದರೂ ಅದೇ ಇದು ಎಂದು ಕಾಣುತ್ತಿರುವ, ಕಾಲದಲ್ಲಿರುವ ವಸ್ತು ; ಕೂಟಸ್ಥನಿತ್ಯವಲ್ಲ.

**ಪಾರಮಾರ್ಥಿಕಸತ್ತೆ :-** ತನ್ನ ಸ್ವರೂಪವನ್ನು ಎಂದಿಗೂ ಬೇರ್ಪಡಿಸಿಕೊಳ್ಳದ ವಸ್ತುವಿನ ಇರವು.

**ಪೂರ್ಣ :-** ದೇಶಕಾಲವಸ್ತುಗಳ ಕಟ್ಟಿಲ್ಲದೆ ತಾನೊಬ್ಬನೇ ಎಲ್ಲವೂ ಆಗಿರುವ ಆತ್ಮ.

**ಪ್ರತ್ಯಗಾತ್ಮ** :– ನಮ್ಮೊಳಗಿನ ಆತ್ಮ, ಶರೀರ, ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ–ಇವೆಲ್ಲಕ್ಕಿಂತ ಒಳಗಿರುವವನಾದ್ದರಿಂದ ಆತ್ಮನನ್ನು ಪ್ರತ್ಯಗಾತ್ಮನೆನ್ನುವರು.

**ಪ್ರಾತಿಭಾಸಿಕಸತ್ತೆ** :– ತೋರಿಕೆಯ ಇರವು. ಕನ್ನಡಿಯಲ್ಲಿರುವ ಪ್ರತಿಬಿಂಬ, ಹಗ್ಗದಲ್ಲಿ ತೋರುವ ಹಾವು–ಮುಂತಾದ ತೋರಿಕೆಗಳಲ್ಲಿ ಕಾಣುವ ಇರವು ಪ್ರಾತಿಭಾಸಿಕ ಸತ್ತೆ: **ವ್ಯಾವಹಾರಿಕಸತ್ತೆ**ಯಲ್ಲ, ನಿಜವಾಗಿಯೂ ಇರುವ ಆತ್ಮನ ಇರವಲ್ಲವಾದ್ದರಿಂದ **ಪಾರಮಾರ್ಥಿಕಸತ್ತೆ**ಯೂ ಅಲ್ಲ.

**ಪ್ರಾಣ** :– ದೇಹದಲ್ಲಿದ್ದು ಎಲ್ಲಾ ವ್ಯಾಪಾರಗಳಿಗೂ ಕಾರಣವಾಗಿರುವ ಜೀವನಶಕ್ತಿ. ಇದಕ್ಕೆ **ಪ್ರಾಣ, ಅಪಾನ**– ಮುಂತಾದ ಐದು ವೃತ್ತಿಗಳುಂಟು.

**ಬಹಿಃಕರಣ** :- ಹೊರಗಿನ ಇಂದ್ರಿಯಗಳಿಗೆ ಬಹಿಃಕರಣಗಳೆಂದು ಹೆಸರು ; ಇವು ಹೊರಗಿನ ವಿಷಯಗಳನ್ನೇ ಗ್ರಹಿಸುವವು. ಚಕ್ಷುಸ್ಸು ಮುಂತಾದ ಐದು ಜ್ಞಾನೇಂದ್ರಿಯಗಳು, ವಾಕ್ಪಾಣಿಯೇ ಮುಂತಾದ ಐದು ಕರ್ಮೇಂದ್ರಿಯಗಳು– ಇವೆಲ್ಲ ಬಹಿಃಕರಣಗಳೇ, ಅಂತಃಕರಣವಲ್ಲ.

**ಬುದ್ಧಿ** :- ನಿಶ್ಚಯಿಸುವ ಅಂತಃಕರಣರೂಪದ ವೃತ್ತಿ. ಅಂತಃಕರಣವನ್ನೇ ಬುದ್ಧಿಯೆಂದು ಕರೆಯುವದೂ ಉಂಟು.

**ಮನಸ್ಸು**:–ವಸ್ತುಗಳನ್ನು ಒಂದೊಂದಾಗಿ ವಿಕಲ್ಪಿಸಿ ಅರಿಯುವ ಅಂತಃಕರಣದ ವೃತ್ತಿ. ಅಂತಃಕರಣವನ್ನೇ ಮನಸ್ಸು ಎಂದು ಕರೆಯುವದೂ ಉಂಟು.

**ವಿಕಲ್ಪ** :- (೧) ಮಾತಿನಿಂದ ಹೇಳಿದರೂ ನಿಜವಾಗಿಲ್ಲದ್ದು : ಉದಾಹರಣೆಗೆ ಮೊಲದ ಕೊಂಬು ಎಂಬುದೊಂದು ವಿಕಲ್ಪವು. (೨) ಮನಸ್ಸಿನಿಂದ ವಿವಿಧವಾಗಿ ಕಲ್ಪಿಸುವದು.

**ವೃತ್ತಿ** :– (೧) ಅಂತಃಕರಣವು ಬಗೆಬಗೆಯಾಗಿ ಮಾರ್ಪಡುವ ರೂಪಗಳು. ಮನಸ್ಸು, ಬುದ್ಧಿ–ಮುಂತಾದವುಗಳೂ ಕಾಮವೇ ಮುಂತಾದ ವೇದನೆಗಳೂ ಅಂತಃ ಕರಣದ ವೃತ್ತಿಗಳೇ. (೨) ಮುಖ್ಯಪ್ರಾಣದ ವ್ಯಾಪಾರಗಳು. ಪ್ರಾಣ, ಅಪಾನ, ವ್ಯಾನ, ಸಮಾನ, ಉದಾನ– ಎಂಬಿವು.

**ವೇದನೆ** :– ಸುಖ, ದುಃಖ, ಇಚ್ಛೆ–ಮುಂತಾದ ಅಂತಃಕರಣದ ವೃತ್ತಿಗಳು.

**ವ್ಯಾವಹಾರಿಕಸತ್ತೆ** :– ವ್ಯವಹಾರದಲ್ಲಿ, ಎಂದರೆ ಲೌಕಿಕಜ್ಞಾನ, ಮತ್ತು ಮಾತು–ಇವುಗಳಿಂದ, ಸತ್ಯವೆಂದು ವ್ಯವಹರಿಸುವ ವಸ್ತುಗಳ ಇರವು. ಎಚ್ಚರದಲ್ಲಿ ನಾವು ನಿಜವೆಂದು ಭಾವಿಸುವ ವಸ್ತುಗಳ ಇರವು.

**ಶಮಾದಿಷಟ್ಕಸಂಪತ್ತಿ** :- ವೇದಾಂತವನ್ನು ಸರಿಯಾಗಿ ತಿಳಿದುಕೊಳ್ಳುವದಕ್ಕೆ ಬೇಕಾದ ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ–ಎಂಬ ಆರು ಗುಣಗಳುಳ್ಳವನಾಗಿರುವಿಕೆ.

**ಶುದ್ಧ** :- ಸಂಸಾರದ ಅಶುದ್ಧಿಯಾಗಲಿ, ಪ್ರಪಂಚದ ಅಶುದ್ಧಿಯಾಗಲಿ ಇಲ್ಲದ ಆತ್ಮನು.

**ಸತ್ಯಜ್ಞಾನಾನಂದರೂಪ** :– ನಿಜವಾಗಿಯೂ ಇರುವದು, ಅರಿವಿನ ತಿರುಳಾಗಿರುವದು, ಸುಖದ ತಿರುಳಾಗಿರುವದು–ಎಂಬ ಆತ್ಮನ ಸ್ವರೂಪ. ಆತ್ಮನಲ್ಲಿ ಈ ಮೂರು ಧರ್ಮಗಳಿಲ್ಲ, ಅವನೊಬ್ಬನೇ ಈ ಮೂರು ಹೆಸರುಗಳಿಂದ ಕರೆಯಲ್ಪಡುತ್ತಿರುವನು.

**ಸಾಕ್ಷಿ** :- ನೇರಾಗಿ ಯಾವ ಕರಣದ ಸಹಾಯವೂ ಅಲ್ಲದೆ ಅರಿಯುವ ಚಿದ್ರೂಪನಾದ ಆತ್ಮ.

---

24-10-1983, 2000, ಅಧ್ಯಾತ್ಮ ಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ.

# ಅಧ್ಯಾತ್ಮಪ್ರಕಾಶಕಾರ್ಯಾಲಯ,

## ಹೊ ಳೆ ನ ರ ಸೀ ಪು ರ.

---

## ಈ ಕಾರ್ಯಾಲಯದಿಂದ

## ತಾವು ಯಾವಯಾವ ಲಾಭವನ್ನು ಪಡೆಯಬಹುದು?

೧. ಕಾರ್ಯಾಲಯದಲ್ಲಿ ಆಗಾಗ್ಗೆ ನಡೆಯುತ್ತಿರುವ ಪೂಜೆ, ಪುರಾಣಶ್ರವಣ, ಉಪನ್ಯಾಸ, ಅನುಷ್ಠಾನಗಳು-ಇವುಗಳನ್ನು ನೋಡಿ ನಲಿಯಬಹುದು.

೨. ಕಾರ್ಯಾಲಯದಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯವಾದ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

೩. ಕಾರ್ಯಾಲಯದಲ್ಲಿ ಪ್ರಕಟವಾಗುವ 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಗೆ ಚಂದಾದಾರರಾಗಿ ತಿಂಗಳುತಿಂಗಳೂ ಬಗೆಬಗೆಯ ಆಧ್ಯಾತ್ಮಬೋಧೆಯನ್ನು ಪಡೆಯಬಹುದು. ಮಹಾಪೋಷಕರೂ ಪೋಷಕರೂ ಆಗಿ ಪತ್ರಿಕೆಯನ್ನು ಪ್ರೋತ್ಸಾಹಿಸಬಹುದು.

೪. ಕಾರ್ಯಾಲಯದಲ್ಲಿ ಸಿದ್ಧವಾಗುತ್ತಿರುವ ಪುಸ್ತಕಗಳ ಪ್ರಕಟನೆಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಪುಣ್ಯಸಂಪಾದನೆ ಮಾಡಿಕೊಳ್ಳಬಹುದು.

೫. ಕಾರ್ಯಾಲಯದ ಕಟ್ಟಡಕ್ಕೂ, ಗುರುಮಂದಿರ, ಪೂಜಾಮಂದಿರಕ್ಕೂ ಯಥೋಚಿತವಾಗಿ ಸಹಾಯವನ್ನು ಮಾಡಿ ಪುಣ್ಯವನ್ನು ಸಂಪಾದಿಸಿಕೊಳ್ಳಬಹುದು.

## ವೇದಾಂತದ ಕೆಚ್ಚನ್ನು ಬಿಚ್ಚಿತೋರಿಸುವ

# ಪುಟ್ಟಪುಸ್ತಕಗಳು

---

೧. **ವೇದಾಂತಬಾಲಬೋಧೆ :** ಆತ್ಮಸ್ವರೂಪವನ್ನು ಅವಸ್ಥಾತ್ರಯಪರೀಕ್ಷೆಯಿಂದ ಕಂಡುಕೊಳ್ಳುವ ಬಗೆಯನ್ನು ಪ್ರಶ್ನೋತ್ತರಗಳಿಂದ ತಿಳಿಸುವ ಗ್ರಂಥ.

೨. **ದೃಗ್ದೃಶ್ಯವಿವೇಕ :** ಅನುವಾದ, ವಿವರಣೆ, ಸಾರ, ಪರಿಶಿಷ್ಟ– ಇಷ್ಟನ್ನೂ ಈ ಸಂಸ್ಕರಣದಲ್ಲಿ ಸೇರಿಸಿದೆ. ಈ ಪ್ರಕರಣದಲ್ಲಿ ಆತ್ಮನು ಸರ್ವಸಾಕ್ಷಿಯೆಂಬುದನ್ನು ಉತ್ತಮರೀತಿಯಿಂದ ಪ್ರತಿಪಾದಿಸಿರುತ್ತದೆ. ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು ಗ್ರಂಥಕಾರರ ಆಶಯವನ್ನು ಹೊರಗೆಡಹುವ ಉತ್ತಮವಿವರಣೆಯನ್ನು ಬರೆದು ಶಾಂಕರಪ್ರಕ್ರಿಯೆಯನ್ನು ಹೋಲಿಸುವದಕ್ಕೆ ಅನುಕೂಲವಾದ ಪರಿಶಿಷ್ಟವನ್ನೂ ಪೀಠಿಕೆಯನ್ನೂ ಜೋಡಿಸಿರುತ್ತಾರೆ.

೩. **ಶಂಕರಮಹಾಮನನ :** ವೇದಾಂತಪ್ರಕ್ರಿಯೆಗಳ ಗುಟ್ಟನ್ನು ಶ್ರೀಶಂಕರಭಗವತ್ಪಾದರವರ ಅಮೃತವಾಣಿಯ ಆಧಾರದಿಂದಲೇ ಹೊರಗೆಡವುತ್ತದೆ. ಹೊಸದಾಗಿ ಓದುವವರಿಗೆ ವೇದಾಂತದ ಒಟ್ಟು ಉಪದೇಶವೂ ಆಗಲಿ ಓದಿರುವವರಿಗೆ ಅನುಸಂಧಾನಕ್ಕೆ ತಕ್ಕ ವಿಷಯಸಂಗ್ರಹವೂ ಇಲ್ಲಿ ದೊರಕುವದು.

೪. **ಆತ್ಮಬೋಧ :** ಆತ್ಮನು ನಿತ್ಯಶುದ್ಧಬುದ್ಧಮುಕ್ತಸ್ವಭಾವದವನೆಂಬುದನ್ನು ಬಗೆಬಗೆಯ ಉಪಮಾನಗಳಿಂದ ಸರಳಭಾಷೆಯಲ್ಲಿ ವಿವರಿಸಿದೆ. ಮೂಲಶ್ಲೋಕಗಳು, ಭಾವಾರ್ಥ, ಟಿಪ್ಪಣಿ, ಪರಿಶಿಷ್ಟ, ಶ್ಲೋಕಾನುಕ್ರಮಣಿಕೆ, ಪ್ರಮಾಣಸೂಚಿ – ಇಷ್ಟೂ ಇವೆ.

ಅಧ್ಯಾತ್ಮವಿಚಾರಕ್ಕೆ ಬೇಕಾಗುವ ಇಂಥ ಹಲವು ಪುಸ್ತಕಗಳು "ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಯ ಚಂದಾದಾರರಿಗೆ ರಿಯಾಯಿತಿ ಬೆಲೆಗೆ ದೊರೆಯುವವು. ಪತ್ರಿಕೆಯು ಪ್ರತಿವರ್ಷ ಸೆಪ್ಟೆಂಬರಿನಿಂದ ಪ್ರಾರಂಭವಾಗುವದು.

ಪುಸ್ತಕಗಳ ಪೂರ ಬೆಲೆಪಟ್ಟಿಗೆ ಬರೆದುಕೊಳ್ಳಿರಿ.

ಗ್ರಂಥಗಳಿಗೆಲ್ಲ ಅಂಚೆಯಹಾಸಲು ಬೇರೆ.

ಕಾರ್ಯದರ್ಶಿ,

**ಅಧ್ಯಾತ್ಮಪ್ರಕಾಶಕಾರ್ಯಾಲಯ,**

ಹೊಳೆನರಸೀಪುರ.

---

1-11-1983, 2000. ಅಧ್ಯಾತ್ಮಪ್ರಕಾಶಮುದ್ರಣಾಲಯ, ಹೊಳೆನರಸೀಪುರ.